ವಿಶ್ವವಾಣಿ

ವಿಶ್ವಾಸವೇ ವಿಶ್ವ

ವಿಶ್ವವಾಣಿ ಮುದ್ದು ಕೃಷ್ಣರ ಸಂಭ್ರಮ

ಪುಟ ತೆರೆದಂತೆ...

ಬುಟ್ಟಿಯೊಳಗಿನ ಹಾವು ಬರೋದ್ಯಾವಾಗ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ಸಂ.ಪುಟ | 6

ಉತ್ತರ ಕೊರಿಯಾ ಸಮಸ್ಯೆಗಳಿಗೆ ಉತ್ತರವೇನು?

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ

ಸಂ.ಗಮ | 7

ಮಾತಂದ್ರೆ ಮಾತು

ದರ್ಶನ್‌ಗೆ ಜೈಲಲ್ಲಿ ರಾಜಾತಿಥ್ಯ ನೀಡಿದ ಹಿನ್ನೆಲೆಯಲ್ಲಿ ಈಗ ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಿದ್ದಾರೆ. ಇಷ್ಟು ದಿನ ಸರ್ಕಾರ ಏನು ಕತ್ತೆ ಕಾಯುತ್ತಿತ್ತಾ ? ಇದನ್ನೆಲ್ಲ ನೋಡಿದರೆ ಸರ್ಕಾರವೇ ದರ್ಶನ್ ರಕ್ಷಣೆಗೆ ನಿಂತಂತಿದೆ. ಇದರಲ್ಲಿ ಕೆಲವು ರಾಜಕಾರಣಿಗಳ ಹಸ್ತಕ್ಷೇಪವೂ ಇದೆ. ಈ ವಿಚಾರವಾಗಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರಿಗೆ ಪತ್ರ ಬರೆಯುವೆ.

ಪ್ರಹ್ಲಾದ್ ಜೋಷಿ

ಕೇಂದ್ರ ಸಚಿವ

ದಾರಿದೀಪೋಕ್ತಿ

ಸಮಸ್ಯೆಗಳೇ ಇಲ್ಲದ ಬದುಕು ಅಂದ್ರೆ, ಪಾಠಗಳೇ ಇಲ್ಲದ ಶಾಲೆಗಳಂತೆ. ಬದುಕಿನಲ್ಲಿ ನಿತ್ಯವೂ ಒಂದಿಲ್ಲೊಂದು ಸಮಸ್ಯೆಗಳು, ಸಂಕಷ್ಟಗಳು ಎದುರಾಗುತ್ತಲೇ ಇರುತ್ತವೆ. ಅವೆಲ್ಲವನ್ನೂ ಸಂತಸ ಮತ್ತು ಧೈರ್ಯದಿಂದ ಎದುರಿಸುವುದು ಬದುಕಿನ ಸ್ವಾರಸ್ಯಗಳಲ್ಲೊಂದು ಎಂದು ಭಾವಿಸಬೇಕು.

ವಕ್ರತುಂಡೋಕ್ತಿ

ಫರ್ನಿಚರ್ ಧೂಳಿನಿಂದ ಆವೃತವಾಗಿದೆ ಅಂದ್ರೆ, ಅದರ ಮೇಲೆ ಯಾರೂ ಕುಳಿತಿಲ್ಲ ಎಂದರ್ಥ

ಫನ್‌ತರಂಗ

- ರಘುಪತಿ ಶೃಂಗೇರಿ -

ಬೆಳಿಗ್ಗೆ ಎದ್ದು ಒಂದು ಗಂಟೆ ಹಿಂದಿ ಕಲಿತಾ ಇದೀನಿ - ಕೇಂದ್ರ ಸಚಿವ



ಡಿ ಗ್ಯಾಂಗ್ ಸ್ಥಳಾಂತರಕ್ಕೆ ಸಿಎಂ ಸೂಚನೆ, ದಾಸನ ವಿರುದ್ಧ ಮತ್ತೆ ಎಫ್‌ಐಆರ್, ಹಿಂಡಲಗಾ ಜೈಲಿಗೆ ಶಿಫ್ಟ್ ಸಂಭವ

ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಸಚಿವ ಪರಂ ಭೇಟಿ, 9 ಅಧಿಕಾರಿಗಳ ಅಮಾನತು, ತನಿಖೆಗೆ ಆದೇಶ

ದರ್ಶನ್‌ಗೆ ರಾಜಾತಿಥ್ಯ: ಅಧಿಕಾರಿಗಳ ತಲೆದಂಡ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ರಾಜಾತಿಥ್ಯ ನೀಡುತ್ತಿರುವ ಫೋಟೋ ವೈರಲ್ ಆದ ಬೆನ್ನಲ್ಲೇ ನಟ ಸೇರಿದಂತೆ ಪ್ರಮುಖ ಕೈದಿಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ. ಪ್ರಕರಣ ಸಂಬಂಧ ದರ್ಶನ್ ಮತ್ತು ಫೋಟೋದಲ್ಲಿ ಕಂಡು ಬಂದಿರುವ ಇತರ ಮೂವರ ವಿರುದ್ಧ ಮೂರು ಎಫ್‌ಐಆರ್ ದಾಖಲಿಸಲಾಗಿದೆ. ರಾಜಾತಿಥ್ಯಕ್ಕೆ ಸಹಕರಿಸಿದ ಆರೋಪದಡಿ ಜೈಲಿನ ಸುಪರಿಂಟೆಂಡೆಂಟ್ ಸೇರಿದಂತೆ ಏಳು ಮಂದಿ ಪೊಲೀಸ್ ಸಿಬ್ಬಂದಿಗಳನ್ನು ಅಮಾನತು ಮಾಡಲಾಗಿದೆ. ಹಿರಿಯ ಪೊಲೀಸ್ ಅಧಿಕಾರಿ ಮೂಲಕ ತನಿಖೆ ನಡೆಸಿ ವರದಿ ನೀಡಲು ಗೃಹಸಚಿವ ಪರಮೇಶ್ವರ್ ಅವರು ಆದೇಶ ನೀಡಿದ್ದಾರೆ.

ದರ್ಶನ್, ರೌಡಿಶೀಟರ್‌ಗಳಾದ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ಆಪ್ತ ನಾಗರಾಜ್ ಜೊತೆ ಸಿಗರೇಟು ಸೇದುತ್ತ, ಕಾಫಿ ಕುಡಿಯುವ ಚಿತ್ರಗಳು ವೈರಲ್ ಆಗುತ್ತಿದ್ದಂತೆ, ಜೈಲು ಸುರಕ್ಷತೆ ಹಾಗೂ ಅಕ್ರಮದ ಬಗ್ಗೆ ಮತ್ತೆ ಚರ್ಚೆಗಳು ಮುನ್ನೆಲೆಗೆ ಬಂದಿವೆ. ದರ್ಶನ್ ಸೇರಿ ಪ್ರಭಾವಿ ಕೈದಿಗಳನ್ನು ಬೆಂಗಳೂರಿನ ಪರಪ್ಪನ ಅಗ್ರಹಾರದಿಂದ ಬೆಳಗಾವಿಯ ಹಿಂಡಲಗಾ ಜೈಲಿಗೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ಇದರ ಬೆನ್ನಲ್ಲೇ, ಒಂಬತ್ತು ಮಂದಿ ಏಳು ಅಧಿಕಾರಿಗಳನ್ನು ಅಮಾನತು ಮಾಡಿರುವ ರಾಜ್ಯ ಸರಕಾರ ಈ ಸಂಬಂಧ ಆಂತರಿಕ ತನಿಖೆ ನಡೆಸಲು ಆದೇಶ ಹೊರಡಿಸಿದೆ.

ಸೋಮವಾರ ಬೆಳಗ್ಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಡಿಜಿ ಅಲೋಕ್ ಮೋಹನ್, ಕಾರಾಗೃಹಗಳ ಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಸೇರಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಈ ವೇಳೆ ಪರಪ್ಪನ ಅಗ್ರಹಾರದಲ್ಲಿ ನಡೆದಿರುವ ಈ ಘಟನೆಗೆ ಸಂಬಂಧಿಸಿದಂತೆ ಅಧಿಕಾರಿಗಳನ್ನು ತರಾಟೆಗೆ ತಗೆದುಕೊಂಡಿದರು. ಸಭೆಯ ಬಳಿಕ ಅಧಿಕಾರಿಗಳೊಂದಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಪ್ಪನ ಅಗ್ರಹಾರದಲ್ಲಿ ಕೆಲವು ರೌಡಿಗಳು ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಕೆಲವು ರೌಡಿಗಳು ಜೈಲಿನಿಂದಲೇ ಕೊಲೆ ಸುಪಾರಿ ಸೇರಿದಂತೆ ಅಕ್ರಮದಲ್ಲಿ ತೊಡಗಿದ್ದಾರೆ. ಇಲ್ಲಿಂದ ಬೇರೆಡೆ ಕಳಿಸಬೇಕೆಂದು ಕೋರಿ ಇಲಾಖೆಗೆ ಪತ್ರ ಬರೆಯಲಾಗಿತ್ತು. ಈಗ ಆ ರೌಡಿಗಳ ವಿಲಾಸಿ ಜೀವನದ ಜತೆಗೆ ದರ್ಶನ್ ಕೂಡ ತಳುಕು ಹಾಕಿಕೊಂಡಿದ್ದಾನೆ. ಇದರ ಫೋಟೋ ವಿಡಿಯೊಗಳೂ ಹರಿದಾಡುತ್ತಿವೆ.

ಲೀಕ್ ತಡೆಯಲು ಡೀಲ್

ಜೈಲಿನಲ್ಲಿ ದರ್ಶನ್ ಪಾರ್ಟಿಯ ಫೋಟೋ ತೆಗೆದವನು ರೌಡಿಶೀಟರ್ ವೇಲು ಎನ್ನಲಾಗಿದೆ. ಈತ ತನ್ನ ಪತ್ನಿ ಮತ್ತು ಮೈಸೂರಿನಲ್ಲಿರುವ ದರ್ಶನ್ ಫ್ಯಾನ್ಸ್‌ಗೆ ಕಳಿಸಿದ್ದ. ಅಲ್ಲಿಂದ ಚಾಮರಾಜನಗರದ ಕ್ರೈಂ ಪೊಲೀಸ್ ಒಬ್ಬರಿಗೆ ಫೋಟೋ ತಲುಪಿತ್ತು. ಈ ಚಿತ್ರ ಲೀಕ್ ಆಗದಂತೆ ತಡೆಯಲು ಲಕ್ಷಾಂತರ ರುಪಾಯಿ ಡೀಲ್ ಸಹ ನಡೆದಿತ್ತು ಎಂದು ಗೊತ್ತಾಗಿದೆ. ಸೋರಿಕೆ ಆದ ಬೆನ್ನಲ್ಲೇ ಎಐಜಿ ಆನಂದ್ ರೆಡ್ಡಿ ಕೈದಿಗಳು ಹಾಗೂ

ಅಧಿಕಾರಿಗಳನ್ನು ತಡರಾತ್ರಿವರೆಗೂ ವಿಚಾರಣೆ ನಡೆಸಿದ್ದಾರೆ. ತನಿಖೆ ನಡೆಸಿ ಪ್ರಕರಣದ ಬಗ್ಗೆ ಡಿಜಿಗೆ ವರದಿ ಸಲ್ಲಿಸಿದ್ದಾರೆ.

ದರ್ಶನ್, ನಾಗ ಸಿಗರೇಟ್ ಪಾರ್ಟಿ ಮಾಡಿರುವ ಫೋಟೋ ಯಾವತ್ತಿನದು, ಯಾರು ಫೋಟೋ ತೆಗೆದದ್ದು ಎಂಬ ಮಾಹಿತಿ ಕಲೆಹಾಕಿದ್ದಾರೆ. ಇದೇ ವೇಳೆ ಫೋಟೋ ಸೋರಿಕೆ ಮಾಡಿದ ಸಿಟ್ಟಿನಲ್ಲಿ ವಿಲ್ಸನ್ ಗಾರ್ಡನ್ ನಾಗ ಜೈಲಿನಲ್ಲಿಯೇ ವೇಲು ಮೇಲೆ ಹಲ್ಲೆ ನಡೆಸಿದ್ದಾನೆಂಬ ಮಾತುಗಳು ಕೇಳಿ ಬಂದಿವೆ.

ಹಿಂಡಲಗಾಕ್ಕೆ ಶಿಫ್ಟ್

ಬೆಂಗಳೂರಿನ ಕಾರಾಗೃಹದಲ್ಲಿ ದರ್ಶನ್ ಇದ್ದರೆ ಭೇಟಿ ನೀಡುವವರ ಹಾಗೂ ಈ ರೀತಿ ಕರ್ತವ್ಯಲೋಪವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ಬೆಳಗಾವಿ ಹಿಂಡಲಗಾ ಜೈಲಿಗೆ ಶಿಫ್ಟ್ ಮಾಡಲು ತೀರ್ಮಾನಿಸಲಾಗಿದೆ. ದಶಕಗಳ ಇತಿಹಾಸ ಹೊಂದಿರುವ ಬೆಳಗಾವಿ ಹಿಂಡಲಗಾ ಕಾರಾ ಗೃಹದಲ್ಲಿ ಸದ್ಯ ಕುಖ್ಯಾತ ರೌಡಿಗಳನ್ನು ಬಂಧಿಸಲಾಗಿದೆ.

ದರ್ಶನ್ ಸೇರಿ ನಾಲ್ವರ ಮೇಲೆ ಎಫ್‌ಐಆರ್

ಜೈಲಿನಲ್ಲಿ ನಟ ದರ್ಶನ್‌ಗೆ ರಾಜಾತಿಥ್ಯ ವಿಚಾರಕ್ಕೆ ಸಂಬಂಧಿಸಿ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಎಫ್‌ಐಆರ್ ದಾಖಲಾಗಿವೆ. ಜೈಲು ಸೂಪರಿಂಟೆಂಡೆಂಟ್ ದೂರಿನ ಮೇರೆಗೆ ನಟ ದರ್ಶನ್, ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ಮ್ಯಾನೇಜರ್ ನಾಗರಾಜ್ ಮೇಲೆ ಪ್ರಕರಣ ದಾಖಲಾಗಿದೆ. ಜೈಲಿನಲ್ಲಿ ಸಿಗರೇಟ್ ಕೊಟ್ಟಿದ್ದಕ್ಕೆ ಹಾಗೂ ವಿಡಿಯೋ ಮಾಡಿಕೊಂಡು ವೈರಲ್ ಮಾಡಿದ್ದಕ್ಕೆ, ಅಲ್ಲದೇ ಸಿಸಿಬಿ ಪೊಲೀಸರ ದಾಳಿ ವೇಳೆ ಕೆಲವು ವಸ್ತುಗಳನ್ನು ಮರೆಮಾಚಿದ್ದಕ್ಕೆ ಸಂಬಂಧಿಸಿ ಒಟ್ಟು ಮೂರು ಪ್ರಕರಣಗಳು ಪರಪ್ಪನ ಅಗ್ರಹಾರ ಠಾಣೆಯಲ್ಲಿ ದಾಖಲಾಗಿವೆ.

ಅಮಾನತಾದವರು

ಕಾರಾಗೃಹ ಮುಖ್ಯ ಅಧೀಕ್ಷಕ ಶೇಷಮೂರ್ತಿ, ಅಧೀಕ್ಷಕ ಮಲ್ಲಿಕಾರ್ಜುನ ಸ್ವಾಮಿ, ಜೈಲರ್‌ಗಳಾದ ಶರಣ ಬಸಪ್ಪ ಅಮಂಗಡ್, ಪ್ರಭು ಎಸ್ ಖಂಡೇಲ್‌ವಾಲ್, ಸಹಾಯಕ ಜೈಲರ್‌ಗಳಾದ ಎಲ್.ಎಸ್.ಕುಪ್ಪೇಸ್ವಾಮಿ, ಶ್ರೀಕಾಂತ್ ತಳವಾರ, ಹೆಡ್ ವಾರ್ಡರ್‌ಗಳಾದ ವೆಂಕಪ್ಪ, ಸಂಪತ್ ಕುಮಾರ್ ಮತ್ತು ವಾರ್ಡರ್ ಕೆ.ಬಸಪ್ಪ

ವಿಡಿಯೋ ಕಾಲ್-ಬಂಧನ

ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಜತೆ ವಿಡಿಯೋ ಕರೆ ಮೂಲಕ ಮಾತನಾಡಿದ ಸತ್ಯನನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಮಂಡ್ಯದಲ್ಲಿ ವಶಕ್ಕೆ ಪಡೆದು ಬೆಂಗಳೂರಿಗೆ ಕರೆತಂದು ವಿಚಾರಣೆ ನಡೆಸಿದ್ದಾರೆ. ವಿಚಾರಣಾಧೀನ ಕೈದಿಯಾಗಿರುವ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಿನೊಳಗೆ ಅಕ್ರಮವಾಗಿ ಸೌಕರ್ಯ ಒದಗಿಸಲಾಗಿದೆ.

ಏಳು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಪರಿಶೀಲಿಸುವಂತೆ ಗೃಹ ಸಚಿವರಿಗೆ ಸೂಚಿಸಿದ್ದು, ಅವರ ವರದಿ ಆಧಾರದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು. ದರ್ಶನ್ ಬೇರೆ ಜೈಲಿಗೆ ಸ್ಥಳಾಂತರ ಮಾಡಬೇಕಾ ಬೇಡವೇ ಎಂಬ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗುವುದು. ವಿಐಪಿ ಆರೋಪಿಗಳ ಸೇವೆಗೆ ರೌಡಿಶೀಟರ್‌ಗಳನ್ನು ಬಳಕೆ ಮಾಡಿಕೊಳ್ಳುತ್ತಿರುವುದು ಸೇರಿದಂತೆ ಯಾವುದೇ ರೀತಿಯ ತಪ್ಪು ಕಂಡುಬಂದರೂ ಕ್ರಮ ಜರುಗಲಿದೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯದ ಎಲ್ಲಾ ಜೈಲುಗಳಲ್ಲಿ ಸಿಸಿಟಿವಿ, ಜಾಮರ್ ಅಳವಡಿಸಲಾಗಿದೆ. ಹೀಗಿದ್ದರೂ ಇಂತಹ ಘಟನೆಗಳು ನಡೆಯುತ್ತವೆ ಎಂದಾದರೆ ಅಧಿಕಾರಿಗಳು ಕಟ್ಟು ನಿಟ್ಟಾಗಿ ಕೆಲಸ ಮಾಡಬೇಕಾಗಿದೆ. ಇಂತಹ ಘಟನೆಗಳಿಗೆ ಕಾರಣರಾ ದವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಸಿಬ್ಬಂದಿ, ಅಧಿಕಾರಿ ಎಂದು ತಾರತಮ್ಯ ಮಾಡಲ್ಲ.

- ಪರಮೇಶ್ವರ್, ಗೃಹಸಚಿವ

ವೈಟ್ನರ್ ಆರೋಪಕ್ಕೆ ಮುಖ್ಯಮಂತ್ರಿ ಉತ್ತರ

ವೈಟ್ನರ್ ಹಿಂದಿರುವ ಅಕ್ಷರಗಳ ಬಗ್ಗೆ ವಿಡಿಯೋ ಸಮೇತ ದಾಖಲೆ ನೀಡಿದ ಸಿದ್ದರಾಮಯ್ಯ | ದೇವನೂರು 3ನೇ ಹಂತದಲ್ಲಿ ನಿವೇಶನ ನೀಡುವಂತೆ ಕೋರಿದ್ದ ಸಿಎಂ ಪತ್ನಿ, ದಾಖಲೆ ಬಹಿರಂಗ

ಬೆಂಗಳೂರು: ಭಾರಿ ವಿವಾದ ಸೃಷ್ಟಿಸಿದ್ದ ವೈಟ್ನರ್ ಪ್ರಕರಣದಲ್ಲಿ ಇದೀಗ ದಾಖಲೆ ಬಿಡುಗಡೆ ಗೊಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ಹೆಸರಿಗೆ ಕಪ್ಪುಮಸಿ ಬಳಿಯ ಬೇಕೆಂಬ ಕಾರಣಕ್ಕೆ ಏನೆಲ್ಲ ಪ್ರಯತ್ನ ಮಾಡುತ್ತಿ ದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಮುಡಾ ಪರಿಹಾರಕ್ಕೆ ಅರ್ಜಿ ಸಲ್ಲಿಸಿರುವ ಸಿದ್ದರಾಮಯ್ಯ ಪತ್ನಿ ಅವರು ವಿಜಯನಗರ ದಲ್ಲಿಯೇ ಬೇಕೆಂದು ಮನವಿ ಮಾಡಿದ್ದಾರೆ. ಆದರೆ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಮೂಲ ದಾಖಲೆಗೆ ವೈಟ್ನರ್ ಹಚ್ಚಿ, ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ಮಾಡಲಾಗಿದೆ ಎನ್ನುವ ಆರೋಪವನ್ನು ಬಿಜೆಪಿ-ಜೆಡಿಎಸ್ ನಾಯಕರು ಮಾಡಿದ್ದರು. ಆದರೀಗ ಈ ಆರೋಪಕ್ಕೆ ತಿರು ಗೇಟು ಕೊಟ್ಟಿರುವ ಸಿಎಂ ಸಿದ್ದರಾಮಯ್ಯ ಅವರು, ವೈಟ್ನರ್ ಹಚ್ಚಿರುವ ಹಿಂದೆ ಯಾವ ಅಕ್ಷರಗಳಿವೆ ಎನ್ನುವ ವಿಡಿಯೊ ಬಿಡುಗಡೆ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆಯಾ ಗಿರುವ ಈ ವಿಡಿಯೊದಲ್ಲಿ ವೈಟ್ನರ್ ಹಚ್ಚಿರುವ ಜಾಗದಲ್ಲಿ 'ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ ಪ್ರಾಧಿಕಾ ರವು ಅಭಿವೃದ್ಧಿ ಪಡಿಸಿದ ಸಮಾನಾಂತರ ಬಡಾವಣೆಯಲ್ಲಿ' ಎಂದು ಬರೆದಿದ್ದಾರೆ. ಎಲ್ಲಿಯೂ ವಿಜಯನಗರ ವೆಂದು ನಮೂದಿ ಸಿಲ್ಲ ಎನ್ನುವುದು ಇದೀಗ ಬಹಿರಂಗವಾಗಿದೆ. ವಿಡಿಯೊದಲ್ಲಿ ಮೂಲ ದಾಖಲೆಯಲ್ಲಿರುವ ವೈಟ್ನರ್ ಮೇಲೆ ಟಾರ್ಚ್ ಲೈಟ್ ಬಿಡಲಾಗಿದೆ. ಈ ವೇಳೆ ವೈಟ್ನರ್ ಹಿಂದೆ ದೇವನೂರು ಎಂದು ಬರೆದಿರುವುದು ಸ್ಪಷ್ಟ ವಾಗಿ ಕಾಣುತ್ತಿದೆ. ಈ ಮೂಲಕ ಸಿದ್ದರಾ ಮಯ್ಯ ಅವರೇ ವಿಜಯನಗರ ಬಡಾವಣೆ ಯಲ್ಲಿ ನಿವೇಶನ ಕೇಳಿದ್ದರೆಂಬ ಆರೋಪಕ್ಕೆ ಸಿಎಂ ಉತ್ತರ ನೀಡಿದ್ದಾರೆ.

ದ್ವೇಷದ ಕನ್ನಡಕ ಬಿಚ್ಚಿಟ್ಟು ನೋಡಿ : ಸಿಎಂ

ಸಾಮಾಜಿಕ ಜಾಲತಾಣದಲ್ಲಿ ಈ ವಿಡಿಯೊ ಹಂಚಿಕೊಂಡಿರುವ ಸಿಎಂ ಸಿದ್ದರಾಮಯ್ಯ ಅವರು ಪ್ರತಿಪಕ್ಷಗಳ ವಿರುದ್ಧ ಕಿಡಿಕಾರಿದ್ದಾರೆ. ಅನವಶ್ಯಕವಾಗಿ ನನಗೆ ಮಸಿ ಬಳಿಯುವ ಪ್ರಯತ್ನ ಈಡೇರಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ. ಮುಡಾ ಅಕ್ರಮವಾಗಿ ಸ್ವಾದೀನಪಡಿಸಿಕೊಂಡ ನಮ್ಮ ಕುಟುಂಬದ ಜಮೀನಿಗೆ ಬದಲಿ ಭೂಮಿ ನೀಡುವಂತೆ ನನ್ನ ಪತ್ನಿ ಸಲ್ಲಿಸಿದ್ದ ಅರ್ಜಿಯಲ್ಲಿ ನಾಲ್ಕೈದು ಪದಗಳಿಗೆ ವೈಟ್ನರ್ ಹಚ್ಚಿದ್ದನ್ನೇ ಮಹಾಪರಾಧವೆಂಬಂತೆ ಗಂಟಲು ಹರಿದುಕೊಂಡ ಬಿಜೆಪಿ - ಜೆಡಿಎಸ್ ನಾಯಕರೇ, ವೈಟ್ನರ್ ಹಿಂದಿರುವ ಅಕ್ಷರಗಳೇನು ಎಂಬುದು ಈ ವಿಡಿಯೊದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ, ನಿಮ್ಮ ದ್ವೇಷದ ಕನ್ನಡಕ ಕಳಚಿಟ್ಟು ಸರಿಯಾಗಿ ಕಣ್ಣುಬಿಟ್ಟು ನೋಡಿ ಎಂದು ಟೀಕಿಸಿದ್ದಾರೆ.

ನನ್ನ ಪತ್ನಿ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ ಪ್ರಾಧಿಕಾರ ಅಭಿವೃದ್ಧಿಪಡಿಸಿದ ಸಮಾನಾಂತರ ಬಡಾವಣೆ ಯಲ್ಲಿ ನಿವೇಶನ ಕೇಳಿದ್ದರು. ಅಲ್ಲಿ ನಿವೇಶನ ಗಳು ಲಭ್ಯವಿರದ ಕಾರಣಕ್ಕೆ ದೇವನೂರು 3ನೇ ಹಂತದ ಬಡಾವಣೆ ಯಲ್ಲಿ ಅಥವಾ ನಂತರ ಎಂಬ ನಾಲ್ಕೈದು ಪದ 'ಗಳಿಗೆ ವೈಟ್ನರ್ ಹಾಕಿ, ಪ್ರಾಧಿಕಾರ ಅಭಿವೃದ್ಧಿ ಪಡಿಸಿದ ಸಮಾನಂತರ ಬಡಾವಣೆಯಲ್ಲಿ ನಿವೇಶನ ನೀಡಬೇಕೆಂಬ ಮನವಿ ಮಾಡಿದ್ದಾರೆ. ಇದರಲ್ಲಿ ಟಿಪ್ಪಣಿಯೂ ಇಲ್ಲ, ಆದೇಶವೂ ಇಲ್ಲ, ಅಪ್ಪಣೆಯೂ ಇಲ್ಲ ಸಿಎಂ ಹೇಳಿದರು.



ಕಪೋಲಕಲ್ಪಿತ ಕತೆಗಳ ಮೂಲಕ ನನ್ನನ್ನು ಹಾಗೂ ನನ್ನ ಕುಟುಂಬವನ್ನು ವಿನಾಕಾರಣ ಅಪರಾಧಿಗಳಂತೆ ಬಿಂಬಿಸಿ ಬಾಯಿಗೆ ಬಂದಂತೆ ಮಾತನಾಡಿರುವ ಬಿಜೆಪಿ - ಜೆಡಿಎಸ್ ಪಕ್ಷಗಳ ವಿವೇಕಶೂನ್ಯ ನಾಯಕರು ಇಂದು ಜನರೆದುರು ಬೆತ್ತಲಾಗಿದ್ದಾರೆ.ಸತ್ಯ ಹಾಗೆಯೇ, ಅರಿವಿಗೆ ಬರುವುದು ಸ್ವಲ್ಪ ತಡವಾಗಬಹುದು, ಆದರೆ ಅಂತಿಮ ಗೆಲುವು ಸತ್ಯದ್ದೇ ಆಗಿರುತ್ತದೆ ಎಂದು ಟಾಂಗ್ ಕೊಟ್ಟಿದ್ದಾರೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೂವರು ಅಧಿಕಾರಿಗಳು ಲೋಕಾ ಬಲೆಗೆ

ಚಿಕ್ಕನಾಯಕನಹಳ್ಳಿ: ಇಲ್ಲಿನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ವಿಭಾಗ ಕಚೇರಿ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು 1.50 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದ ಮೂವರು ಎಂಜಿನಿಯರ್‌ಗಳನ್ನು ಬಲೆಗೆ ಬೀಳಿಸಿದ್ದಾರೆ.

ಎಇಇ ಉಮಾ ಮಹೇಶ್, ಜೆಇ ಶಶಿಕುಮಾರ, ಹಾಗು ಕಿರಣ್ ಲಂಚ ಪಡೆಯುತ್ತಿದ್ದರು. ಒಂದೇ ಪ್ರಕರಣದಲ್ಲಿ ಮೂರು ಮಂದಿ ಅಧಿಕಾರಿಗಳನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಗುತ್ತಿಗೆದಾರ ಎನ್.ಸಿ.ಚಿಕ್ಕೇಗೌಡ ಜೆಜೆಎಂ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದರೂ ಬಿಲ್ ಕೊಡಲು ಅಧಿಕಾರಿಗಳು ಸತಾಯಿಸಿ 1.5 ಲಕ್ಷ ರೂ. ಹಣಕ್ಕೆ ಬೇಡಿಕೆಯಿಟ್ಟಿದ್ದರು. ಲಂಚ ನೀಡಲು ನಿರಾಕರಿಸಿದ್ದ ಚಿಕ್ಕೇಗೌಡ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಲೋಕಾಯುಕ್ತ ಡಿವೈಎಸ್ಪಿ ಉಮಾಶಂಕರ, ರಾಮಕೃಷ್ಣಪ್ಪ ನೇತೃತ್ವದಲ್ಲಿ ತಂಡ ದಾಳಿ ನಡೆಸಿದೆ.

ಉಡುಪಿಯ ಕೃಷ್ಣ ಜನ್ಮಾಷ್ಟಮಿ ವೇಳೆ ನೂರಾರು ಹುಲಿವೇಷಧಾರಿಗಳು ತಮ್ಮ ಪ್ರದರ್ಶನದಿಂದ ಜನಮನ ಗೆದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-3 ಫಲಿತಾಂಶ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು (KSEAB) ಎಸ್‌ಎಸ್‌ಎಲ್ಸಿ ಪರೀಕ್ಷೆ-3ರ ಫಲಿತಾಂಶವನ್ನು ಸೋಮವಾರ ಪ್ರಕಟಿಸಿದೆ. https://karresults.nic.in ಜಾಲತಾಣದಲ್ಲಿ ಫಲಿತಾಂಶ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ಫಲಿತಾಂಶ ಪರಿಶೀಲಿಸಲು ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕ, ವಿವರಗಳನ್ನು ನಮೂದಿಸಬೇಕಾಗುತ್ತದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ-3ನ್ನು ಆಗಸ್ಟ್ 2 ರಿಂದ 9ರವರೆಗೆ ನಡೆಸಲಾಗಿತ್ತು. ಇದಕ್ಕೂ ಮೊದಲು, ಎಸ್‌ಎಸ್‌ಎಲ್‌ಸಿ ಪರೀಕ್ಷೆ 2 ಮತ್ತು 1ರ ಫಲಿತಾಂಶಗಳನ್ನು ಜುಲೈ 10 ಮತ್ತು ಮೇ 9 ರಂದು ಪ್ರಕಟಿಸಲಾಗಿದೆ.

ತಪಾಸಣೆ ನೆಪದಲ್ಲಿ ಕೆಳಗಿಳಿಸಿ ಬಸ್ ಪ್ರಯಾಣಿಕರ ಮೇಲೆ ಗುಂಡಿನ ದಾಳಿ

ಬಲೂಚಿಸ್ತಾನದಲ್ಲಿ ಗುಂಡಿನ ಮೊರೆತ : 33 ಮಂದಿ ಸಾವು

ಬಲೂಚಿಸ್ತಾನ: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಮುಸಾಖೇಲ್ ಮತ್ತು ಕಲಾತ್ ಜಿಲ್ಲೆಗಳಲ್ಲಿ ಸೋಮವಾರ ಒಂದೇ ದಿನ ನಡೆದ ಉಗ್ರ ದಾಳಿಗಳಲ್ಲಿ 33 ಜನರು ಹತರಾಗಿದ್ದಾರೆ.

ಮುಸಾಖೇಲ್ ಜಿಲ್ಲೆಯಲ್ಲಿ ಬಸ್ ತಡೆದು ನಿಲ್ಲಿಸಿದ ಉಗ್ರರು, ತಪಾಸಣೆ ನೆಪದಲ್ಲಿ ಪ್ರಯಾಣಿಕರನ್ನು ಕೆಳಗಿಳಿಸಿ 23 ಮಂದಿಗೆ ಗುಂಡಿಕ್ಕಿ ಕೊಂದಿದ್ದಾರೆ.

ಗುರುತಿನ ಚೀಟಿ ಪರಿಶೀಲಿಸಿದ ಬಳಿಕ ಪಂಜಾಬ್ ಪ್ರಾಂತ್ಯದ 23 ಜನರನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿದ್ದಾರೆ. ನಂತರ, ತಾವೇ ತಡೆದು ನಿಲ್ಲಿಸಿದ್ದ ಹತ್ತು ವಾಹನಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾರೆ. ಬಲೂಚಿಸ್ತಾನದ ಮತ್ತೊಂದೆಡೆ ಕಲಾತ್ ಜಿಲ್ಲೆಯಲ್ಲಿ ಬಂದೂಕುಧಾರಿ ಉಗ್ರರು 10 ಜನರಿಗೆ ಗುಂಡಿಕ್ಕಿದ್ದಾರೆ.

ಈ ದುಷ್ಕೃತ್ಯಕ್ಕೆ ಬಲೂಚ್ ವಿಮೋಚನಾ ಸೇನೆಯ ಉಗ್ರರೇ ಕಾರಣ ಎಂದು ಪಾಕ್ ಅಧಿಕಾರಿಗಳು ಶಂಕಿಸಿದ್ದಾರೆ. ಈ ದಾಳಿಯನ್ನು ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ತೀವ್ರವಾಗಿ ಖಂಡಿಸಿದ್ದಾರೆ.

80ಕ್ಕೂ ಹೆಚ್ಚು ಕಳವು ಪ್ರಕರಣಗಳಲ್ಲಿ ಭಾಗಿಯಾದ ಮೈಸೂರಿನ ಒಂದೇ ಕುಟುಂಬದ ನಾಲ್ವರ ಸೆರೆ

ಅಪ್ಪ-ಮಕ್ಕಳಿಗೆ ಕಳ್ಳತನವೇ ಕಸುಬು

ಮೈಸೂರು: ಕಳ್ಳತನವನ್ನೇ ಕಸುಬಾಗಿಸಿಕೊಂಡ ಮೈಸೂರಿನ ಒಂದೇ ಕುಟುಂಬದ ನಾಲ್ವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು ಇವರು 80ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿರುವುದನ್ನು ಬಯಲಿಗೆಳೆದಿದ್ದಾರೆ. ಬಂಧಿತರಿಂದ 45 ಲಕ್ಷ ಮೌಲ್ಯದ ಚಿನ್ನಾಭರಣ ಸೇರಿದಂತೆ ಇತರ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ, ತನಿಖಾ ದೃಷ್ಟಿಯಿಂದ ಆರೋಪಿಗಳ ಹೆಸರನ್ನು ಬಹಿರಂಗಪಡಿಲಾಗದು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಬಂಧಿತರಲ್ಲಿ ಅಪ್ಪ-ಮಕ್ಕಳಿದ್ದು ಮೈಸೂರು, ಮಂಡ್ಯ, ದಕ್ಷಿಣ ಕನ್ನಡ, ಕೊಡಗು ಭಾಗದಲ್ಲಿ ನಡೆದಿರುವ 80ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿರುವ ಮಾಹಿತಿ ಇದೆ. ಈ ಒಂದೇ ಕುಟುಂಬದ ಕಳ್ಳರ ಜಾಲ ಭೇದಿಸಿದ ನಗರ ಸಿಸಿಬಿ ಪೊಲೀಸರು, ಆರೋಪಿಗಳಿಂದ 45 ಲಕ್ಷ ಮೌಲ್ಯದ ಚಿನ್ನಾಭರಣ, 3 ಬೈಕ್, 2 ಪಿಸ್ತೂಲ್, ಆರೋಪಿಗಳಿಂದ 4.6 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಸೀಮಾ ಲಾಟ್ಕರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಗರದ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಗಳ್ಳತನ ಪ್ರಕರಣದಲ್ಲಿ ಬಂಧಿತ ಆರೋಪಿಯೊಬ್ಬ ನೀಡಿದ ಸುಳಿವಿನ ಮೇರೆಗೆ ಒಂದೇ ಕುಟುಂಬದ ಅಪ್ಪ-ಮಕ್ಕಳ ಸರಣಿ ಕಳ್ಳತನ ಪ್ರಕರಣಗಳು ಬೆಳಕಿಗೆ ಬಂದಿದೆ. ಇವರು ಮೈಸೂರು ನಗರ, ಮೈಸೂರು ಜಿಲ್ಲೆ, ಮಂಡ್ಯ, ದಕ್ಷಿಣ ಕನ್ನಡ, ಕೊಡಗು ಭಾಗಗಳಲ್ಲಿ ಕಳ್ಳತನ, ಸುಲಿಗೆ ಹಾಗೂ ವಾಹನ ಕಳವು ಪ್ರಕರಣಗಳಲ್ಲಿ ಭಾಗಿಯಾಗಿರುವ ಮಾಹಿತಿ ಲಭ್ಯವಾಗಿದೆ. ಈ ನಾಲ್ವರು ಆರೋಪಿಗಳಲ್ಲಿ ಒಬ್ಬನ ಮೇಲೆ 3 ಪ್ರಕರಣ, ಮತ್ತೊರ್ವನ ಮೇಲೆ 36 ಪ್ರಕರಣ ಹಾಗೂ ಇನ್ನೊಬ್ಬನ ಮೇಲೆ 17 ಪ್ರಕರಣಗಳು ದಾಖಲಾಗಿವೆ. ಜೊತೆಗೆ ಇವರ ಮೇಲೆ ಗಾಂಜಾ ಸಾಗಾಟದ ಆರೋಪದ ಮೇಲೆ 18 ಪ್ರಕರಣಗಳು ದಾಖಲಾಗಿವೆ. ಈ ಎಲ್ಲ ಪ್ರಕರಣಗಳ ಕುರಿತು ತನಿಖೆ ನಡೆಯುತ್ತಿದ್ದು, ಈ ದೃಷ್ಟಿಯಿಂದ ಆರೋಪಿಗಳ ಹೆಸರನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದರು.

6 ತಿಂಗಳಲ್ಲಿ 32 ಕೋಟಿ ವಂಚನೆ

ಸುಲಭವಾಗಿ ಹಣ ಮಾಡುವ ಆಸೆಗೆ ಬಿದ್ದು ಹಲವರು ಹಣ ಕಳೆದುಕೊಳ್ಳುತ್ತಿದ್ದಾರೆ. ನಗರದಲ್ಲಿ ಕೇವಲ ಆರು ತಿಂಗಳಲ್ಲಿ ಆನ್‌ಲೈನ್ ಟ್ರೇಡಿಂಗ್ ಸೇರಿದಂತೆ 61 ಪ್ರಕರಣಗಳಲ್ಲಿ 32 ಕೋಟಿ ರೂ. ಕಳೆದುಕೊಂಡಿರುವುದು ತನಿಖೆಯಿಂದ ತಿಳಿದು ಬಂದಿದೆ. ಹಣ ಕಳೆದುಕೊಂಡವರಲ್ಲಿ ವಿದ್ಯಾವಂತರೇ ಹೆಚ್ಚಿದ್ದಾರೆ. ಈ ಬಗ್ಗೆ ನಗರದ ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸುಲಭವಾಗಿ ಹಣ ಗಳಿಸುವ, ಟ್ರೇಡಿಂಗ್‌ನಲ್ಲಿ ಭಾಗಿಯಾಗಿ ಹಣ ದ್ವಿಗುಣ ಮಾಡುವ ಆಸೆಗೆ ಬಿದ್ದು ಹಲವರು ತಮ್ಮ ಜೇಬು ಖಾಲಿ ಮಾಡಿಕೊಂಡಿದ್ದಾರೆ. ಯುವಕರು ಈ ಬಗ್ಗೆ ಎಚ್ಚರ ವಹಿಸುವಂತೆ ಕಮಿಷನರ್ ಇದೇ ವೇಳೆ ಸೈಬರ್ ವಂಚನೆ ಬಗ್ಗೆಯೂ ಮಾಹಿತಿ ನೀಡಿದರು.

ಉಕ್ರೇನ್ ಮೇಲೆ ರಷ್ಯಾ ದಾಳಿ ಬಿರುಸು: ದಾಳಿಗೆ ಬೆಚ್ಚಿದ ಕೀವ್

ಕೀವ್: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಬಿಸಿ ಕರಗುವ ಬದಲಾಗಿ ದಿನೇ ದಿನೇ ಹೆಚ್ಚುತ್ತಲೇ ಇದೆ. ಪ್ರಧಾನಿ ನರೇಂದ್ರ ಮೋದಿ ಅವರು ಎರಡೂ ದೇಶಗಳಿಗೆ ಕೆಲ ವಾರಗಳ ಅಂತರದಲ್ಲಿ ಭೇಟಿ ನೀಡಿ ಶಾಂತಿ ಮಂತ್ರ ಪಠಿಸಿದ್ದರೂ ವ್ಲಾದಿಮಿರ್ ಪುಟಿನ್ ಮತ್ತು ವ್ಲಾದಿಮಿರ್ ಝೆಲೆನ್‌ಸ್ಕಿ ನಡುವಿನ ಆಕ್ರೋಶ, ಯುದ್ಧಪಿಪಾಸೆ ತಗ್ಗಿಲ್ಲ. ರಷ್ಯಾದ ಬಹುಮಹಡಿ ಕಟ್ಟಡವೊಂದರ ಮೇಲೆ ಉಕ್ರೇನ್ ಡ್ರೋಣ್ ದಾಳಿ ನಡೆಸಿದ್ದಕ್ಕೆ ಪ್ರತಿ ಕಾರವಾಗಿ ರಷ್ಯಾ ಕ್ಷಿಪಣಿಗಳ ದಾಳಿ ಮೂಲಕ ತಿರುಗೇಟು ನೀಡಿದೆ. ಈ ತೀಕ್ಷ್ಣ ದಾಳಿಯಿಂದ ಉಕ್ರೇನ್ ರಾಜಧಾನಿ ಕೀವ್ ಅಕ್ಷರಶಃ ನಡುಗಿ ಹೋಗಿದೆ.

ಲಡಾಖ್‌ನಲ್ಲಿ 5 ಹೊಸ ಜಿಲ್ಲೆ

ನವದೆಹಲಿ: ಜಮ್ಮು-ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಹೊತ್ತಿನಲ್ಲೇ ಲಡಾಖ್ ಪ್ರಾಂತ್ಯದಲ್ಲಿ ಐದು ಹೊಸ ಜಿಲ್ಲೆ ರಚಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಪ್ರಕಟಿಸಿದ್ದಾರೆ.ಜನಸ್ಕಾರ್, ದ್ರಾಸ್, ಶಾಮ್, ನುಬ್ರಾ ಮತ್ತು ಚಾಂಗ್ ಥಾಂಗ್ ಎಂದು ಹೊಸಜಿಲ್ಲೆಗಳಿಗೆ ನಾಮಕರಣ ಮಾಡಲಾಗಿದೆ ಎಂದು ಶಾ ತಿಳಿಸಿದ್ದಾರೆ. ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ಲಡಾಖ್ ನಿರ್ಮಿಸುವ ಪ್ರಧಾನಿ ದೂರದೃಷ್ಟಿಯನ್ವಯ ಹೊಸಜಿಲ್ಲೆ ರಚಿಸಲಾಗಿದೆ ಎಂದು ಶಾ ವಿವರಿಸಿದ್ದಾರೆ.

ಕಾಶ್ಮೀರ : ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಶ್ರೀನಗರ : ಸೆ.18 ರಂದು ಜಮ್ಮು-ಕಾಶ್ಮೀರ ನಡೆಯಲಿರುವ ಮೊದಲ ಹಂತದ ವಿಧಾನ ಸಭಾ ಚುನಾವಣೆಗಾಗಿ ಬಿಜೆಪಿ 15 ಅಭ್ಯರ್ಥಿಗಳ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ. ಈ ಮೊದಲು ಬೆಳಗ್ಗೆ 44 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿ ಕೆಲ ಗಂಟೆಗಳಲ್ಲೇ ಹಿಂತೆಗೆದುಕೊಳ್ಳಲಾಗಿತ್ತು. ಇದರಿಂದಾಗಿ ಎರಡನೇ ಮತ್ತು ಮೂರನೇ ಹಂತದ ಚುನಾವಣೆಯ ಆಕಾಂಕ್ಷಿಗಳಲ್ಲಿ ಅಸಮಾಧಾನ ಭುಗಿಲೆದ್ದಿದೆ. ಮೊದಲ ಪಟ್ಟಿಯಿಂದ ಅನೇಕ ಪ್ರಮುಖರನ್ನು ಬಿಜೆಪಿ ಕೈಬಿಟ್ಟಿರುವುದು ಗಮನಾರ್ಹ.

ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಸಮಾವೇಶಕ್ಕೆ ಸಿದ್ದು ಬೆಂಬಲಿಗರ ಸಿದ್ಧತೆ

ಮತ್ತೆ ಅಹಿಂದ ಬಲಪ್ರದರ್ಶನ

ಬೆಂಗಳೂರು: ಮುಡಾ ಪ್ರಕರಣ ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷಗಳು ಯೋಚಿಸುತ್ತಿದ್ದರೆ, ಇತ್ತ ಮುಖ್ಯಮಂತ್ರಿಯ ಆಪ್ತರು ಇದೇ ಅವಕಾಶವನ್ನು ಬಳಸಿಕೊಂಡು ಸಿದ್ದರಾಮಯ್ಯ ಅವರ ಶಕ್ತಿಪ್ರದರ್ಶನಕ್ಕೆ ವೇದಿಕೆ ಸಿದ್ಧಪಡಿಸುತ್ತಿದ್ದಾರೆ.

ಹೌದು, ತಮ್ಮ ವಿರುದ್ಧ ಕೇಳಿಬಂದಿರುವ ಆರೋಪಕ್ಕೆ ಪ್ರತ್ಯುತ್ತರ ನೀಡಲು ಸಿದ್ದರಾಮಯ್ಯ ಅವರು ಮುಂದಿನ ಕೆಲವೇ ದಿನದಲ್ಲಿ ರಾಜ್ಯದ ವಿವಿಧ ಭಾಗದಲ್ಲಿ ಬೃಹತ್ ಸಮಾವೇಶಗಳನ್ನು ನಡೆಸಿ, ಪ್ರತಿಪಕ್ಷಗಳಿಗೆ ಠಕ್ಕರ್ ಕೊಡಲು ಸಜ್ಜಾಗಿದ್ದಾರೆ. ಇದರ ಭಾಗವಾಗಿ ಈಗಾಗಲೇ ಮೈಸೂರಿನಲ್ಲಿ ಜನಾಂದೋಲನ ಯಾತ್ರೆಯ ಸಮಾರೋಪ ಸಮಾರಂಭ, ಬೆಳಗಾವಿಯಲ್ಲಿ ರಾಯಣ್ಣ ಪ್ರತಿಮೆ ಉದ್ಘಾಟನೆಯ ನೆಪದಲ್ಲಿ ಬೃಹತ್ ಸಮಾವೇಶಗಳನ್ನು ನಡೆಸಿದ್ದಾರೆ. ಮುಂದಿನ ದಿನದಲ್ಲಿ ಕಲ್ಯಾಣ ಕರ್ನಾಟಕದಲ್ಲಿನ ಬಲಪ್ರದರ್ಶನಕ್ಕೆ ಕಲಬುರಗಿಯಲ್ಲಿ, ಹಳೇ ಮೈಸೂರು ಭಾಗದ ಶಕ್ತಿಪ್ರದರ್ಶನಕ್ಕೆ ಹಾಸನದಲ್ಲಿ ಹಾಗೂ ತುಮಕೂರಿನಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ.

ನಾಲ್ಕು ಸಮಾವೇಶಕ್ಕೆ ಸಿದ್ಧತೆ: ಮೂಲಗಳ ಪ್ರಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು ರಾಜ್ಯ ನಾಲ್ಕು ಭಾಗದಲ್ಲಿ ಬೃಹತ್ ಸಮಾವೇಶ ನಡೆಸಿ ಶಕ್ತಿ ಪ್ರದರ್ಶನ

ಮಾಡಲು ತೀರ್ಮಾನಿಸಿದ್ದಾರೆ. ಈಗಾಗಲೇ ತವರು ಜಿಲ್ಲೆ ಮೈಸೂರಿನಲ್ಲಿ ಜನಾಂದೋಲನ ಯಾತ್ರೆಯ ಸಮಾರೋಪವನ್ನು ನಡೆಸಲಾಗಿದೆ. ರಾಯಣ್ಣ ಪ್ರತಿಮೆ ಉದ್ಘಾಟನೆಯ ನೆಪದಲ್ಲಿ ಬೆಳಗಾವಿಯಲ್ಲಿ ಸಿದ್ದರಾಮಯ್ಯ ಅವರು ಶಕ್ತಿ ಪ್ರದರ್ಶನ ಮಾಡಿದ್ದಾರೆ. ಮುಂದಿನ ದಿನದಲ್ಲಿ ದೇವೇಗೌಡರ ಕುಟುಂಬದ ಭದ್ರಕೋಟೆ ಹಾಸನ ಹಾಗೂ ತುಮಕೂರಿನಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಸಿದ್ದರಾಮಯ್ಯ ಬೆಂಬಲಿಗರು ತೀರ್ಮಾನಿಸಿದ್ದಾರೆ.

ಈ ಎಲ್ಲ ಸಮಾವೇಶಗಳು ನೇರವಾಗಿ ಸಿದ್ದರಾಮೋತ್ಸವ ಎನ್ನುವ ಹೆಸರಲ್ಲಿ ನಡೆಯದಿದ್ದರೂ, ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನಕ್ಕೆ ಬೇಕಾದ ಅಗತ್ಯ ನೆರವನ್ನು ನೀಡಲಿವೆ. ಈಗಾಗಲೇ ದಾವಣಗೆರೆ ಸೇರಿದಂತೆ ಹಲವು ಭಾಗದಲ್ಲಿ ಸಿದ್ದರಾಮೋತ್ಸವದ ಹೆಸರಲ್ಲಿ ಅಹಿಂದ ಸಮುದಾಯದ ಶಕ್ತಿ ಪ್ರದರ್ಶನ ಮಾಡಲಾಗಿತ್ತು. ಈ ಹಿಂದೆ ಬಹುದೊಡ್ಡ ಪ್ರಮಾಣದಲ್ಲಿ ಸಮಾವೇಶ ನಡೆಯದ ಜಿಲ್ಲೆಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

ಅಹಿಂದ ಸಂದೇಶ ರವಾನೆ ಗುರಿ

ಈಗಾಗಲೇ ಸಿದ್ದರಾಮಯ್ಯ ಅಹಿಂದ ಸಮುದಾಯಗಳ ಮುಂಚೂಣಿ ನಾಯಕರಾಗಿದ್ದಾರೆ. ಆದರೆ ಮುಡಾ ಪ್ರಕರಣದಲ್ಲಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರತಿಪಕ್ಷಗಳಿಗೆ ಹಾಗೂ ರಾಜೀನಾಮೆಗೆ ಆಗ್ರಹಿಸುತ್ತಿರುವವರಿಗೆ ಸ್ಪಷ್ಟ ಸಂದೇಶ ರವಾನಿಸಲು ಈ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎನ್ನಲಾಗಿದೆ. ಈ ಎಲ್ಲ ಸಮಾವೇಶಗಳು ಪಕ್ಷ ಅಥವಾ ಸರಕಾರದ ವತಿಯಿಂದ ಹಮ್ಮಿಕೊಂಡರೂ, ಸಿದ್ದರಾಮಯ್ಯ ಅವರ ವೈಯಕ್ತಿಕ ವರ್ಚಸ್ಸು ಹೆಚ್ಚಿಸಿಕೊಳ್ಳುವುದೇ ಮುಖ್ಯ ಉದ್ದೇಶವಾಗಿರಲಿದೆ ಎಂದು ಹೇಳಲಾಗಿದೆ.

ದೂರ ಸಾಗುತ್ತಿದೆ ರೈಲು ಮಾರ್ಗ

ಗದಗ-ಯಲವಿಗಿ ರೈಲು ಮಾರ್ಗ । ಇನ್ನೂ ನಡೆಯದ ಭೂ ಸ್ವಾಧೀನಕಾರ್ಯ

ಮಾಲಿಂಗರಾಯ ಪೂಜಾರ

ಗದಗ: ಗದಗ ಜಿಲ್ಲೆಯಿಂದ ಹಾವೇರಿ ಜಿಲ್ಲೆಗೆ ನೇರವಾಗಿ ಸಂಪರ್ಕ ನೀಡುವ ರೈಲು ಮಾರ್ಗಕ್ಕಾಗಿ ಅನೇಕ ವರ್ಷಗಳಿಂದ ಬಹುದಿನಗಳ ಬೇಡಿಕೆ ಬೇಡಿಕೆಯಾಗದೆ ಆದಷ್ಟು ಬೇಗ ಕಾರ್ಯ ರೂಪಕ್ಕೆ ಬರಬೇಕು ಎನ್ನುವುದು ಬಹುಜನರ ಒತ್ತಾಯವಾಗಿದೆ.

ನೈರುತ್ಯ ರೈಲ್ವೆ ವಲಯದ ಹೊಸ ಮಾರ್ಗವಾಗಿರುವ ಗದಗ ಯಲವಿಗಿ ರೈಲ್ವೆ ಮಾರ್ಗದ ಸುಮಾರು ಒಟ್ಟು 58 ಕಿ. ಮೀ ಇರುವ ಈ ಯೋಜನೆಯ ಅನುಷ್ಠಾನಕ್ಕಾಗಿ ಗದಗ ಜಿಲ್ಲೆ 1997 ರಲ್ಲಿ ಉದಯವಾಯಿತು. ಈಗ ಜಿಲ್ಲೆಗೆ 27 ವರ್ಷವಾಯಿತು.

ಜಿಲ್ಲೆ ಪ್ರಾರಂಭವಾಗಿ ಒಂದು ವರ್ಷ ಕಳೆದಾಗಿನಿಂದ ಅಂದರೆ 1998 ರಿಂದ ಸುಮಾರು 26 ವರ್ಷಗಳಿಂದ ಈ ಯೋಜನೆಗೆ ಹೋರಾಟ ನಡೆದು ಬಂದಿದೆ. ಈ ಯೋಜನೆ ಪ್ರಾರಂಭ ಎಂದು ಇನ್ನೂ ಮುಂದು ಎನ್ನುವಂತೆ ವಿಳಂಬದಿಂದ ಆಮೆಗತಿಯಲ್ಲಿ ಸಾಗುತ್ತಿದೆ.

ಈ ಯೋಜನೆಯಿಂದ ಮಹಾರಾಷ್ಟ್ರದ ಸೊಲ್ಲಾಪುರ, ವಿಜಯಪುರ, ಬಾಗಲಕೋಟೆ, ಗದಗ ಜಿಲ್ಲೆಯಿಂದ ಬೆಂಗಳೂರಿಗೆ ಹೋಗಲು ಇದರಿಂದ ಕನಿಷ್ಠ ಸುಮಾರು 100 ಕಿಮೀ ಅಂತರ ಕಡಿಮೆ ಆಗಲಿದೆ. ಅದಲ್ಲದೆ ಅತಿ ಅವಶ್ಯಕವಾಗಿರುವ ಈ ಯೋಜನೆಯಿಂದ ವ್ಯಾಪಾರ ಕ್ಷೇತ್ರ ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ.



ಅವಿಭಜಿತ ಧಾರವಾಡ ಜಿಲ್ಲೆಯ ಪ್ರಮುಖ ರೈಲ್ವೆ ಯೋಜನೆಯ ನೈಋತ್ಯ ರೈಲ್ವೆದ ಗದಗ ಯಲವಿಗಿ ಮಾರ್ಗ ನೂತನ ಮಾರ್ಗ ಸಿಕ್ಕಿದೆ ಎಂದು ಕಾಲಹರಣ ಕಳೆಯುತ್ತಾ ಹೋಗುತ್ತಿದ್ದು, ಈ ಹಿಂದೆ 2017 ರಲ್ಲಿಯೇ ಕೇಂದ್ರ ಸರಕಾರ 640 ಕೋಟಿ ಮೀಸಲಿಟ್ಟಿತ್ತು ಈ ಯೋಜನೆಯ ರಾಜ್ಯ ಸರಕಾರದ ಶೇ.50 ರಷ್ಟು ಅನುದಾನ ನೀಡಬೇಕಾಗಿತ್ತು, ಆದರೆ ಅಂದಿನ ರಾಜ್ಯ ಸರಕಾರ ಅನುದಾನ ನೀಡಲು ವಿಳಂಬ ಮಾಡುತ್ತಿದೆ ಎನ್ನುವ ಆರೋಪ ಬಂದಿತ್ತು.

ನಂತರ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಇದ್ದಾಗ ರೇಲ್ವೆ ಯೋಜನೆಗೆ 640 ಕೋಟಿ ಅನುದಾನ ಮೀಸಲಿಟ್ಟಿದ್ದರು. ಅಂದು ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಡಬಲ್ ಇಂಜಿನ್ ಸರ್ಕಾರ ಇಟ್ಟಿದ್ದರು. ನಂತರ ಜನಪ್ರತಿನಿಧಿಗಳ ರಾಜಕೀಯ ಇಚ್ಛಾ ಶಕ್ತಿ ಕೊರತೆಯಿಂದ ವಿಳಂಬ ಆಗಿದೆ ಎನ್ನುವ ಆರೋಪ ಕೇಳಿ ಬಂದಿತ್ತು.

ಈಗ ಮತ್ತೆ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿದೆ ಆದರೆ ಈಗ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಇದ್ದು, ಹಾವೇರಿ ಗದಗ ಲೋಕಸಭೆಯ ಸಂಸದರಾಗಿ ಬಸವರಾಜ ಬೊಮ್ಮಾಯಿ ಅವರು ಸಂಸದರಾಗಿದ್ದಾರೆ ಅದಲ್ಲದೆ ಇವರ ಪ್ರಯತ್ನದಿಂದ 2024 ರ ಕೇಂದ್ರ ಬಜೆಟ್ ನಲ್ಲಿ ಮೊದಲ ಹಂತದ 150 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ ಎನ್ನುವದು ವಿಳಂಬದಿಂದ ಬೇಸತ್ತ ಜನರಿಗೆ ಸಂತೋಷ ನೀಡಿದೆ.

> ಬಹುಜನರ ಬೇಡಿಕೆಯಾಗಿರುವ ಗದಗ ಯಲವಿಗಿ ರೇಲ್ವೆ ಯೋಜನೆಯ ರೇಲ್ವೆ ಮಾರ್ಗ ನಿರ್ಮಾಣಕ್ಕೆ 150 ಕೋಟಿ ರೂಪಾಯಿ ಮೀಸಲಿರಿಸಲಾಗಿದೆ. ರಾಜ್ಯ ಸರಕಾರಕ್ಕೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಮನವಿ ಮಾಡಿದ್ದೇನೆ.
> -ಬಸವರಾಜ ಬೊಮ್ಮಾಯಿ, ಸಂಸದರು

ಇನ್ನೂ ರಾಜ್ಯ ಸರಕಾರ ಭೂಸ್ವಾಧೀನ ಪ್ರಕ್ರಿಯೆ ಆದಷ್ಟು ಬೇಗ ಕೈಗೊಳ್ಳಬೇಕು ಎಂದು ಸಂಸದರು ಹಾಗೂ ರೈಲ್ವೇ ಹೋರಾಟಗಾರರು ಮನವಿ ಸಲ್ಲಿಸಿದ್ದು, ರಾಜ್ಯ ಸರಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು ಎನ್ನುವದು ಜನರ ಒತ್ತಾಯವಾಗಿದೆ. ಮತ್ತೆ ವಿಳಂಬ ಧೋರಣೆ ಆಗದೆ ಯೋಜನೆ ಕೇವಲ ಕಾಗದಲ್ಲಿ ಉಳಿದೆಯದೆ ಆದಷ್ಟು ಬೇಗ ಕಾರ್ಯ ರೂಪಕ್ಕೆ ಬಂದು ರೇಲ್ವೆ ಪ್ರಯಾಣಿಕರಿಗೆ ಅನುಕೂಲ ಆಗಬೇಕು ಎನ್ನುವದು ಜನರ ಆಗ್ರಹವಾಗಿದೆ.

ಈಗಾಗಲೇ ರೇಲ್ವೆ ಇಲಾಖೆಯಿಂದ ಮಾರ್ಗದ ಅಧಿಕೃತ ನೀಲನಕ್ಷೆ ಬಿಡುಗಡೆಯಾಗಿದ್ದು, ಈ ಮಾರ್ಗ ಗದಗದಿಂದ ಬಿಂಕದಕಟ್ಟಿ, ಹರ್ತಿ, ಶಿರಹಟ್ಟಿ, ಲಕ್ಷ್ಮೇಶ್ವರ, ಶಿಗ್ಲಿ, ಹಾವೇರಿ ಜಿಲ್ಲೆಯ ಯಲವಿಗಿ ತಲುಪುವುದು. ಅಲ್ಲದೆ ಲಕ್ಷ್ಮೇಶ್ವರ, ಶಿಗ್ಲಿ, ಶಿರಹಟ್ಟಿ, ಹರ್ತಿ, ಅಸುಂಡಿ ಕ್ರಾಸಿಂಗ್ ಸ್ಟೇಷನ್ ಎಂದು ಗುರುತಿಸಲಾಗಿದೆ.

> ಭೂಸ್ವಾಧೀನ ಪ್ರಕ್ರಿಯೆಗೆ ರಾಜ್ಯ ಸರಕಾರ ವಿಳಂಬ ಧೋರಣೆ ಅನುಸರಿಸದೇ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು.
> -ರವಿ ದಂಡಿನ್, ಸಾಮಾಜಿಕ ಕಾರ್ಯಕರ್ತರು.

ಲಭ್ಯವಾಗಿರುವ ನೀಲಿನಕ್ಷೆಯ ಪ್ರಕಾರ ಗದಗ ತಾಲೂಕಿನ ಗದಗ, ಬಿಂಕದಕಟ್ಟಿ, ಅಸುಂಡಿ, ಹುಲಕೋಟಿ, ಕುರ್ತಕೋಟಿ, ಹರ್ತಿ, ಮುಳಗುಂದ, ಬಸಾಪೂರ ಶಿರಹಟ್ಟಿ ತಾಲೂಕಿನ ಖಾನಾಪುರ, ಶಿರಹಟ್ಟಿ, ಪರಸಾಪುರ, ಮಾಗಡಿ ಲಕ್ಷ್ಮೇಶ್ವರ ತಾಲೂಕಿನ ಅಕ್ಕಿಗುಂದ, ಬಟ್ಟೂರು, ಹುಲಗೇರಿಬಣ, ಅಡರಕಟ್ಟಿ, ಹಿರೇಬಣ, ಉಳ್ಳಟ್ಟಿ, ಶಿಗ್ಲಿ, ಗೋವನಾಳ, ಹಾವೇರಿ ಜಿಲ್ಲೆಯ ಹೂವಿನಶಿಗ್ಲಿ, ಯಲವಿಗಿ ಎಲ್ಲ ಗ್ರಾಮಗಳ ರೇಲ್ವೆ ಮಾರ್ಗ ಹೋಗುವ ಜಮೀನುಗಳನ್ನು ರಾಜ್ಯ ಸರಕಾರ ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ ಎನ್ನಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ 27, 28 ರಂದು

ಧಾರವಾಡ: ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರು ಆಗಸ್ಟ್ 27 ಮತ್ತು 28 ರಂದು ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಆಗಸ್ಟ್ 27 ರಂದು ಬೆಳಗ್ಗೆ ರೈಲು ಮುಖಾಂತರ ಧಾರವಾಡಕ್ಕೆ ಆಗಮಿಸುವ ಸಚಿವರು, ಅಂದು ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಾಸ್ತವ್ಯ ಮಾಡುವರು. ಆಗಸ್ಟ್ 28 ರಂದು ಜಿಲ್ಲೆಯ ವಿವಿಧ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾತ್ರಿ ಬೆಂಗಳೂರಿಗೆ ಮರು ಪ್ರಯಾಣ ಬೆಳೆಸುವರೆಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತದಿಂದ ಶ್ರೀ ಕೃಷ್ಣಾಷ್ಟಮಿ ಸಂಭ್ರಮ

ಗದಗ: ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಸೋಮವಾರ ಶ್ರೀಕೃಷ್ಣ ಜಯಂತಿಯನ್ನು ಆಚರಿಸಲಾಯಿತು. ವಿಧಾನಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ ಅವರು ಭಗವಾನ್ ಶ್ರೀಕೃಷ್ಣ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕ್ಬರಸಾಬ ಬಬರ್ಜಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಮಣದೀಪ್ ಚೌಧರಿ, ಜಿಲ್ಲಾಧಿಕಾರಿಗಳಾದ ಗೋವಿಂದರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರವಿ ಗುಂಜೀರ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಮಾಜದ ಗಣ್ಯರು ಹಾಜರಿದ್ದರು.

ಸ್ಕೂಟರ್, ಬಸ್ ಡಿಕ್ಕಿ; ಸವಾರ ಸ್ಥಳದಲ್ಲೇ ಸಾವು

ಗದಗ: ಸಾರಿಗೆ ಸಂಸ್ಥೆ ಬಸ್ ಹಾಗೂ ಸ್ಕೂಟರ್ ನಡುವೆ ಅಪಘಾತವಾಗಿದ್ದು, ಸ್ಥಳದಲ್ಲೇ ಸ್ಕೂಟಿ ಸವಾರ ಸಾವನ್ನಪ್ಪಿರುವ ಘಟನೆ ನಡೆದಿದೆ. ಘಟನೆ ಗದಗ ತಾಲೂಕಿನ ಲಕ್ಕುಂಡಿ ಗ್ರಾಮದ ಬಳಿ ಈ ಘಟನೆ ನಡೆದಿದ್ದು, ಘಟನೆಯಲ್ಲಿ ಲಕ್ಕುಂಡಿ ಗ್ರಾಮದ ಪ್ರಜ್ವಲ್ ಮೃತ ಪಟ್ಟಿದ್ದಾನೆ. ಕೊಲ್ಹಾಪುರದಿಂದ ಗಂಗಾವತಿಯಯ ಕಡೆ ಹೊರಟಿದ್ದ ಬಸ್ಸು ಢಿಕ್ಕಿ ರಭಸಕ್ಕೆ ಸ್ಕೂಟಿ ನುಜ್ಜುಗುಜ್ಜಾಗಿದ್ದು, ಸ್ಥಳಕ್ಕೆ ಗದಗ ಗ್ರಾಮೀಣ ಪೊಲೀಸರ ಭೇಟಿ ಪರಿಶೀಲನೆ ನಡೆಸಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ವಸತಿ ಯೋಜನೆ ನಿರ್ಮಾಣಕ್ಕೆ ಮನವಿ

ಹುಬ್ಬಳ್ಳಿ: ಧಾರವಾಡ ಜಿಲ್ಲಾ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಪೌರಕಾರ್ಮಿಕರ ಮತ್ತು ನೌಕರರ ಸಂಘದ ವತಿಯಿಂದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಮನವಿ ಸಲ್ಲಿಸಿದರು. ಹುಬ್ಬಳ್ಳಿಯಲ್ಲಿರುವ ಪಾಲಿಕೆಯ ವಾರ್ಡ್ ನಂಬರ 81 ರಲ್ಲಿ ಬರುವ ಪಾಲಿಕೆ ಒಡೆತನದ ಮಂಟೂರ್ ರಸ್ತೆಯ ಯಲ್ಲಾಪುರ ಗ್ರಾಮದ ಸರ್ವೆ ನಂಬರ್ 23/2ಅ ಕ್ಷೇತ್ರ 2 ಎಕರೆ 17 ಗುಂಟೆ ಹಾಗೂ ಸದರಿ ಯಲ್ಲಾಪುರ ಗ್ರಾಮದ ಸರ್ವೆ ನಂಬರ್ 23/1 ಮತ್ತು 23/2 ರ ಒಟ್ಟು ಕ್ಷೇತ್ರ 5 ಎಕರೆ 6 ಗುಂಟೆ ಖುಲ್ಲಾ ಜಾಗೆಯಲ್ಲಿ ಪಾಲಿಕೆಯ 2165 ಪೌರಕಾರ್ಮಿಕರಿಗೆ ಪ್ರದಾನ ಮಂತ್ರಿ ಆವಾಸ ಯೋಜನೆ ಹಾಗೂ ರಾಜೀವ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ಉಚಿತ ಮನೆಗಳನ್ನು ನಿರ್ಮಿಸಿಕೊಡುವಂತೆ ಆಗ್ರಹಿಸಿದರು.

ಬಾಬೂರಾವ್ ನಿಧನ

ಧಾರವಾಡ: ದಿಗಂಬರ ಜೈನ್ ಸಮಾಜದ ಮುಖಂಡ, ಧಾರವಾಡ ವರ್ತಕರ ಸಂಘದ ಮಾಜಿ ನಿರ್ದೇಶಕ ಬಾಬೂರಾವ್ ಪಾರಿಸಪ್ಪ ಪಾಟೀಲ(83) ರವಿವಾರ ನಿಧನರಾದರು. ನಗರದ ಮದಿಹಾಳ ನಿವಾಸಿಯಾಗಿದ್ದ ಇವರು, ಮೂಲತಃ ತಾಲೂಕಿನ ಅಮ್ಮಿನಬಾವಿ ಗ್ರಾಮದವರು. ಪತ್ನಿ, ಓರ್ವ ಪುತ್ರ, 4 ಜನ ಪುತ್ರಿಯರನ್ನು ಅಗಲಿದ್ದಾರೆ. ನವಗ್ರಹ ತೀರ್ಥ ಕ್ಷೇತ್ರ ಹಾಗೂ ಅಮ್ಮಿನಬಾವಿ ಜೈನಮಠದ ಶ್ರೀಧರ್ಮಸೇನ್ ಭಟ್ಟಾರಕ ಸ್ವಾಮೀಜಿ ಬಾಬೂರಾವ್ ಅಗಲಿಕೆಗೆ ತೀವ್ರ ಶೋಕ ವ್ಯಕ್ತಪಡಿಸಿ, ದಿವಂಗತರ ಸಮಾಜ ಸೇವೆಯನ್ನು ಸ್ಮರಿಸಿದ್ದಾರೆ.

ಶ್ರೀಕೃಷ್ಣನ ಧರ್ಮ ಸಂದೇಶ ಸಾರ್ವಕಾಲಿಕ

ಧಾರವಾಡ: ಶ್ರೀಕೃಷ್ಣ ಮಹಾಭಾರತ ಯುದ್ಧದಲ್ಲಿ ಧರ್ಮದ ಹಾದಿಯಲ್ಲಿ ನಡೆಯುವ ಪಾಂಡವರ ಪರವಾಗಿ ನಿಂತು ಉತ್ತಮ ಸಂದೇಶಗಳನ್ನು ನೀಡಿದ್ದಾನೆ. ಅಂತಹ ಧರ್ಮ ಸಂದೇಶಗಳು ಸಾರ್ವಕಾಲಿಕ ವಾದವುಗಳಾಗಿದ್ದು, ಇಂದಿನ ಸಮಾಜ ಅನುಸರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಅವರು ಹೇಳಿದರು.

ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾದ ಭಗವಾನ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಅವರು,

ನಾವು ಹಿಂದಿನ ಕಾಲದ ಪದ್ಧತಿಗಳನ್ನು ಈಗಿನ ದಿನಮಾನಗಳಲ್ಲಿಯೂ ಸಹ ಪಾಲನೆ ಮಾಡುತ್ತಿದ್ದೇವೆ. ಸತ್ಯ ಹಾಗೂ ಧರ್ಮವನ್ನು ಅನುಸರಿಸುವ ಪಾಂಡವ ಅರ್ಜುನನ ಸಾರಥಿಯಾಗಿ ಧರ್ಮ ರಕ್ಷಣೆಯ ಪಾತ್ರವನ್ನು ಶ್ರೀಕೃಷ್ಣ ವಹಿಸಿದ್ದರು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

ಇಂದಿನ ಸಮಯವನ್ನು ಕಳೆದುಕೊಂಡರೆ ಮುಂದಿನ ದಿನಮಾನಗಳಲ್ಲಿ ಅದು ಲಭಿಸುವುದಿಲ್ಲ. ಸಮಯಕ್ಕೆ ಅನುಸಾರವಾಗಿ ನಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾ ಸತ್ಯದ ಹಾಗೂ ಧರ್ಮದ ಹಾದಿಯಲ್ಲಿ ನಡೆಯಬೇಕು ಎಂದು ತಿಳಿಸಿದರು.

ನಿವೃತ್ತ ಶಿಕ್ಷಕ ಎಚ್.ಪರಮೇಶ್ವರಪ್ಪ ಅವರು ವಿಶೇಷ ಉಪನ್ಯಾಸವನ್ನು ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿರು.

ಯಾದವ ಸಮಾಜದ ಮುಖಂಡರಾದ ಮಹಾದೇವ ದಂಡಿನ, ಕಾಕಾ ರಂಗಸ್ವಾಮಿ, ಗುರುನಾಥ ಹುಲಗೂರ, ನೇತ್ರಾವತಿ ಗೊಲ್ಲರ, ಸಂತೋಷ ಹಂಚಾಟೆ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಯಂತಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೃಷ್ಣ ಜನ್ಮಾಷ್ಟಮಿ ಹಬ್ಬದ ಆಚರಣೆ ಸಂಪನ್ನ

ಧಾರವಾಡ: ಧಾರವಾಡ ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಗಣಿತ ಅಧ್ಯಾಪಕರಾದ ಆನಂದ ಪಾಟೀಲ ಅವರು, ಶ್ರೀ ಕೃಷ್ಣ ವಿಷ್ಣುವಿನ ಅವತಾರ. ಶ್ರೀ ಕೃಷ್ಣನು ಜಗತ್ತನ್ನು ದುಷ್ಟರಿಂದ ರಕ್ಷಿಸಲು ಅವತರಿಸಿದನು. ಅವನ ಬೋಧನೆಗಳು ದೈನಂದಿನ ಜೀವನದಲ್ಲಿ ನಮಗೆ ಮಾರ್ಗದರ್ಶನ ನೀಡುತ್ತವೆ ಎಂದು ಅಭಿಪ್ರಾಯಿಸಿದರು.

ಹರ್ಷಾ ಭಟ್ಟ ಹಾಗೂ ರಾಮಚಂದ್ರ ಭಟ್ಟ ಇವರು ಪೂಜಾ ಕಾರ್ಯವನ್ನು ನಡೆಸಿಕೊಟ್ಟರು.

ವಿದ್ಯಾರ್ಥಿಗಳಿಂದ ಸಾಮೂಹಿಕ ನೃತ್ಯ, ಭಜನೆ, ಸಮಾಜ ವಿಜ್ಞಾನ ಶಿಕ್ಷಕರಾದ ರೋಹಿತ ಗುರೂಜಿಯವರಿಂದ ನೃತ್ಯ, ಎಲ್ಲ ಗುರುಮಾತೆಯರಿಂದ ಸಾಮೂಹಿಕ ನೃತ್ಯ, ಮಕ್ಕಳಿಗಾಗಿ ಮೊಸರು ಗಡಿಗೆ ಒಡೆಯುವ ಸ್ಪರ್ಧೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿಗಳಾದ ರಾಘವೇಂದ್ರ ಅಂಬೇಕರ, ಪ್ರಾಚಾರ್ಯರಾದ ಡಾ. ಅನಿತಾ ರೈ, ಆಡಳಿತಾಧಿಕಾರಿಗಳಾದ ಕುಮಾರಸ್ವಾಮಿ ಕುಲಕರ್ಣಿ ಹಾಗೂ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕ್ರಿಯಾಶೀಲರಾಗಿ ಗುರಿ ಸಾಧನೆ ಕಡೆಗೆ ಗಮನ ಹರಿಸಿ: ಕಾರ್ಯದರ್ಶಿ

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ರಮಣದೀಪ್ ಚೌಧರಿ

ಗದಗ: ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಯೋಜನೆಗಳ ಸಮರ್ಪಕ ಅನುಷ್ಠಾನದೆಡೆಗೆ ಗಮನ ಹರಿಸಬೇಕು. ನಿಗದಿಪಡಿಸಿದ ಗುರಿ ಸಾಧನೆಯಡೆಗೆ ಕ್ರಿಯಾಶೀಲವಾಗಿ ಕೆಲಸ ನಿರ್ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇಲಾಖಾಧಿಕಾರಿಗಳು ತಮಗೆ ವಹಿಸಿದ ಯೋಜನೆಗಳ ಅನುಷ್ಠಾನದಲ್ಲಿ ಅಥವಾ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಶಿಸ್ತು ಬದ್ಧವಾಗಿ ನಿರ್ವಹಿಸುವುದರೊಂದಿಗೆ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಯಾವುದೇ ರೀತಿಯ ಕರ್ತವ್ಯ ಲೋಪಕ್ಕೆ ಅವಕಾಶ ನೀಡದೇ ಅರ್ಹರಿಗೆ ಇಲಾಖೆಯ ಸೌಲಭ್ಯ ಸುಲಭವಾಗಿ ದೊರಕಿಸಲು ಪ್ರಾಮಾಣಿಕ ಕಾರ್ಯವನ್ನು ಅಧಿಕಾರಿಗಳು ಮಾಡಬೇಕು ಎಂದು ಸೂಚಿಸಿದರು.

ಸರ್ಕಾರಿ ಸಂಸ್ಥೆಗಳಲ್ಲಿ ಸಾರ್ವಜನಿಕ ದೂರುಗಳಿಗೆ ಆಸ್ಪದ ಇಲ್ಲದಂತೆ ನೋಡಿಕೊಳ್ಳಬೇಕು. ಕಾಮಗಾರಿಗಳು ಗುಣಮಟ್ಟ ಕಾಯ್ದುಕೊಂಡು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಯೋಜನೆಯ ಪ್ರಯೋಜನ ಲಭ್ಯವಾಗಬೇಕು.

ಜಿಲ್ಲೆಯ ಸಾರ್ವಜನಿಕರಿಗೆ ಆರೋಗ್ಯದ ಹಿತದೃಷ್ಟಿಯಿಂದ ಆಸ್ಪತ್ರೆಗಳಲ್ಲಿ ಉತ್ತಮ ಚಿಕಿತ್ಸೆ ಲಭ್ಯವಾಗಬೇಕು. ಆಸ್ಪತ್ರೆ ಸೇರಿದಂತೆ ಸರ್ಕಾರಿ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯಗಳು ಇರುವಂತೆ ಅಧಿಕಾರಿ ವರ್ಗ ನಿಗಾ ವಹಿಸಬೇಕು. ಗದಗ ಜಿಲ್ಲೆಯು ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಕೃಷಿಚಟುವಟಿಕೆಗೆ ಅಗತ್ಯವಿರುವ ಸರ್ಕಾರದ ಸೌಕರ್ಯಗಳನ್ನು ಅರ್ಹರಿಗೆ ದೊರಕುವಂತೆ ಇಲಾಖಾಧಿಕಾರಿಗಳು ಗಮನ ಹರಿಸಬೇಕು. ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ನಡೆಸಿದರು.

ಜಿಲ್ಲೆಯ ವಸತಿ ನಿಲಯಗಳಲ್ಲಿ ಆಶ್ರಯ ಪಡೆದು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸೌಕರ್ಯಗಳು ತಲುಪಬೇಕು. ಜೊತೆಗೆ ಶೈಕ್ಷಣಿಕ ಗುಣಮಟ್ಟ ಸುಧಾರಣೆಯಡೆಗೆ ಸಂಬಂಧಿತ ಇಲಾಖೆಯ ಮುಖ್ಯಸ್ಥರು ಅಗತ್ಯವಿರುವ ಕ್ರಮಗಳನ್ನು ಕೈಗೊಂಡು ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಮುಂದಾಗಬೇಕೆಂದು ಸೂಚನೆಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಕಾರ್ಯದರ್ಶಿ ರಮಣದೀಪ್ ಚೌಧರಿ ತಿಳಿಸಿದರು.

ಜಿಲ್ಲಾದಿಕಾರಿ ಗೋವಿಂದರೆಡ್ಡಿ ಅವರು ಗದಗ ಜಿಲ್ಲೆಯ ಪ್ರವಾಹ ಪರಿಸ್ಥಿತಿ ಕುರಿತಂತೆ ಅಂಕಿ ಅಂಶಗಳ ಸಮೇತ ವಸ್ತು ಸ್ಥಿತಿಯನ್ನು ಹಾಗೂ ಪ್ರವಾಹ ನಿರ್ವಹಣೆಗೆ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ವಿವರಿಸಿದರು.

ಜಿಲ್ಲಾ ಪಂಚಾಯತ್ ಸಿಇಓ ಭರತ್ ಎಸ್ ಮಾತನಾಡಿ ಈಗಾಗಲೇ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ವಿವಿಧ ಇಲಾಖೆಗಳ ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಸೂಚಿಸಲಾಗಿದೆ. ನಿಗದಿತ ಅವಧಿಯೊಳಗೆ ಸರ್ಕಾರ ನಿಗದಿಪಡಿಸಿದ ಆರ್ಥಿಕ ಭೌತಿಕ ಗುರಿ ಸಾಧನೆಗೆ ಶ್ರಮಿಸಲಾಗುವುದು ಎಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಜಿ.ಎಚ್. ಮಾತನಾಡಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಗೋವಿನಜೋಳ, ಹೆಸರು, ಶೇಂಗಾ, ಸೂರ್ಯಕಾಂತಿ, ಹತ್ತಿ, ಈರುಳ್ಳಿ, ಮೆಣಸಿನಕಾಯಿ ಪ್ರಮುಖವಾಗಿ ಬೆಳೆಗಳಾಗಿವೆ. ಹಿಂಗಾರು ಹಂಗಾಮಿಗೆ ಕಡಲೆ, ಹಿಂಗಾರು ಜೋಳ, ಗೋಧಿ, ಸೂರ್ಯಕಾಂತಿ, ಹತ್ತಿ ಪ್ರಮುಖ ಬೆಳೆಗಳಾಗಿವೆ. ಆ. 13 ರವರೆಗೆ ಜಿಲ್ಲೆಯಲ್ಲಿ ಒಟ್ಟಾರೆ ಏಳು ತಾಲೂಕುಗಳು ಒಳಗೊಂಡಂತೆ 3,08,336 ಕ್ಷೇತ್ರ ಹೆಕ್ಟೇರ್‌ದಷ್ಟು ಬಿತ್ತನೆಯಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಪ್ರಗತಿಯಲ್ಲಿದೆ.

ರೈತರಿಗೆ ವಿತರಿಸಲು 12654 ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದ್ದು ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆ ಇರುವುದಿಲ್ಲ ಎಂದು ಸಭೆಗೆ ತಿಳಿಸಿದರು. ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಶಶಿಕಾಂತ ಕೋಟಿಮನಿ ಮಾತನಾಡಿ ಇದುವರೆಗೆ 9890 ಟನ್ ಹಣ್ಣಿನ ಉತ್ಪಾದನೆಯಾಗಿದೆ. 383 ಹೆಕ್ಟೇರ್ ಪ್ರದೇಶದಲ್ಲಿ ಹಣ್ಣಿನ ಸಸಿನಡೆಸಲಾಗಿದ್ದು 51300 ಹಣ್ಣಿನ ಸಸಿ ವಿತರಣೆಯಾಗಿದ್ದು 34976 ಟನ್ ತರಕಾರಿ ಉತ್ಪಾದನೆಯಾಗಿದೆ ಹಾಗೂ 14590 ತೆಂಗಿನ ಸಸಿಗಳನ್ನು ವಿತರಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪಿ.ವೈ.ಶೆಟ್ಟೆಪ್ಪನವರ ಮಾತನಾಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಎಲ್. ಬಾರಾಟಕ್ಕೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರವಿ ಗುಂಜೀರ್ಕ, ಲೋಕೋಪಯೋಗಿ ಇಲಾಖೆಯ ಇಇ ರಮೇಶ ಪಾಟೀಲ, ಡಿ.ಎಚ್.ಓ ಡಾ.ಎಸ್.ಎಸ್.ನೀಲಗುಂದ ಸೇರಿದಂತೆ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು, ಆಯಾ ತಾಲೂಕುಗಳ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರಿದ್ದರು.

ನವಲಗುಂದದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ನಗರದ ಆನೆಗುಂದಿ ಬಾಲ ವಿಕಾಸ ಮಂದಿರ ಪ್ರಾಥಮಿಕ ಶಾಲೆಯಲ್ಲಿ ಮುದ್ದು ಮಕ್ಕಳನ್ನ ಕೃಷ್ಣಮತ್ತು ರಾಧೆಯ ವೇಷದಲ್ಲಿ ತಯಾರಿಸಿ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು.

ಶ್ರೀ ಜನಶ್ರೀ ಪತ್ತಿನ ಸೌಹಾರ್ದ ಸಹಕಾರ ಸಂಘ ನಿಯಮಿತ
ತಾ.ಕುಷ್ಟಗಿ
Ref.ಸಂ.ಉನಿಕೋ/ವಿ-5/ಸೌ.ಕಾ/ನೋಂದಣಿ/3414-2014-15 ಜಿ.ಕೊಪ್ಪಳ

10ನೇ ವಾರ್ಷಿಕ ಮಹಾಸಭೆಯ ಆಹ್ವಾನದ ನೋಟಿಸ್

ದಿನಾಂಕ :- 09/09/2024 ರಂದು ಸೋಮವಾರ ಮುಂಜಾನೆ 11-00 ಗಂಟೆಗೆ ಶ್ರೀ ಜನಶ್ರೀ ಪತ್ತಿನ ಸೌಹಾರ್ದ ಸಹಕಾರಿ (ನಿ) ಕುಷ್ಟಗಿ ಇದರ 10ನೇ ವರ್ಷದ ವಾರ್ಷಿಕ ಮಹಾಸಭೆಯು ಸೆ.09 ಸೋಮವಾರ ಬೆಳಿಗ್ಗೆ 11:00 ಗಂಟೆಗೆ ಕುಷ್ಟಗಿ ಪಟ್ಟಣದ ಎಲ್.ಐ.ಸಿ ಆಫೀಸ್ ನ ಹಿಂಬಾಗದಲ್ಲಿ ಇರುವ ನಮ್ಮ ಶ್ರೀ ಜನಶ್ರೀ ಪತ್ತಿನ ಸೌಹಾರ್ದ ಸಹಕಾರಿ (ನಿ) ಕುಷ್ಟಗಿ ಸಂಸ್ಥೆಯ ಕಾರ್ಯಾಲಯದಲ್ಲಿ ಸಹಕಾರಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹನಮಂತಪ್ಪ ಪಿ, ಚೌಡಿ ಇವರ ಅಧ್ಯಕ್ಷತೆಯಲ್ಲಿ 10ನೇ ವಾರ್ಷಿಕ ಮಾಹಾಸಭೆ ಜರಗುವದು. ಕಾರಣ ಸಹಕಾರಿ ನಿಯಮಿತದ ಸರ್ವಸದಸ್ಯರು ಈ ಸಭೆಗೆ ತಪ್ಪದೇ ಹಾಜರಾಗಿ ಸಹಕಾರಿ ಸಂಸ್ಥೆಯ ಸರ್ವೋತೋಮುಖ ಬೆಳವಣಿಗೆಗಾಗಿ ತಮ್ಮ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಪತ್ರಿಕೆ ಪ್ರಕಟಣೆ ಮೂಲಕ ವಿನಂತಿಸಲಾಗಿದೆ.

ಆಡಳಿತ ಮಂಡಳಿಯ ಪರವಾಗಿ,
ಸಹಿ/-
ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಜನಶ್ರೀ ಪತ್ತಿನ ಸೌಹಾರ್ದ ಸಹಕಾರಿ(ನಿ) ಕುಷ್ಟಗಿ

ವಿಶೇಷ ಜಾಗೃತಿ ಕಾರ್ಯಕ್ರಮ

ಗದಗ: ಭಾರತ ಸರ್ಕಾರದ ಕೇಂದ್ರ ಸಂವಹನ ಇಲಾಖೆ, ಧಾರವಾಡ ಹಾಗೂ ಲಕ್ಷ್ಮೇಶ್ವರ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಶಿಶು ಅಭಿವೃದ್ಧಿ ಯೋಜನೆ, ಆರೋಗ್ಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪೊಲೀಸ ಇಲಾಖೆ, ಶಿಕ್ಷಣ ಇಲಾಖೆ ಮತ್ತು ವಿವಿಧ ಶಾಲೆ,ಕಾಲೇಜುಗಳು ಹಾಗೂ ಪುರಸಭೆ ಲಕ್ಷ್ಮೇಶ್ವರರ ಇವರ ಸಂಯುಕ್ತಾಶ್ರಯದಲ್ಲಿ ಹೊಸ ಕ್ರಿಮಿನಲ್ ಕಾನೂನುಗಳು, ಪ್ರಧಾನ ಮಂತ್ರಿ ಸೂರ್ಯ ಘರ್ ಯೋಜನೆ, ವಿಕಸಿತ ಭಾರತ ಬಜೆಟ್ , ಪ್ರಧಾನ ಮಂತ್ರಿಯವರ ದೂರದೃಷ್ಟಿ-2047, ಏಕ್ ಭಾರತ- ಶ್ರೇಷ್ಠ ಭಾರತ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮವನ್ನು ಆ. 28ರಂದು ಬೆಳಗ್ಗೆ 11 ಗಂಟೆಗೆ ಲಕ್ಷ್ಮೇಶ್ವರದ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಹಾಗೂ ಅಗಸ್ಟ 28 ರಿಂದ ಆ.29 ರವರೆಗೆ ಬೆಳಗ್ಗ 10.30 ರಿಂದ 5.30 ರವರೆಗೆ ವಿಶೇಷ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸುವರು. ಶಿರಹಟ್ಟಿ ಶಾಸಕ ಡಾ.ಚಂದ್ರು ಕೆ ಲಮಾಣಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಲಕ್ಷ್ಮೇಶ್ವರ ಪುರಸಭೆ ಅಧ್ಯಕ್ಷರಾದ ಯಲವ್ವ ದುರಗಣ್ಣವರ, ಜಿಲ್ಲಾಧಿಕಾರಿ ಗೋವಿಂದರೆಡ್ಡಿ, ಲಕ್ಷ್ಮೇಶ್ವರ ತಹಸೀಲ್ದಾರರಾದ ವಾಸುದೇವ ಸ್ವಾಮಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಧರ್ಮರ ಕೃಷ್ಣಪ್ಪ, ಆರಕ್ಷಕ ವೃತ್ತ ನಿರೀಕ್ಷಕರಾದ ನಾಗರಾಜ ಮಾಡಳ್ಳಿ, ತಾಲೂಕು ಆರೋಗ್ಯಾಧಿಕಾರಿ ಡಾ. ಸುಭಾಷ ದಾಯಗೊಂಡ, ಶಿಶು ಅಭಿವೃದ್ಧಿ ಯೋಜನಾದಿಕಾರಿ ಮೃತ್ಯುಂಜಯ ಗುಡ್ಡದಾನ್ವೇರಿ, ಕ್ಷೇತ್ರ ಶಿಕ್ಷಣಾದಿಕಾರಿ ಎಚ್. ಎನ್, ನಾಯ್ಕ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ರೇವಣಪ್ಪ ಮನಗುಳಿ, ತೋಟಗಾರಿಕೆಯ ಇಲಾಖೆಯ ಸಹಾಯಕ ನಿರ್ದೇಶಕರಾದ ರಮೇಶ ಹಾವರೆಡ್ಡ ಆಗಮಿಸುವರು.

ಸಲಕ್ಷ್ಮೇಶ್ವರ ವಕೀಲರ ಸಂಘದ ಅಧ್ಯಕ್ಷರಾದ ಬಿ.ಎಸ್. ಬಾಳೇಶ್ವರಮಠ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸುವರು.

ಗಗನಯಾನಕ್ಕೆ ಧಾರವಾಡದ ನೊಣಗಳು

ಧಾರವಾಡ: ಗಗನ ಯಾನಕ್ಕೆ ಜಿಗಿಯಲು ಸಿದ್ದವಾಗಿದೆ ಧಾರವಾಡದ ನೊಣಗಳು. ಇದು ಅಚ್ಚರಿ ಎನಿಸಿದರು ಸತ್ಯ. ಇಂತಹದೊಂದು ಹೊಸ ಪ್ರಯತ್ನಕ್ಕೆ ಧಾರವಾಡ ಕೃಷಿ ವಿಶ್ವವಿದ್ಯಾಲಯ ವಿಜ್ಞಾನಿಗಳು ನೊಣದ ಕಿಟ್ ತಯಾರಿಸುತ್ತಿದ್ದಾರೆ. ಬಾಹ್ಯಾಕಾಶಕ್ಕೆ ಹೋಗಿ ಈ ನೊಣಗಳು ಏನು ಮಾಡುತ್ತವೆ. ಏಕೆ ಅಲ್ಲಿಗೆ ಕಳಿಸಲು ವಿಜ್ಞಾನಿಗಳು ಮುಂದಾಗಿದ್ದಾರೆ ಎನ್ನುವುದು ಬಹಳಷ್ಟು ಕುತೂಹಲ ಮೂಡಿಸಿದೆ.

ಬಾಹ್ಯಾಕಾಶದಲ್ಲಿ ಪ್ರೂಟ್ಸ್ ಪ್ಲೈಸ್ ಜಾತಿಯ ನೊಣ ಗಗನ ನೌಕೆಯಲ್ಲಿ ಹಾರಾಡಲು ಕಿಟ್ ತಯಾರಾಗುತ್ತಿದೆ. 2025 ರಲ್ಲಿ ಇಸ್ರೋ ಭಾರತ ನಭಕ್ಕೆ ಕಳಿಸುವ ಗಗನಯಾನ ನೌಕೆಯಲ್ಲಿ ಈ ಹಣ್ಣಿನ ನೊಣದ ಕಿಟ್ ಕಳುಹಿಸಿ ಕೊಡಲಾಗುತ್ತಿದೆ. ದೇಶದ 75 ಕಕೃಷಿ ವಿವಿಗಳ ಪೈಕಿ ಧಾರವಾಡ ಕೃಷಿ ವಿವಿಯು ನೊಣಗಳ ಕಿಟ್ ತಯಾರಿಸಲು ಆಯ್ಕೆಯಾಗಿದೆ. ಕೃಷಿವಿವಿಯ ಜೈವಿಕಶಾಸ್ತ್ರ ವಿಭಾಗದ ವಿಜ್ಞಾನಿ ರವಿಕುಮಾರ ಹೊಸಮನಿ ಅವರು ಈ ನೊಣಗಳ ಕಿಟ್ ತಯಾರಿಸುವಲ್ಲಿ ನಿರತರಾಗಿದ್ದಾರೆ.

ಈ ಹಣ್ಣಿನ ನೊಣಗಳು ಮನುಷ್ಯನ ದೇಹರಚನೆಗೂ ಹೋಲಿಕೆ ಇರುವ ಹಿನ್ನೆಲೆ, ಈ ನೊಣ ಮೇಲೆ ಹೊಸ ಅಧ್ಯಯನ ಮಾಡಲು ಮುಂದಾಗಿದ್ದಾರೆ. ಇಸ್ರೋದೊಂದಿಗೆ ಮೊಟ್ಟಮೊದಲ ಬಾರಿಗೆ ಕೃಷಿ ವಿಜ್ಞಾನಿಗಳು ಕೈ ಜೋಡಿಸಿದ್ದಾರೆ. ಅರದಲ್ಲಿ ಧಾರವಾಡ ಕೃಷಿ ವಿವಿಯ ವಿಜ್ಞಾನಿ ನೊಣಗಳ ಕಿಟ್ ತಯಾರಿಕೆಗೆ ಆಯ್ಕೆ ಆಗಿದ್ದು ನಮ್ಮ ವಿವಿಗೆ ಸಾಧನೆಗೆ ಮೈಲಾಗಿದೆ. ಇದರಿಂದ ನಮಗೆ ತುಂಬಾ ಸಂತೋಷ ಆಗುತ್ತಿದೆ ಎನ್ನುತ್ತಾರೆ ಕೃಷಿ ವಿವಿ ಕುಲಪತಿ ಪಿ.ಎಲ್.ಪಾಟೀಲ.



ಇಸ್ರೋ ವಿಜ್ಞಾನಿಗಳ ಹೊಸ ಅಧ್ಯಯನಕ್ಕೆ ಧಾರವಾಡ ಕೃಷಿ ವಿವಿ ವಿಜ್ಞಾನಿ ತಯಾರಿಸಿದ ನೊಣಗಳ ಕಿಟ್ ಬಾಹ್ಯಾಕಾಶಕ್ಕೆ ಜಿಗಿಯಲು ಮುಂದಾಗುತ್ತಿವೆ. ದೇಶಗಳಲ್ಲಿ ಮೊದಲಬಾರಿಗೆ ಈ ಹೊಸ್ ಪ್ರಯತ್ನಕ್ಕೆ ಧಾರವಾಡ ಕೃಷಿ ವಿವಿ ಆಯ್ಕೆ ಆಗಿದ್ದು ಮಾತ್ರ ಸಂತಸ ಸುದ್ದಿ. ಈ ಹೊಸ ಅಧ್ಯನಕ್ಕೆ ಕೈಹಾಕಿದ ವಿಜ್ಞಾನಿಗಳಿಗೆ ಸಕ್ಸಸ್ ಸಿಗಲಿ ಎಂಬುದು ಜಿಲ್ಲೆಯ ಜನರು ಆಶಯ.

> ನೌಕೆಯಲ್ಲಿ ತೆರಳಿರೊ 15 ಹಣ್ಣಿನ ನೊಣಗಳಿರುವ ಕಿಟ್ ಇದಾಗಿದೆ. ಏಳು ದಿನದ ಗಗನ ನೌಕೆ ಸುತ್ತಾಟ ಮಾಡಲಿದೆ. ಬಾಹ್ಯಾಕಾಶದಲ್ಲಿ ಮನುಷ್ಯನ ಮೇಲೆ ಅತಿಯಾಗಿ ಕಾಡುವ ಕಿಡ್ನಿ ಸ್ಟೋನ್ ಸಮಸ್ಯೆ ಕುರಿತು ಅಧ್ಯಯನ ಮಾಡಲು ಈ ಪ್ರಯತ್ನ ನಡೆದಿದೆ.
> -ರವಿಕುಮಾರ್ ಹೊಸಮನಿ ಧಾರವಾಡ ಕೃಷಿ ವಿವಿ ವಿಜ್ಞಾನಿ





ಸೈನಿಕರಿಗಾಗಿ ಎಂಟು ಲಕ್ಷ ತುಳಸಿ ಅರ್ಚನೆ

ಪ್ರತೀವರ್ಷವೂ ತುಳಸಿ ಅರ್ಚನೆ ಮಾಡುತ್ತ ಬಂದಿರುವ ಶ್ರೀ ಸ್ವರ್ಣವಲ್ಲೀ ಮಠ

ಶಿರಸಿ: ದೇಶ ಕಾಯುವ ಸೈನಿಕರ ರಕ್ಷಣೆ, ಸೈನಿಕರ ಬಲ ವೃದ್ಧಿ, ಆತ್ಮಸ್ಥೈರ್ಯ ವೃದ್ಧಿ ಆರೋಗ್ಯ ಭಾಗ್ಯ ಕರುಣಿಸಲು ಹಾಗೂ ಲೋಕದಲ್ಲಿ ಧರ್ಮ ನೆಲೆಸಲಿ, ದೇಶ ರಾಮ ರಾಜ್ಯವಾಗಲಿ, ಲೋಕ ಕಲ್ಯಾಣವಾಗಲಿ ಎಂದು ಸಂಕಲ್ಪಿಸಿ ಶ್ರೀಕೃಷ್ಣ ಜನ್ಮಾಷ್ಟಮೀ ಪ್ರಯುಕ್ತ ಶ್ರೀಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ಎಂಟು ಲಕ್ಷ ತುಳಸಿ ಅರ್ಚನೆ ಸೋಮವಾರ ನಡೆಯಿತು.

ಸ್ವರ್ಣವಲ್ಲೀ ಮಠದ ಹಿರಿಯ ಯತಿಗಳಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಗಂಗಾಧರೇಂದ್ರ ಸರಸ್ವತೀಮಹಾ ಸ್ವಾಮೀಜಿಗಳ ಸಂಕಲ್ಪದಂತೆ ಕಳೆದ 24 ವರ್ಷದಿಂದ ನಿರಂತರ ನಡೆಯುತ್ತಿದ್ದು, ಈ ವರ್ಷ ಬೆಳ್ಳಿ ವರ್ಷವಾಗಿದೆ. ಈ ಬಾರಿ ಕೂಡ 8 ಲಕ್ಷ ತುಳಸೀ ಅರ್ಚನೆ ಶ್ರೀಗಳ ಮಾರ್ಗದರ್ಶನದಲ್ಲಿ ಸಂಪನ್ನಗೊಂಡಿತು.

ತುಳಸಿ ಅರ್ಚನೆಯು ಎರಡುನೂರು ವೈದಿಕರನ್ನು ಒಳಗೊಂಡು ಶಾಸ್ತ್ರೋಕ್ತವಾಗಿ ಶ್ರೀ ಮಠದಲ್ಲಿ ನೆರವೇರಿತು. 1999 ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ದೇಶರಕ್ಷಣೆಗಾಗಿ ಶ್ರೀಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಕೋಟಿ ತುಳಸಿ ಅರ್ಚನೆಯನ್ನು ಸಂಕಲ್ಪಿಸಿ ನೆರವೇರಿಸಿದ್ದರು.

ಅವತ್ತಿನಿಂದ ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಪ್ರತಿವರ್ಷವೂ ಎಂಟು ಲಕ್ಷ ತುಳಸಿ ಅರ್ಚನೆಯು ನಡೆಯುತ್ತ ಬಂದಿದೆ.

ಭಗವಾನ್ ಶ್ರೀಕೃಷ್ಣನಿಗೆ ಶ್ರೀಗಂಗಾಧರೇಂದ್ರ ಸರಸ್ವತೀ ಮಹಾ ಸ್ವಾಮೀಜಿಗಳು, ಕಿರಿಯ ಶ್ರೀಆನಂದಬೋಧೇಂದ್ರ ಸರಸ್ವತೀ ಮಹಾಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಕಲ್ಪೋಕ್ತ ಮಹಾಪೂಜೆ, ಮಹಾಮಂಗಳಾರತಿಯು ನೆರವೇರಿತು. ಈ ತುಳಸಿ ಅರ್ಚನೆಯನ್ನು ಶ್ರೀ ಮಠದ ಅಧ್ಯಾಪಕ ವೃಂದದವರು, ಉಮ್ಮಚಿಗಿ, ಸ್ವರ್ಣವಲ್ಲೀ, ನಡಗೋಡು ಪಾಠಶಾಲೆಗಳ ವಿದ್ಯಾರ್ಥಿಗಳು ನೆರವೇರಿಸಿದರು. ಭಗವಾನ್ ಶ್ರೀ ಕೃಷ್ಣನಿಗೆ ಅರ್ಚನೆಗೆ ತುಳಸಿಯು ಶ್ರೀಮಠದ ಸಮಸ್ತ ಭಕ್ತರಿಂದ ಸಾಗರೋಪಾದಿಯಲ್ಲಿ ಒದಗಿಬಂತು.

ದಿವಗಿ ಫ್ಯಾಕ್ಟರಿ ಬಳಿ ಆಟೋ ಹಿಂಬದಿಯಿಂದ ಕಾರ್ ಡಿಕ್ಕಿ: ಮೂವರಿಗೆ ಗಾಯ

ಶಿರಸಿ: ಚಲಿಸುತ್ತಿದ್ದ ಆಟೋಗೆ ಹಿಂಭಾಗಕ್ಕೆ ಕಾರು ಡಿಕ್ಕಿಯಾದ ಪರಿಣಾಮ ಆಟೋ ಉರುಳಿ ಬಿದ್ದು ಮೂವರು ಗಾಯಗೊಂಡ ಘಟನೆ ಶಿರಸಿ-ಬನವಾಸಿ ರಸ್ತೆಯ ದಿವಗಿ ಫ್ಯಾಕ್ಟರಿ ಬಳಿ ನಡೆದಿದೆ.

ತಾಲೂಕಿನ ಕೆರೆಕೊಪ್ಪದ ಆಟೋ ಚಾಲಕ ಸಂತೋಷ ಲಾರೆನ್ಸ್ ಡಿಸೋಜಾ (51), ಗ್ಲೋರಿನ್ ಸಂತೋಷ ಡಿಸೋಜಾ (47) ಹಾಗೂ ಶಾನ್ ಸಂತೋಷ ಡಿಸೋಜಾ (17) ಗಾಯಗೊಂಡಿದ್ದಾರೆ.

ಕಾರಿನ ಚಾಲಕ ಭಾನುವಾರ ಬೆಳಗ್ಗೆ 6.45 ಗಂಟೆಗೆ ಬನವಾಸಿ ಕಡೆಯಿಂದ ಶಿರಸಿ ಕಡೆಗೆ ಅತಿವೇಗ ಮತ್ತು ನಿರ್ಲಕ್ಷತನದಿಂದ ಕಾರನ್ನು ಚಲಾಯಿಸಿ, ನಿಯಂತ್ರಣ ತಪ್ಪಿ, ಶಿರಸಿ ಕಡೆಗೆ ತೆರಳುತ್ತಿದ್ದ ಆಟೋಗೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿ ರಿಕ್ಷಾ ರಸ್ತೆಯ ಮೇಲೆ ಉರುಳಿ ಬೀಳಿಸಿದ್ದಾನೆ. ಅಪಘಾತದ ರಭಸಕ್ಕೆ ಆಟೋ ಚಾಲಕ ಸೇರಿದಂತೆ ಮೂವರು ಗಾಯಗೊಂಡಿದ್ದಾರೆ. ಕಾರು ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಸಂತೋಷ ಡಿಸೋಜಾ ದೂರು ನೀಡಿದ್ದು, ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸತ್ಯನಾರಾಯಣ ಪೂಜೆ

ಕಾರವಾರ: ಶ್ರಾವಣ ಮಾಸದ ಹಿನ್ನೆಲೆಯಲ್ಲಿ ನಗರದ ಮೀನುಮಾರುಕಟ್ಟೆಯಲ್ಲಿ ಶನಿವಾರ ಮೀನು ಮಾರಾಟ ಮಾಡುವ ಮಹಿಳಾ ಸಂಘದವರು ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಪೂಜೆಯ ಹಿನ್ನೆಲೆಯಲ್ಲಿ ಮೀನು ಮಾರಾಟ ಬಂದ್ ಮಾಡಿ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಿ ತಳಿರು, ತೋರಣಗಳಿಂದ ಸಿಂಗರಿಸಲಾಗಿತ್ತು. ಮಾರುಕಟ್ಟೆಯ ಪ್ರವೇಶದ ದ್ವಾರವನ್ನು ಮುಚ್ಚಿ, ಮಂಟಪ ನಿರ್ಮಿಸಿ ಸತ್ಯನಾರಾಯಣ ಪೂಜೆಗೆ ಕಳಸ ಪ್ರತಿಷ್ಠಾಪನೆ ಮಾಡಲಾಗಿತ್ತು. ಮೀನು ಮಾರುವ ಮಹಿಳೆಯರು ಶುಭ್ರ ವಸ್ತ್ರಗಳನ್ನು ಧರಿಸಿ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನ ಮಹಾಪೂಜೆಯ ನಂತರ ಪ್ರಸಾದ ವಿತರಣೆ ನಡೆಯಿತು.ಈ ಸಂದರ್ಭದಲ್ಲಿ ಮೀನು ಮಾರಾಟ ಮಾಡುವ ಮಹಿಳೆಯರ ಸಂಘದ ಅಧ್ಯಕ್ಷೆ ಸುಶೀಲಾ ಹರಿಕಂತ್ರ ಮಾತನಾಡಿ, ಎಲ್ಲರಿಗೂ ಒಳಿತು ಬಯಸಿ ಕಳೆದ ನಾಲ್ಕು ವರ್ಷಗಳಿಂದ ಮಾರುಕಟ್ಟೆಯಲ್ಲಿ ಸತ್ಯನಾರಾಯಣ ಪೂಜೆಯನ್ನು ಹಮ್ಮಿಕೊಳ್ಳುತ್ತ ಬಂದಿದ್ದೇವೆ ಎಂದರು. ಸರ್ವರಿಗೂ ಒಳಿತಾಗಲಿ, ಈ ಪೂಜೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥನೆ ಮಾಡಿಕೊಂಡಿದ್ದೇವೆ ಎಂದು ಅವರು ತಿಳಿಸಿದರು.

ಉದ್ಯೋಗ ಕೊಡಿಸುವುದಾಗಿ ವಂಚನೆ

ಶಿರಸಿ: ಉದ್ಯೋಗ ನೀಡುವುದಾಗಿ ಹೇಳಿ ಬನವಾಸಿ ಮೂಲದ ವ್ಯಕ್ತಿಯೊಬ್ಬನಿಗೆ 4.19 ಲಕ್ಷ ರೂ. ವಂಚನೆ ಮಾಡಿದ ಕುರಿತು ಬನವಾಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಖಾಸಗಿ ಉದ್ಯೋಗವನ್ನು ಮಾಡಬೇಕು ಎಂದು ಲಿಂಕಡ್ ಇನ್ ವೆಬ್ ಸೈಟ್‌ನಲ್ಲಿ ಕೆಲಸ ಹುಡುಕುತ್ತಿದ್ದ ಬನವಾಸಿಯ ಕಾಮನಗಲ್ಲಿಯ ವಿನಯ ಸುರೇಶ ಪುರೋಹಿತ ಎಂಬಾತನಿಗೆ 28-04-2024 ರಂದು ಸ್ನೇಹಾ ಎಂಬ ಹೆಸರಿನವರು ಮೊಬೈಲ್ ನಂಬರ್ ಗೆ ವಾಟ್ಸಪ್‌ನಲ್ಲಿ ಅವರ ಮೊಬೈಲ್ ನಂಬರ್ ಆದ +1(289)534-3354 ರಿಂದ ಎಚ್.ಆರ್ ಮ್ಯಾನೆಜರ್ ಎಂದು ಮೆಸೇಜ್ ಕಳಿಸಿದ್ದು ಕೆಲಸವನ್ನು ನೀಡುವುದಾಗಿ ನನಗೆ ನಂಬಿಕೆ ಬರುವ ಹಾಗೆ ಹೇಳಿದ್ದಾರೆ. ನಂತರ ಸ್ನೇಹಾ ಅಂತಾ ಹೆಸರಿನವರು ಟೆಲಿಗ್ರಾಮ್‌ನಲ್ಲಿ ಒಬ್ಬರನ್ನು ಸಂಪರ್ಕಿಸಲು ಹೇಳಿದಂತೆ 28-04-2024 ರಂದು ಬೆಳಗ್ಗೆ 11 ಗಂಟೆಗೆ ಮೊಬೈಲ್ ಮೂಲಕ ಸಂಪರ್ಕಿಸಿದ್ದು, ಆಗ 2 ವಿಧವಾದ 22 ಟಾಸ್ಕ್‌ಗಳಿದ್ದು ಅದನ್ನು ಪೂರೈಸಿದ್ದಲ್ಲಿ ಅದಕ್ಕೆ ತಕ್ಕ ಸಂಬಳ ನೀಡುವುದಾಗಿ ನಂಬಿಸಿದ್ದಾರೆ. ನಂತರ ನನಗೆ ಅವರು ಇನ್‌ವೆಸ್ಟ್‌ಮೆಂಟ್ ಮಾಡಲು ಬ್ಯಾಂಕ್ ಖಾತೆಯ ಮಾಹಿತಿಯನ್ನು ನೀಡಿದ್ದು ಇರುತ್ತದೆ. ಅದರ ಬ್ಯಾಂಕ್ ಖಾತೆ ನಂಬರ ರಿತಿಕ್ ಪ್ರಾಪರ್ಟಿ ಕನ್ಸಲ್ಟೆಂಟ್. ಐಡಿ ನಂ 1548177209, ಎಸ್.ಎಂ. ಎಂಟರ್ ಪ್ರೈಸಸ್ 50200088401511 ಕೆ,ಸಿ,ವಿ,ಎಮ್, 4698285162097 ಟಾಸ್ಕ್ 1 ಸರ್ವಿಸಸ್ ಎಲ್.ಎಲ್.ಪಿ. 346905001127 ನ್ನು ನೀಡಿದ್ದು, ಈ ಖಾತೆಗಳಿಗೆ ಒಟ್ಟು 4.19 ರೂಪಾಯಿಯನ್ನು ವರ್ಗಾಯಿಸಿದ್ದಾರೆ. ಹಣ ಪಡೆದುಕೊಂಡು ಕೆಲಸವನ್ನು ಕೊಡದೇ ಅವರ ಖಾತೆಗೆ ಹಾಕಿದ ಹಣವನ್ನು ಮರಳಿಸದೆ ಮೋಸ ಮಾಡಿದವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲು ಮೋಸ ಹೋದ ವ್ಯಕ್ತಿ ಬನವಾಸಿಯ ಕಾಮನಗಲ್ಲಿಯ ವಿನಯ ಸುರೇಶ ಪುರೋಹಿತ ಬನವಾಸಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಎಎಸ್‌ಐ ಪ್ರಶಾಂತ ನಾಯ್ಕ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಚಿನ್ನದ ವ್ಯಾಪಾರಿ ಖಾತೆಗೆ ಜಮೆಯಾಗುತ್ತಿದ್ದ ಹೆಲ್ಮೆಟ್ ದಂಡ!

ಪಿಎಸ್‌ಐ ಯಲಪ್ಪ ಅಮಾನತು

ಭಟ್ಕಳ: ಹೆಲ್ಮೆಟ್ ಹಾಕದೇ ಬೈಕ್ ಚಲಾಯಿಸುವವರನ್ನು ಹಿಡಿದು ದಂಡ ಹಾಕುತ್ತಿದ್ದ ಪಿಎಸ್‌ಐ ಅಮಾನತು ಆಗಿದ್ದಾರೆ.

ಆಶ್ಚರ್ಯವಾದರೂ ಸತ್ಯ! ಆದರೆ, ದಂಡ ಹಾಕಿರುವುದಕ್ಕೆ ಅಮಾನತು ಆಗಿದಲ್ಲ; ದಂಡದ ಹಣ ಪೊಲೀಸ್ ಇಲಾಖೆಯ ಖಾತೆಗೆ ಹೋಗುವ ಬದಲು ಖಾಸಗಿ ವ್ಯಕ್ತಿಯೊಬ್ಬರ ಖಾತೆಗೆ ಹೋಗುವಂತೆ ಮಾಡಿದ ಕಾರಣ ಅಮಾನತು ಆಗುವಂತೆ ಆಗಿದೆ.

ಆಗಿದ್ದೇನು?: ಕೆಲವು ದಿನಗಳ ಹಿಂದೆ, ಹೆಲ್ಮೆಟ್ ರಹಿತ ದಂಡ ಹಾಕುತ್ತಿರುವ ಪೊಲೀಸರ ಮೇಲೆ ಅನುಮಾನಗೊಂಡ ಭಟ್ಕಳದ ಮೂರು ಜನರು ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ತೆರಳಿದ್ದರು. ಇಲ್ಲಿನ ನಗರ ಠಾಣೆಯ ರಸ್ತೆಯ ಎದುರಿನಲ್ಲಿ ತೆರಳುತ್ತಿದ್ದ ವೇಳೆ ಇಬ್ಬರು ಪೊಲೀಸ್ ಸಿಬ್ಬಂದಿ ದ್ವಿಚಕ್ರ ವಾಹನ ನಿಲ್ಲಿಸುವಂತೆ ಸೂಚಿಸಿ ಒಬ್ಬರನ್ನು ಪಿಎಸೈ ಯಲ್ಲಪ್ಪ ಅವರ ಬಳಿ ತೆರಳುವಂತೆ ಹೇಳಿದ್ದರು. ನಗರ ಠಾಣೆ ಆವರಣದಲ್ಲಿ ನಿಂತಿದ್ದ ಪಿಎಸ್‌ಐ ಯಲ್ಲಪ್ಪ ಅವರ ಬಳಿ ಹೋದಾಗ ದಂಡ 500 ರೂ. ಕಟ್ಟುವಂತೆ ಸೂಚಿಸಿದರು. ಆದರೆ ನಗದು ಹಣದ ಬದಲಿಗೆ ಆನ್ ಲೈನ್ ಸ್ಕ್ಯಾನರ್ ಮೂಲಕ ಹಣವನ್ನು ಪಾವತಿಸುವುದಾಗಿ ಅವರಲ್ಲಿ ತಿಳಿಸಿದ್ದಾರೆ.

ಚಿನ್ನದ ವ್ಯಾಪಾರಿಗೆ ಹಣ ವರ್ಗ : ಅದೇ ರೀತಿ ಇವರು ತಮ್ಮ ಮುಂದೆಯೇ 4-5 ಮಂದಿ ವಾಹನ ಸವಾರರಿಗೆ ಅದೇ ನಂಬರಗೆ ಹಣ ವರ್ಗಾಯಿಸಲು ಸೂಚಿಸಿದರು. ಅಲ್ಲಿದ್ದವರೆಲ್ಲ ಅದೇ ನಂಬರಿಗೆ ದಂಡದ ಹಣವನ್ನು ವರ್ಗಾಯಿಸಿದ್ದಾರೆ. ಹಣ ವರ್ಗಾಯಿಸುವಾಗ ಖಾತೆದಾರರ ಹೆಸರಿನಲ್ಲಿ ಭಟ್ಕಳದ ಚಿರಪರಿಚಿತ ಚಿನ್ನದ ವ್ಯಾಪಾರಿಯ ಹೆಸರಿಗೆ ಥಳಕು ಹೋಗುತ್ತಿತ್ತು. ಪೊಲಿಸರು ಹೆಲ್ಮೆಟ್ ಧರಿಸದೇ ಇದ್ದ ಹಿನ್ನೆಲೆ ದಂಡ ಹಾಕಿದ ರಸೀದಿಯಲ್ಲಿ ನಗದು ಎಂದು ನಮೂದಿಸಿದ್ದಾರೆ. ಆದರೆ, ಇವರು ದಂಡದ ಹಣವನ್ನು ಸ್ವೀಕರಿಸಿದ್ದು ಆನ್ ಲೈನ್ ಮೂಲಕ. ಈ ಬಗ್ಗೆ ಸ್ವತಃ ಯಲ್ಲಪ್ಪ ಅವರ ಗಮನಕ್ಕೆ ತಂದಾಗ, ಹಾರಿಕೆಯ ಉತ್ತರ ನೀಡಿ ಸಮಜಾಯಿಷಿ ನೀಡಲು ಮುಂದಾದರು.

ಎಸ್‌ಪಿಯಿಂದ ಕ್ರಮ: ದಂಡದ ವಿಚಾರ ಸಾಮಾಜಿಕ ಜಾಲತಾಣ, ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿದ್ದಂತೆ, ಉತ್ತರ ಕನ್ನಡ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಎಂ. ನಾರಾಯಣ ಅವರು ಭಟ್ಕಳದ ನಗರ ಠಾಣೆಯ ಕ್ರೈಮ್-1 ಪಿಎಸ್‌ಐ ಯಲಪ್ಪ ಅವರನ್ನು ಇಲಾಖೆ ವಿಚಾರಣೆ ಬಾಕಿ ಇರಿಸಿ ತಕ್ಷಣ ಜಾರಿಗೆ ಬರುವಂತೆ ಕರ್ತವ್ಯದಿಂದ ಅಮಾನತು ಗೊಳಿಸಿ ಆದೇಶ ಹೊರಡಿಸಿದ್ದಾರೆ.

ಗಾಂಜಾ ಮಾರಾಟ: ಇಬ್ಬರ ಬಂಧನ

ದಾಂಡೇಲಿ: ನಗರದ ದಂಡಕಾರಣ್ಯ ಉದ್ಯಾನವನದ ಮುಂಭಾಗದ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ನಗರ ಠಾಣೆಯ ಆರಕ್ಷಕ ಉಪನಿರೀಕ್ಷಕರಾದ ಐ.ಆರ್. ಗಡ್ಡೇಕರ ನೇತೃತ್ವದ ಪೊಲೀಸರ ತಂಡವು ಭಾನುವಾರ ಬಂಧಿಸಿ 80 ಸಾವಿರ ಮೌಲ್ಯದ 3.598 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ಸುಭಾಷ್ ನಗರದ ನಿವಾಸಿಗಳಾದ ಶಾನವಾಜ್ ಇಮ್ತಿಯಾಜ್ ಖಾನ್ (22) ಮತ್ತು ಮೊಹಮ್ಮದ್ ಖಾಸಿಂಸಾಬ್ ಛಬ್ಬಿ (24) ಬಂಧಿತ ಆರೋಪಿಗಳು. ಅಪರಾಧ ವಿಭಾಗದ ಆರಕ್ಷಕ ಉಪನಿರೀಕ್ಷಕರಾದ ಯಲ್ಲಪ್ಪ ಎಸ್ ಅವರು ಪ್ರಕರಣ ದಾಖಲಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಅಂಕೋಲಾ ತಾಲೂಕಿನ ರಾಮನಗುಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ ಏರಿಸುವ ನಿಟ್ಟಿನಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ ಭೇಟಿ ನೀಡಿದರು. ಅವರ ಶಾಸಕತ್ವ ಅವಧಿಯಲ್ಲಿ ಪ್ರಯತ್ನಿಸಿ ಅನುದಾನವನ್ನು ಒದಗಿಸಿದ್ದರು. ಅದರಂತೆ ಪ್ರಗತಿಯಲ್ಲಿರುವ ರಾಮನಗುಳಿ ಸಮುದಾಯ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿಯನ್ನು ಸ್ಥಳೀಯರೊಂದಿಗೆ ವೀಕ್ಷಣೆ ಮಾಡಿದರು. ಕಾಮಗಾರಿಯ ಕುರಿತು ಮಾಹಿತಿ ಪಡೆದು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆ ತಲುಪಿಸಲು ಜಿಲ್ಲಾ ಮಟ್ಟದ ಸಮಿತಿ ರಚನೆ: ಶಾಸಕ

ಹಾವೇರಿ: ಸರ್ಕಾರ ಬಡವರಿಗಾಗಿ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಮತ್ತು ಮೇಲ್ವಿಚಾರಣೆ ಮಾಡಲು ಜಿಲ್ಲಾ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ರಚಿಸಲಾಗಿದೆ ಎಂದು ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಲಮಾಣ ಹೇಳಿದರು.

ಜಿಲ್ಲಾ ಪಂಚಾಯತ್ ಸಭಾಭಾವನದಲ್ಲಿ ಸೋಮವಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ರಾಜ್ಯ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ. ಹಾಗೆಯೇ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಕೂಡ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚಿಸುವ ಮೂಲಕ ಬಡವರ ಕಲ್ಯಾಣ ಕೈಕೊಳ್ಳಲಾಗುವುದು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯ ಉಪಾಧ್ಯಕ್ಷರಾದ ಎಸ್.ಆರ್.ಪಾಟೀಲ್ ಮಾತನಾಡಿ, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಜಾರಿಯಿಂದ ಹೊಸ ಕ್ರಾಂತಿ ಪ್ರಾರಂಭವಾಗಿದೆ. ಬೇರೆ ಬೇರೆ ರಾಜ್ಯದವರು ಕೂಡ ಇಂದು ನಮ್ಮ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತಿವೆ. ಇದು ರಾಜ್ಯದಲ್ಲಿ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳ ಉಪಯುಕ್ತತೆ ಮತ್ತು ಮಹತ್ವವನ್ನು ತಿಳಿಸುತ್ತಿದೆ ಎಂದರು.

ಈಗಾಗಲೇ ಸರಕಾರ ಜಿಲ್ಲೆಗೆ 1300 ಕೋಟಿ ಅನುದಾನವನ್ನು ವಿವಿಧ ಗ್ಯಾರಂಟಿ ಯೋಜನೆಗಳಿಗೆ ಹಂಚಿಕೆಮಾಡಿದೆ. ಇದು ಜಿಲ್ಲೆಯ ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣ ಕವಾಗಿ ಮೇಲೇತ್ತಲು

ಸಹಕಾರಿಯಾಗಿವೆ ಎಂದರು.

ಹಾನಗಲ್ ಶಾಸಕ ಶ್ರೀನಿವಾಸ ಮಾನೆ ಮಾತನಾಡಿ, ಅನೇಕ ಟೀಕೆ ಟಿಪ್ಪಣ ಗಳ ನಡುವೆ ರಾಜ್ಯ ಸರ್ಕಾರ ಈ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಇಂದು ಈ ಯೋಜನೆಗಳು ಜನರಿಗೆ ಆರ್ಥಿಕ ಶಕ್ತಿಯನ್ನು ತುಂಬಿವೆ ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ.ಹಿರೇಮಠ ಮಾತನಾಡಿ, ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಜಿಲ್ಲೆಯಲ್ಲಿ ಸಮಿತಿ ರಚಿಸಿ, ಅದರ ಕಚೇರಿ ಉದ್ಘಾಟನೆ ಮಾಡಲಾಯಿತು. ಮುಂದಿನ ದಿನಮಾನಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಲು ಕಾರ್ಯನಿರ್ವಹಿಸಲಾಗುವುದು ಎಂದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯಿಂದ ಇಂದು ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ನೂತನ ಕಚೇರಿಯನ್ನು ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಸಕ ಬಸವರಾಜ ಶಿವಣ್ಣನವರ, ಶ್ರೀನಿವಾಸ ಮಾನೆ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷರಾದ ಎಂ.ಎಂ.ಹಿರೇಮಠ, ಉಪಾಧ್ಯಕ್ಷರಾದ ಎಸ್.ಆರ್.ಪಾಟೀಲ್, ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅಕ್ಷಯ ಶ್ರೀಧರ ಉಪಸ್ಥಿತರಿದ್ದರು.

30 ವರ್ಷಗಳ ವಿಶ್ವಾಸ, ಅತ್ಯುತ್ತಮವಾದುದರಲ್ಲಿ ನಂಬಿಕೆ
ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ
& ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ
ಅಡಿಗಾಸ್ ಯಾತ್ರಾ®
ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ

ಕಸ್ಟಮೈಸ್ಡ್ ಟೂರ್ಸ್
ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಅವರಿಚ್ಚಿಸಿದ ದಿನಗಳಲ್ಲಿ ಕ್ಲಾಸಿಕ್-ಡಿಲಕ್ಸ್-ಲಕ್ಸುರಿ-ಪ್ರೀಮಿಯಮ್ ಕ್ಯಾಟೆಗರಿವರೆಗೂ 3 ದಿನಗಳಿಂದ 21 ದಿನಗಳವರೆಗೂ 500ಕ್ಕೂ ಅಧಿಕ ವೈವಿಧ್ಯಮಯ ಪ್ರವಾಸಗಳು
9449478944
email: care@adigasyatra.com | website: www.adigasyatra.com



ಕಾಶ್ಮೀರ — 3/4/5/6/7/8 ದಿನಗಳು
ಶ್ರೀನಗರ, ಗುಲ್ಮಾರ್ಗ್, ಪಹಲ್ಗಾಮ್, ಸೋನ್ಮಾರ್ಗ್, ಚೆಶ್ಮನ್ ಶಾಹಿ, ಶಾಲಿಮಾರ್ "ಗಾರ್ಡನ್ & ನಿಶತ್ ಗಾರ್ಡನ್, ಕಟ್ರಾ ವೈಷ್ಣೋದೇವಿ.
ಅಯೋಧ್ಯಾ-ಕಾಶಿ-ಗಯಾ — 3/5/6/7 ದಿನಗಳು
ಅಯೋಧ್ಯಾ, ಪ್ರಯಾಗ್‌ರಾಜ್, ವಾರಣಾಸಿ, ಬೋಧಗಯಾ, ಗಂಗಾ ಘಾಟ್‌ಗಳು, ಗಂಗಾರತಿ, ವಿಶ್ವನಾಥ್, ವಿಶಾಲಾಕ್ಷಿ, ಅನ್ನಪೂರ್ಣ ಮಂದಿರ
ಮೇಘಾಲಯ-ಅಸ್ಸಾಂ — 4/5/6/7/8/9 ದಿನಗಳು
ಗುವಾಹಟಿ, ಕಾಜಿರಂಗ, ಶಿಲ್ಲಾಂಗ್, ಮಾನಸ್, ಕಾಮಾಖ್ಯ ಮಂದಿರ, ಉಮಿಯಂ ಲೇಕ್, ಡಾನ್‌ಬಾಸ್ಕೋ ಮ್ಯೂಸಿಯಂ, ಶಿಲ್ಲಾಂಗ್, ಚಿರಾಪುಂಜಿ, ಮಾವ್ಲಿನ್ನಾಂಗ್, ಡಾವ್ಕಿ.
ಪುರಿ-ಕೋನಾರ್ಕ್-ಭುವನೇಶ್ವರ (ಒಡಿಶಾ) — 3/4/5/6/7/8/9 ದಿನಗಳು
ಭಿಟರ್ಕರ್ನಿಕಾ ರಾಷ್ಟ್ರೀಯ ಉದ್ಯಾನವನ, ಭುವನೇಶ್ವರ, ಪುರಿ ಜಗನ್ನಾಥ ದೇವಾಲಯ, ಚಿಲಿಕಾ, ಗೋಪಾಲಪುರ, ಮ್ಯಾಂಗ್ರೋವ್ ಕಾಡುಗಳು, ಬಗಗಹನ್, ಚಂದ್ರಬಾಗ ಬೀಚ್, ಕೋನಾರ್ಕ್ ಸೂರ್ಯ ದೇವಾಲಯ, ಉದಯಗಿರಿ, ಖಂಡಗಿರಿ
ಡಾಲ್‌ಹೌಸಿ-ಧರ್ಮಶಾಲಾ-ಅಮೃತಸರ್ — 6/10/11 ದಿನಗಳು
ಶಿಮ್ಲಾ, ಮನಾಲಿ, ಧರ್ಮಶಾಲಾ, ಡಾಲ್‌ಹೌಸಿ, ಅಮೃತಸರ, ಕಾಳಿ ಬಾರಿ ದೇವಾಲಯ, ಕುಫ್ರಿ, ಹಿಮಾಲಯ ರಾಷ್ಟ್ರೀಯ ಉದ್ಯಾನವನ, ಹಿಡಿಂಬ ದೇವಾಲಯ
ಶಿಮ್ಲಾ-ಕುಲು-ಮನಾಲಿ — 5/6/7 ದಿನಗಳು
ಶಿಮ್ಲಾ, ಮನಾಲಿ, ಚಂಡೀಗಢ, ಕಾಳಿ ಬಾರಿ ದೇವಸ್ಥಾನ, ಕುಫ್ರಿ, ಹಿಮಾಲಯನ್ ರಾಷ್ಟ್ರೀಯ ಉದ್ಯಾನವನ, ಹಿಡಿಂಬಾ ದೇವಸ್ಥಾನ, ಮನು ದೇವಸ್ಥಾನ, ವಸಿಷ್ಠ ಹಾಟ್ ಸ್ಪ್ರಿಂಗ್.
ಚಾರ್‌ಧಾಮ್ ಯಾತ್ರಾ — 12 ದಿನಗಳು
ಹರಿದ್ವಾರ, ಬರ್ಕೋಟ್, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ ಕೇದಾರನಾಥ, ಬದರಿನಾಥ್, ರುದ್ರಪ್ರಯಾಗ, ಋಷಿಕೇಶ.
ನೈನಿತಾಲ್-ಕಾರ್ಬೆಟ್-ಮಸ್ಸೂರಿ — 4/6/8 ದಿನಗಳು
ನೈನಿತಾಲ್, ಕಾರ್ಬೆಟ್, ಮಸ್ಸೂರಿ, ನೈನಿ ಲೇಕ್, ಹನುಮಾನ್‌ಗಢ್, ಭೀಮತಾಲ್, ನೌಕುಚಿಯಾತಲ್, ಸತ್ತಾಲ್, ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ, ಮಸ್ಸೂರಿ, ಕೆಂಪ್ಟಿ ಜಲಪಾತ
ಅಂಡಮಾನ್ ದ್ವೀಪಗಳು — 4/5/6/7/8 ದಿನಗಳು
ಪೋರ್ಟ್ ಬ್ಲೇರ್, ದಿಗ್ಲಿಪುರ್, ಹ್ಯಾವ್ಲಾಕ್ ದ್ವೀಪ, ನೀಲ್ ದ್ವೀಪ, ಕಾರ್ಬಿನ್ಸ್ ಕೋವ್ ಬೀಚ್, ಸೆಲ್ಯುಲರ್ ಜೈಲ್ ಸೌಂಡ್ ಅಂಡ್ ಲೈಟ್ ಶೋ, ಬಾರಾಟಾಂಗ್, ನಾರ್ತ್ ಬೇ ದ್ವೀಪ, ರಾಸ್ ದ್ವೀಪ,
ರಾಜಸ್ಥಾನ್ — 3/4/5/6/7/8/9/10/11/12/15 ದಿನಗಳು
ಮಾಂಡವಾ, ಬಿಕಾನೆರ್, ಜೈಸಲ್ಮೇರ್, ಜೋಧ್‌ಪುರ, ಮೌಂಟ್ ಅಬು, ಉದಯಪುರ, ಜೈಪುರ, ಲಕ್ಷ್ಮೀನಾರಾಯಣ ದೇವಸ್ಥಾನ, ಅಂಬರ್ ಅರಮನೆ, ಜಲ ಮಹಲ್, ಪುಷ್ಕರ್
ಸಿಕ್ಕಿಂ & ಡಾರ್ಜಿಲಿಂಗ್ — 4/5/6/7/8/9/10/11/12/15 ದಿನಗಳು
ಕಾಲಿಂಪಾಂಗ್, ಗ್ಯಾಂಗ್‌ಟಕ್, ಲಾಚೆನ್, ಲಾಚುಂಗ್, ಪೆಲ್ಲಿಂಗ್, ಡಾರ್ಜಿಲಿಂಗ್, ಮಿರಿಕ್, ಮಂಗಲ್ ಧಾಮ್, ಡಿಯೋಲೊ ಹಿಲ್, ಡಾ. ಗ್ರಹಾಂ ಹೋಮ್, ತ್ಸೋಮ್ಗೊ ಲೇಕ್, ಟೈಗರ್ ಹಿಲ್
ಉಜ್ಜಯಿನಿ-ಮಹಾಕಾಲೇಶ್ವರ-ಓಂಕಾರೇಶ್ವರ (ಎಂ.ಪಿ) — 4/5/7/11 ದಿನಗಳು
ಗ್ವಾಲಿಯರ್, ಓರ್ಛಾ, ಖಜುರಾಹೊ, ಜಬಲ್‌ಪುರ್, ಬೇಡಾಘಾಟ್, ಪಾಚಮಡಿ, ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಹೇಶ್ವರ್, ಓಂಕಾರೇಶ್ವರ.
ಮುನ್ನಾರ್-ತೆಕ್ಕಡಿ-ಅಲೆಪ್ಪಿ — 3/4/5/6/8 ದಿನಗಳು
ಮುನ್ನಾರ್, ತೆಕ್ಕಡಿ, ಕೊಚ್ಚಿ, ಅಲೆಪ್ಪಿ, ಕೋವಲಂ, ತಿರುವನಂತಪುರಂ, ಮೆಟ್ಟುಪಟ್ಟಿ ಅಣೆಕಟ್ಟು, ಕುಂಡಲ ಸರೋವರ, ಪೆರಿಯಾರ್ ಸರೋವರ.
ಬೆಸ್ಟ್ ಆಫ್ ಗುಜರಾತ್ — 4/5/7/9/10 ದಿನಗಳು
ಅಹಮದಾಬಾದ್, ಸರ್ದಾರ ವಲ್ಲಭಭಾಯ್ ಪ್ರತಿಮೆ, ನಿಷ್ಕಳಂಕ್ ಮಹಾದೇವ್, ವೀರಾವಲ್, ಸೋಮನಾಥ, ಪೋರಬಂದರ್, ದ್ವಾರಕಾ, ಬೆಟ್ ದ್ವಾರಕಾ, ನಾಗೇಶ್ವರ್, ಮೊಧೇರಾ, ಪಟಾನ್, ಮಾತೃಗಯಾ, ರನ್ ಆಫ್ ಕಛ್, ಸಬರಮತಿ ಆಶ್ರಮ, ಅಕ್ಷರಧಾಮ.
ಶಿರಡಿ-ನಾಸಿಕ-ಅಜಂತಾ-ಎಲ್ಲೋರಾ — 2/3/4/5 ದಿನಗಳು
ಶಿರಡಿ, ಶನಿ ಶಿಂಗ್ನಾಪುರ, ತ್ರಯಂಬಕೇಶ್ವರ, ನಾಸಿಕ್, ಔರಂಗಾಬಾದ್, ಅಜಂತಾ, ಎಲ್ಲೋರಾ.
ರಾಮೇಶ್ವರಂ-ಮಧುರೈ-ಕನ್ಯಾಕುಮಾರಿ — 3/4/5 ದಿನಗಳು
ಮಧುರೈ, ರಾಮೇಶ್ವರಂ, ಕನ್ಯಾಕುಮಾರಿ, ಮೀನಾಕ್ಷಿ ದೇವಸ್ಥಾನ, ರಾಮನಾಥಸ್ವಾಮಿ ದೇವಸ್ಥಾನ, ವಿವೇಕಾನಂದ ರಾಕ್, ಕನ್ಯಾಕುಮಾರಿ ದೇವಸ್ಥಾನ, ತಿರುವಳ್ಳುವರ್.
ಅರುಣಾಚಲ ಪ್ರದೇಶ — 7/8 ದಿನಗಳು
ಗುವಾಹಟಿ, ದಿರಂಗ್, ತವಾಂಗ್, ಬೊಮ್ಡಿಲಾ, ಕಾಮಾಖ್ಯ ಮಂದಿರ, ಸೆಲಾ ಪಾಸ್, ಜಸ್ವಂತ್ ಗಡ್, ಜಂಗ್ ಜಲಪಾತ, ಯುದ್ಧ ಸ್ಮಾರಕ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಬಸವನಗುಡಿ : 080-26616678 / 7022259008
ರಾಜರಾಜೇಶ್ವರಿ ನಗರ : 080-26696678 / 7483366378
ಹುಬ್ಬಳ್ಳಿ : 0836-2256678 / 7022259001
ಮಲ್ಲೇಶ್ವರಂ: 080-23346678 / 7022259003
ವಿಜಯನಗರ : 080-23356678 / 7022259002
ಹಾಸನ : 08172-261888 / 8884679122

ಸಮಾಚಾರ ಸಣ್ಣದಲ್ಲ

ಅತ್ಯಾಚಾರ ಪ್ರಕರಣ; 3ನೇ ಆರೋಪಿ ಸೆರೆ

ಉಡುಪಿ: ಕಾರ್ಕಳದಲ್ಲಿ ನಡೆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರನೇ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಈಗಾಗಲೇ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಸೋಮವಾರ(ಆ 26) ಮೂರನೇ ಆರೋಪಿ ಅಭಯ್(23) ಕಾರ್ಕಳ ಎಂಬಾತನನ್ನು ಬಂಧಿಸಲಾಗಿದೆ. ಅಭಯ್ ಪ್ರಕರಣದ ಪ್ರಥಮ ಆರೋಪಿ ಅಲ್ತಾಫ್ ಗೆ ಮಾದಕ ವಸ್ತು ಕೊಟ್ಟಿದ್ದಾನೆ ಎಂದು ನಮಗೆ ಪ್ರಥಮವಾಗಿ ತನಿಖೆಯಲ್ಲಿ ಕಂಡುಬಂದಿದೆ. ಕೃತ್ಯ ಎಸಗಿದ ಮೇಲೆ, ಪ್ರಥಮ ಆರೋಪಿ ತಪ್ಪಿಸಿಕೊಳ್ಳಲು ಸಹಕಾರ ಮಾಡುವುದಕ್ಕೆ ಪ್ರಯತ್ನ ಮಾಡಿರುವುದು ನಮಗೆ ತನಿಖೆಯಲ್ಲಿ ಕಂಡುಬಂದಿರುತ್ತದೆ. ಈಗ ಆತನನ್ನು ಬಂಧಿಸಿ ಇಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಕಸ್ಟಡಿಗೆ ಪಡೆದುಕೊಂಡು, ಆತನನ್ನು ಸಂಪೂರ್ಣ ತನಿಖೆ ನಡೆಸಿ, ಮುಂದೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಡಾ.ಕೆ.ಅರುಣ್ ತಿಳಿಸಿದ್ದಾರೆ.

ತುಂಬಿ ತುಳುಕುತ್ತಿವೆ ರಾಜ್ಯದ ಜೈಲುಗಳು!

ಕೈದಿಗಳ ಆತ್ಮಹತ್ಯೆಯಲ್ಲಿ ರಾಜ್ಯ ಮೊದಲು | ಜೈಲುಗಳ ನಿರ್ವಹಣೆ ಸವಾಲು

ಬೆಂಗಳೂರು: ಸಾಮರ್ಥ್ಯಕ್ಕೂ ಮೀರಿ ಹೆಚ್ಚಿನ ಕೈದಿಗಳಿಂದ ರಾಜ್ಯದ ಬಹುತೇಕ ಜೈಲುಗಳು ಫುಲ್ ರಶ್ ಆಗಿದ್ದು, ಕಿಷ್ಕಂಧೆಯಿಂದ ಮುಕ್ತಿ ಪಡೆಯಲು ಚಾತಕ ಪಕ್ಷಿಗಳಂತೆ ಕಾತರಿಸುತ್ತಿದ್ದಾರೆ.

ಕೈದಿಗಳಿಂದ ತುಂಬಿ ತುಳುಕುತ್ತಿರುವ ಜೈಲುಗಳ ನಿರ್ವಹಣೆಯೂ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ. ಕೈದಿಗಳನ್ನು ಬ್ಯಾರಕ್‌ಗಳಿಗೆ ಕುರಿಗಳಂತೆ ತುಂಬಿಸಲಾಗುತ್ತಿದೆ. ಇದರಿಂದ ಕೈದಿಗಳ ನಡುವೆ ಆಗಾಗ ಘರ್ಷಣೆಯಾಗುತ್ತಿವೆ. ವಿಚಾರಣಾಧೀನ ಮತ್ತು ಸಜಾ ಕೈದಿಗಳ ಜತೆಗೆ ಹೊಸ ಕೈದಿಗಳಿಗೆ ಊಟ, ವಸತಿ ವ್ಯವಸ್ಥೆ ಮಾಡಲು ಅಧಿಕಾರಿಗಳು ಹೆಣಗಾಡುತ್ತಿದ್ದಾರೆ. ಹೊಸ ಕೈದಿಗಳು ಬಂದರೆ ಅವರನ್ನು ಎಲ್ಲಿಡುವುದು ಎಂಬ ಆತಂಕವು ಜೈಲಿನ ಅಧಿಕಾರಿಗಳನ್ನು ಕಾಡುತ್ತಿದೆ.

ಒಟ್ಟು 27 ಕೈದಿಗಳು ಮರಣದಂಡನೆಗೆ ಗುರಿ

ಹಿಂಡಲಗಾ ಜೈಲಿನಲ್ಲಿದ್ದವರ ಪೈಕಿ ಒಟ್ಟು 27 ಕೈದಿಗಳು ಮರಣದಂಡನೆಗೆ ಗುರಿಯಾಗಿದ್ದಾರೆ ಎಂದು ಜೈಲು ಮೂಲಗಳು ತಿಳಿಸಿವೆ. ಇವರ ಕ್ಷಮಾಪಣಾ ಅರ್ಜಿಗಳು ಇನ್ನೂ ನ್ಯಾಯಾಲಯದ ಮುಂದೆ ಮತ್ತು ಕೆಲವು ರಾಷ್ಟ್ರಪತಿಗಳ ಮುಂದೆ ಇವೆ. ಮಂಗಳೂರಿನ ಡಬಲ್ ಮರ್ಡರ್ ಆರೋಪಿ ಹಾಗೂ ವಿವಿಧ ಪ್ರಕರಣಗಳ ಪ್ರಮುಖ ಆರೋಪಿ ಜಯೇಶ್ ಪೂಜಾರಿ ಅಲಿಯಾಸ್ ಜಯೇಶ್ ಕಾಂತ ಹಿಂಡಲಗಾ ಜೈಲಿನಲ್ಲಿದ್ದ. ಆತ ಜನವರಿ 14 ಮತ್ತು ಮಾರ್ಚ್ 21 ರಂದು ಹಿಂಡಲಗಾ ಜೈಲಿನಿಂದ ಸೆಲ್ ಫೋನ್ ಬಳಸಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಬೆದರಿಕೆ ಕರೆಗಳನ್ನು ಮಾಡಿದ್ದ. 10 ಕೋಟಿ ನೀಡದಿದ್ದರೆ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದ. ನಟ ದರ್ಶನ್ ಸಹ ಇದೇ ಜೈಲು ಪಾಲಾಗುವ ಎಲ್ಲಾ ಸಾಧ್ಯತೆಗಳಿವೆ.

ಸಾಮಾನ್ಯವಾಗಿ ಕಾರಾಗೃಹಗಳಲ್ಲಿ ಕೈದಿಗಳು ಏಕಾಂಗಿಯಾದಾಗ ಅವರ ಮನಃಪರಿವರ್ತನೆಯಾಗುತ್ತದೆ. ಇದರಿಂದಾಗಿ ಸನ್ನಡತೆ ತೋರಿ ಶಿಕ್ಷೆ ಅವಧಿಗೂ ಮುನ್ನವೇ ಬಿಡುಗಡೆಯಾದ ನಿದರ್ಶನಗಳಿವೆ. ಆದರೆ, ಒಂದೇ ಬ್ಯಾರಕ್‌ನಲ್ಲಿ ಹೆಚ್ಚು ಕೈದಿಗಳನ್ನು ತುಂಬಿದಾಗ ಅಶಾಂತಿ ವಾತಾವರಣ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ನಿಗದಿತ ಮಿತಿಗಿಂತ ಹೆಚ್ಚಿನ ಕೈದಿಗಳನ್ನು ಜೈಲಿನಲ್ಲಿ ಇರಿಸಬಾರದೆಂಬ ಕಾನೂನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಕೈದಿಗಳಿಗೆ ಅನುಕೂಲಕರವಾದ ವಾತಾವರಣ ಜೈಲಿನಲ್ಲಿ ಇಲ್ಲವಾಗಿರುವ ಕುರಿತು ಅನೇಕ ದೂರುಗಳು ಕೇಳಿ ಬಂದಿವೆ.

ಕೈದಿಗಳ ಆತ್ಮಹತ್ಯೆಯಲ್ಲಿ ರಾಜ್ಯ ಮೊದಲು: ಕರ್ನಾಟಕ ರಾಜ್ಯದ ಜೈಲುಗಳ ಬಗೆಗಿನ ಕರಾಳ ಅಂಕಿ ಅಂಶವೊಂದು ಬಹಿರಂಗವಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ನೀಡಿರುವ ಮಾಹಿತಿಗಳು ನಿಜಕ್ಕೂ ಎದೆ ನಡುಗಿಸುವಂತಿವೆ.

ರಾಜ್ಯದಲ್ಲಿನ ಕಾರಾಗೃಹಗಳು

ಕೇಂದ್ರ	08
ಜಿಲ್ಲಾ	21
ತಾಲೂಕು	23
ಮಹಿಳಾ ಕೇಂದ್ರ	01
ಬಯಲು ಬಂದೀಖಾನೆ	01

ಕರ್ನಾಟಕ ರಾಜ್ಯದ ಜೈಲುಗಳು ಕೈದಿಗಳ ಆತ್ಮಹತ್ಯೆ ವಿಷಯದಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ರಾಷ್ಟ್ರೀಯ ಅಪರಾದ ದಾಖಲೆ ಬ್ಯೂರೋದ ಬಂಧೀಖಾನೆ ಅಂಕಿ ಅಂಶಗಳ ಪ್ರಕಾರ 2022ರಲ್ಲಿ ಕರ್ನಾಟಕ ರಾಜ್ಯದ ಜೈಲುಗಳಲ್ಲಿ ಒಟ್ಟು 15 ಮಂದಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಈ ಪೈಕಿ 13 ಮಂದಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜೈಲುಗಳಲ್ಲಿ ಕೈದಿಗಳು ಮಾನಸಿಕ ಯಾತನೆ ಹಾಗೂ ಚಿತ್ರ ಹಿಂಸೆಗೆ ತುತ್ತಾಗಿ ಹಾಗೂ ಆಘಾತಕ್ಕೆ ಒಳಗಾಗುವ ಕಾರಣಕ್ಕೆ ಆತ್ಮಹತ್ಯೆ, ಹೃದಯಾಘಾತದಂಥಾ ಸಮಸ್ಯೆಗಳು ಎದುರಾಗುತ್ತಿವೆ.

ಹೀಗಾಗಿ, ಜೈಲುಗಳಲ್ಲಿ ಸಾಮಾನ್ಯವಾಗಿ ಮನೋವೈದ್ಯರು, ಮನಃ ಶಾಸ್ತ್ರಜ್ಞರು ಹಾಗೂ ಆಪ್ತ ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.

ಆದರೆ, ಕರ್ನಾಟಕದ ಕಾರಾಗೃಹದಲ್ಲಿ ಮಂಜೂರಾದ ಮನೋವೈದ್ಯರ ಪೈಕಿ ಅರ್ಧದಷ್ಟು ಸಿಬ್ಬಂದಿಯನ್ನೂ ನೇಮಕ ಮಾಡಿಕೊಂಡಿಲ್ಲ.

ತಮ್ಮನಿಂದ ಅಣ್ಣನ ಹತ್ಯೆ: ತನಿಖೆಯಿಂದ ಕೊಲೆ ಬಹಿರಂಗ

ಕಲಬುರಗಿ: ಹಣಕಾಸಿಗೆ ಸಂಬಂಧಿಸಿದಂತೆ ವೈಷಮ್ಯದಿಂದ ಅಣ್ಣನನ್ನೇ ತಮ್ಮನಿಂದ ಹತ್ಯೆಗೈದ ಘಟನೆ ಚಿತ್ತಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ

ಚಿತ್ತಾಪುರ ತಾಲೂಕಿನ ಇಟಗಾ ಗ್ರಾಮದ ಕಾಮಣ್ಣ ದೊಡ್ಡ ಹಣಮಂತ (35) ಹತ್ಯೆಗೀಡಾದ ವ್ಯಕ್ತಿ. ತಮ್ಮ ಸುರೇಶ ದೊಡ್ಡ ಹಣಮಂತ ಕೊಲೆ ಆರೋಪಿ ಎಂದು ತನಿಖೆಯಿಂದ ಬಹಿರಂಗಗೊಂಡಿದ್ದು, ಅಣ್ಣನ ಮೇಲಿನ ಸಿಟ್ಟಿನಿಂದ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ಜು.5 ರಂದು ಇಟಗಾದ ಕಾಮಣ್ಣ ದೊಡ್ಡ ಹಣಮಂತ ಮೃತದೇಹ ಅವರ ಮನೆಯ ಸಂದಿಯಲ್ಲಿ ಬಿದ್ದಿತ್ತು. ಮನೆಯ ಛತ್ತಿನ ಮೇಲಿನಿಂದ ಬಿದ್ದು ಮೃತಪಟ್ಟಿರಬೇಕು ಎಂದು ಅಂತ್ಯಕ್ರಿಯೆ ಮಾಡಲಾಗಿತ್ತು. ಮಗನ ಸಾವಿನ ಕುರಿತು ಸಂಶಯವಿದೆ ಎಂದು ತಾಯಿ ಪಾರ್ವತಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಸಂಶಯಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕಾಮಣ್ಣನ ಶವವನ್ನು ತಹಸೀಲ್ದಾರ್ ನೇತೃತ್ವದಲ್ಲಿ ಹೊರಗೆ ತೆಗೆಸಿ ಮರಣೋತ್ತರ ಶವಪರೀಕ್ಷೆ ಮಾಡಿಸಿದ್ದರು. ಶವ ಪರೀಕ್ಷೆ ವರದಿ ಬಳಿಕ ಕೊಲೆ ಆಗಿರುವ ಕುರಿತು ಖಚಿತಪಡಿಸಿಕೊಂಡು ತನಿಖೆ ಆರಂಭಿಸಿದರು.

ಸೇಡಂ ತಾಲೂಕಿನ ತೊಲಮಾಮಡಿ ಗ್ರಾಮದಲ್ಲಿ ಹೊಲ ಖರೀದಿ ಮಾಡಿದ್ದು, ಮಾರಾಟ ಮಾಡುವುದು ಬೇಡ ಎಂದರೂ ಕೇಳದೆ ಎರಡು ತಿಂಗಳ ಹಿಂದೆ 56 ಲಕ್ಷಕ್ಕೆ ಮಾರಾಟ ಮಾಡಲಾಗಿದೆ. ಹೊಲ ಮಾರಿದ ಹಣದಲ್ಲಿ ಸ್ವಲ್ಪ ತಂದೆ-ತಾಯಿ ಹೆಸರಿನಲ್ಲಿ ಇಟ್ಟ ಕಾಮಣ್ಣ, ಇನ್ನೂ ಸ್ವಲ್ಪ ಹಣವನ್ನು ತನ್ನ ಹೆಸರಿನಲ್ಲಿ ಇಟ್ಟಿದ್ದ. ಆದರೆ ತಮ್ಮ ಸುರೇಶನ ಹೆಸರಿನಲ್ಲಿ ಹಣ ಇಟ್ಟಿರಲಿಲ್ಲ. ಕೇಳಿದರೂ ಕೊಟ್ಟಿರಲಿಲ್ಲ ಎಂದು . ಇದರಿಂದ ಅಣ್ಣನ ವಿರುದ್ಧ ವೈಷಮ್ಯದಿಂದ ಕೊಲೆ ಮಾಡಿದ್ದಾನೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಧಿಕಾರಿಗಳ ತಲೆದಂಡ

← ಮೊದಲಪುಟದಿಂದ

ದರ್ಶನ್ ಇದೇ ಜೈಲಿನಲ್ಲಿದ್ದರೆ ನಾಗನಂತಹ ರೌಡಿಗಳೊಂದಿಗೆ ಸೇರಿ ಸಾಕ್ಷಿ ಮೇಲೆ ಬೆದರಿಕೆ ಹಾಕಿಸುವ ಸಾಧ್ಯತೆಯಿದೆ. ಜತೆಗೆ ದರ್ಶನ್‌ರನ್ನು ನೋಡಲು ಪದೇ ಪದೆ ವಿಐಪಿಗಳು ಬರುವುದರಿಂದ ಕಾನೂನು ಸುವ್ಯವಸ್ಥೆಗೂ ಧಕ್ಕೆಯಾಗುತ್ತಿದೆ ಎನ್ನುವ ಕಾರಣಕ್ಕೆ ಸರಕಾರ ಸ್ಥಳಾಂತರ ನಿರ್ಧಾರಕ್ಕೆ ಬಂದಿದೆ ಎನ್ನಲಾಗಿದೆ.

ಸಿಗರೇಟು, ಮದ್ಯ, ಬಾಡೂಟ: ಆರೋಪಿ ದರ್ಶನ್ ನಾಮ್ ಕಾವಾಸ್ತೆಗಷ್ಟೆ ಜೈಲಿನಲ್ಲಿದ್ದು, ಪರಪ್ಪನ ಅಗ್ರಹಾರ ಜೈಲಿನಲ್ಲೇ ಆತನಿಗೆ ಎಲ್ಲಾ ಸೌಲಭ್ಯ ಸಿಗುತ್ತಿದೆ. ಜೈಲಿನ ಅಧಿಕಾರಿಗಳು, ರೌಡಿ ಗಳಿಂದಲೇ ದರ್ಶನ್‌ಗೆ ಎಲ್ಲ ವ್ಯವಸ್ಥೆಯಾಗುತ್ತಿದೆ. ಸಿಗರೇಟ್ ಮಾತ್ರವಲ್ಲ ಬೇಕಾದ ಎಲ್ಲಾ ವಸ್ತುಗಳೂ ದರ್ಶನ್‌ಗೆ ಲಭ್ಯವಾಗುತ್ತಿದೆ. ದರ್ಶನ್ ಇಚ್ಛಿಸುವ ಹೋಟೆಲಿನಿಂದಲೇ ಜೈಲಿಗೆ ನೇರವಾಗಿ ಊಟ ತರಿಸಲಾಗುತ್ತಿದೆ. ಪ್ರತಿದಿನ ದರ್ಶನ್ ಇರುವ ಹೈ ಸೆಕ್ಯೂರಿಟಿ ಬ್ಯಾರಕ್‌ನಲ್ಲಿಯೇ ಪಾರ್ಟಿ ನಡೆ ಯುತ್ತಿದೆ. ಈ ಪಾರ್ಟಿಯಲ್ಲಿ ರೌಡಿಶೀಟರ್‌ಗಳಾದ ವಿಲ್ಸನ್ ಗಾರ್ಡನ್ ನಾಗ, ಬೇಕರಿ ರಘು, ಆಪ್ತ ನಾಗರಾಜ್, ಪವನ್ ಭಾಗಿಯಾಗುತ್ತಿದ್ದರು ಎಂಬುದು ಬೆಳಕಿಗೆ ಬಂದಿದೆ.

ಎಲ್ಲ ಆರೋಪಿಗಳು ಶಿಫ್ಟ್: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳು ಸೇರಿ 26 ಆರೋಪಿಗಳನ್ನು ಶಿಫ್ಟ್ ಮಾಡಲು ತೀರ್ಮಾನಿಸಲಾಗಿದೆ. ಈಗಾಗಲೇ ಕೋಕಾ ಕಾಯಿದೆಯಡಿ ಇರುವವರನ್ನು ಶಿಫ್ಟ್ ಮಾಡಲು ಬೆಂಗಳೂರು ಪೊಲೀಸರು ಪತ್ರ ಬರೆದಿದ್ದಾರೆ. ಆದ್ದರಿಂದ ಕಾನೂನು ಸಂಬಂಧಿತ ಸಂಗತಿಗಳನ್ನು ಜೈಲು ಅಧಿಕಾರಿಗಳು ಚರ್ಚೆ ನಡೆಸಲಿದ್ದಾರೆ. ಹಿಂಡಲಗಾ ಅಲ್ಲದೆ ಬಳ್ಳಾರಿ, ಮೈಸೂರು, ತುಮಕೂರು, ಹುಬ್ಬಳ್ಳಿ ಧಾರವಾಡ ಜೈಲಿಗೂ ಕಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಡ್ರಗ್ ಸೇವನೆ ದೃಢ

ಉಡುಪಿ: ಕಾರ್ಕಳ ಯುವತಿ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾದಕ ದ್ರವ್ಯ ಸೇವನೆ ಕುರಿತು ಸಂತ್ರಸ್ತೆ ಹಾಗೂ ಆರೋಪಿಗಳ ರಕ್ತದ ಮಾದರಿಯ ಪರೀಕ್ಷೆ ನಡೆಸಲಾಗಿದೆ. ಸಂತ್ರಸ್ತೆಯ ವರದಿಯಲ್ಲಿ ಪಾಸಿಟಿವ್ ಮತ್ತು ಆರೋಪಿಗಳಾದ ಅಲ್ತಾಫ್, ಸವೇರಾ ರಿಚರ್ಡ್ ವರದಿಯಲ್ಲಿ ನೆಗೆಟಿವ್ ಬಂದಿದೆ ಎಂದು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ. ಯುವತಿಯ ರಕ್ತದ ಮಾದರಿಯಲ್ಲಿ ಮಾದಕ ದ್ರವ್ಯ ಪಾಸಿಟಿವ್ ಬಂದಿರುವ ಹಿನ್ನೆಲೆಯಲ್ಲಿ ಆರೋಪಿ ಅಲ್ತಾಫ್‌ನನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಈ ವೇಳೆ, ಆತ ತನ್ನ ಕಾರಿನಲ್ಲಿದ್ದ ಒಂದು ಪುಡಿಯನ್ನು ತೋರಿಸಿ, ಇದನ್ನೇ ಆ ಹುಡುಗಿ ತೆಗೆದುಕೊಂಡಿದ್ದಾಗಿ ತಿಳಿಸಿದ್ದಾನೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಲಬುರಗಿ ವಲಯ, ಕಲಬುರಗಿ
ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105, ದೂ: 08472-220817,
E-mail ID : kwbceklb14@gmail.com

ಸಂ. ಕಜಮ/ಮುಅಕ/ತಾಂತ್ರಿಕ/ನೀ.ಸ/ಆರ್.ಸಿ.ಆರ್-ಟೌನ್ಸ್/ಅಮೃತ್-2.0/2024-25/592 ದಿ.: 23-08-2024

-: ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಸೂಚನೆ - 5ನೇ ಕರೆ :-

1) ಕಾಮಗಾರಿಯ ವಿವರ : ಅಮೃತ್-2.0 ಯೋಜನೆಯಡಿ ರಾಯಚೂರು ಜಿಲ್ಲೆಯ ಹಟ್ಟಿ, ಕವಿತಾಳ, ಮಾನ್ವಿ, ಮಸ್ಕಿ ಮತ್ತು ತುರವಿಹಾಳ್ ಪಟ್ಟಣಗಳಿಗೆ ನೀರು ಸರಬರಾಜು ಯೋಜನೆಯ ಜೊತೆಗೆ 05 ವರ್ಷದ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ (01 ವರ್ಷದ ಡಿಫೆಕ್ಟ್ ಲಿಯಬಾಲಿಟಿ ಅವಧಿ ಸೇರಿಸಿ) ಡಿಸೈನ್, ಬಿಲ್ಡ್, ಆಪರೇಟ್ ಮತ್ತು ಟ್ರಾನ್ಸ್‌ಫಾರ್ (DBOT) ಮುಖಾಂತರ (ಲಮ್ ಸಮ್) - ವೇರಿಯೇಷನ್ ಇರುವುದಿಲ್ಲ. **(ವರ್ಕ ಇಂಡೆಂಟ್ ಸಂಖ್ಯೆ : ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ/2024-25/ಡಬ್ಲ್ಯೂ.ಎಸ್/ವರ್ಕ_ಇಂಡೆಂಟ್245),** 2) ಕಾಮಗಾರಿಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ) : **16602.92,** 3) ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ) : **196.00** 4) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 5) ಕಾಮಗಾರಿ ಪೂರ್ಣಗೊಳಿಸುವ ಅವಧಿ : 18 ತಿಂಗಳು (ಮಳೆಗಾಲ ಸೇರಿ), 6) ಇ- ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ : **27-08-2024 ಸಮಯ 13:00 ಗಂಟೆಯ ನಂತರ,** 7) ಪೂರ್ವಭಾವಿ ಟೆಂಡರ್ ಸಭೆ ದಿನಾಂಕ: **02-09-2024 ಸಮಯ 11:30 ಗಂಟೆಯವರೆಗೆ,** 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **10-09-2024 ಸಮಯ 17:30 ಗಂಟೆಯವರೆಗೆ,** 9) ಟೆಂಡರ್ ತೆರೆಯುವ ದಿನಾಂಕ: **12-09-2024 ಸಮಯ 11:00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105 ದೂ: 08472-220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/- ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/372/ಕೆ.ಎಸ್.ಎಂ.ಸಿ.&ಎ/2024-25

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು(ವಿದ್ಯುತ್)ರವರ ಕಛೇರಿ, ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯ, ಮೈಸೂರು-570020. ಇ-ಮೇಲ್: eeelectricalmcc@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಅ(ವಿ)/ಟಿಎನ್-08/91/2024-25 **ದಿನಾಂಕ: 23.08.2024**

ಟೆಂಡರ್ ಪ್ರಕಟಣೆ-08
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಪಬ್ಲಿಕ್-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಸಂಸ್ಥೆಯವರಿಂದ/ಬಿಡ್‌ದಾರರಿಂದ KW-1 and KW-2 ನಿಯಮಗಳಿಗೆ ಒಳಪಟ್ಟಂತೆ ಟೆಂಡರನ್ನು ಕರ್ನಾಟಕ ಪಬ್ಲಿಕ್-ಪ್ರೊಕ್ಯೂರ್‌ಮೆಂಟ್-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಇ.ಎಂ.ಡಿ ಯನ್ನು ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	ಮೈಸೂರು ಮಹಾನಗರ ಪಾಲಿಕೆಯ ವಲಯ-5 ರ ವಾರ್ಡ್ ಸಂಖ್ಯೆ 2, 3, 4, 5, 7 ಹಾಗೂ 20ರಲ್ಲಿ ಬೀದಿ ದೀಪಗಳಿಗೆ Infrastructure Gap ಅನ್ನು ನಿರ್ವಹಿಸುವ ಕಾಮಗಾರಿ (ಎಸ್.ಟಿ ಮೀಸಲಾತಿ).	7.00	8,750
2.	ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 52, 54, 55 ಹಾಗೂ 61ರಲ್ಲಿನ ಬೀದಿ ದೀಪಗಳಿಗೆ Infrastructure Gap ಅನ್ನು ನಿರ್ವಹಿಸುವ ಕಾಮಗಾರಿ (ಎಸ್.ಸಿ ಮೀಸಲಾತಿ).	7.00	8,750
3.	ಮೈಸೂರು ಮಹಾನಗರ ಪಾಲಿಕೆಯ ಮಾನ್ಯ ಆಯುಕ್ತರ ನಿವಾಸದ ವಿದ್ಯುತ್ ವೈರಿಂಗ್ ದುರಸ್ಥಿ ಹಾಗೂ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರ ಆವರಣದಲ್ಲಿ ಬೆಳಕಿನ ವ್ಯವಸ್ಥೆಗೆ ಯು.ಜಿ.ಕೇಬಲ್ ಅಳವಡಿಸುವುದು ಮತ್ತು ವಸತಿಗೃಹ ಸಂಖ್ಯೆ 02 ಮತ್ತು 04ರ ವಿದ್ಯುತ್ ವೈರಿಂಗ್ ದುರಸ್ಥಿಪಡಿಸುವ ಕಾಮಗಾರಿ (ಎಸ್.ಸಿ ಮೀಸಲಾತಿ).	18.30	22,875
4.	ಮೈಸೂರು ಮಹಾನಗರ ಪಾಲಿಕೆಯ ವಿದ್ಯಾರಣ್ಯಪುರಂನಲ್ಲಿರುವ ಘನ ತ್ಯಾಜ ಸಂಸ್ಕರಣ ಘಟಕದ ವಿದ್ಯುತ್ ವ್ಯವಸ್ಥೆಗಾಗಿ ಇರುವ ಹೆಚ್.ಟಿ ಯಾರ್ಡ್ ಹಾಗೂ 160 ಕೆ.ವಿ.ಎ ಟ್ರಾನ್ಸ್‌ಫಾರ್ಮರ್ Overauling and Servicing ಕಾಮಗಾರಿ.	2.25	5,625
5	ಮೈಸೂರು ಮಹಾನಗರ ಪಾಲಿಕೆಯ ವಲಯ ಕಛೇರಿ-7 ರ ವಾರ್ಡ್ ನಂ-17 ರ ವ್ಯಾಪ್ತಿಯ ಎಸ್.ಪಿ ಆಫೀಸ್ ಸರ್ಕಲ್‌ನಿಂದ ಫೋರಂ ಮಾಲ್ ಹೋಗುವ ರಸ್ತೆಗೆ ಅಡ್ಡಲಾಗಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿ.	10.15	25,375
6	ಮೈಸೂರು ಮಹಾನಗರ ಪಾಲಿಕೆಯ ವಲಯ-5ರ ವಾರ್ಡ್ ಸಂಖ್ಯೆ 20 ರ ವಿಜಯನಗರ 2ನೇ ಹಂತದ 7ನೇ ಮುಖ್ಯ ರಸ್ತೆಯಿಂದ 14ನೇ ಮುಖ್ಯ ರಸ್ತೆಯಲ್ಲಿರುವ ಉದ್ಯಾನವನ, ಕೃಷ್ಣದೇವರಾಯ ಪ್ರತಿಮೆಯ ಉದ್ಯಾನವನ ಹಾಗೂ ವಿಜಯನಗರ ಆರಕ್ಷಕ ಠಾಣೆಯ ಹತ್ತಿರವಿರುವ ಉದ್ಯಾನವನದಲ್ಲಿ ಭೂಗತ ಕೇಬಲ್ ಹಾಳಾಗಿದ್ದು, ಹೊಸ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ಹಾಗೂ ವಾರ್ಡ್ ನಂ 04 ರ ಬಸವನಗುಡಿ ಉದ್ಯಾನವನದ ಹತ್ತಿರ ವಿದ್ಯುತ್ ಕಾಮಗಾರಿ.	5.25	13,125
	ಮರು-ಟೆಂಡರ್ ಕಾಮಗಾರಿಯ ವಿವರ		
7	ಮೈಸೂರು ಮಹಾನಗರ ಪಾಲಿಕೆಯ ಕೆಸರೆ ತ್ಯಾಜ್ಯ ನೀರು ಶುದ್ದೀಕರಣ ಘಟಕದ ವೇಸ್ಟ್ ಲಗೂನ್‌ನಲ್ಲಿರುವ ಏರಿಯೇಟರ್ ಮೋಟಾರ್‌ಗಳನ್ನು ನವೀಕರಿಸುವ ಕಾಮಗಾರಿ.	48.00	96,000
8	ಮೈಸೂರು ಮಹಾನಗರ ಪಾಲಿಕೆಯ ವಲಯ-8 ರ ವ್ಯಾಪ್ತಿಯಲ್ಲಿನ ವಾರ್ಡ್ ಸಂಖ್ಯೆ 14ರ ಉದಯಗಿರಿ ಪಿ&ಟಿ ಕ್ವಾಟ್ರಸ್ ಬಳಿ ನಿರ್ಮಿಸಿರುವ ಬೀದಿಬದಿ ವ್ಯಾಪಾರಿಗಳ ಯೋಜನೆಯ Street Vending Zone ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಕಾಮಗಾರಿ (ಎಸ್.ಸಿ ಮೀಸಲಾತಿ).	3.80	4,750
9	ಮೈಸೂರು ಮಹಾನಗರ ಪಾಲಿಕೆ ವಲಯ ಕಛೇರಿ-6 ರ ವ್ಯಾಪ್ತಿಯಲ್ಲಿನ ವಾರ್ಡ್‌ಗಳಲ್ಲಿ ಬರುವ ವಿವಿಧ ರಾಷ್ಟ್ರೀಯ ಹಬ್ಬಗಳು, ಜಯಂತಿಗಳು ಹಾಗೂ ಪರಿನಿರ್ವಾಣ ದಿನಗಳಿಗೆ ತಾತ್ಕಾಲಿಕವಾಗಿ ಅಲಂಕಾರಿಕ ದೀಪಾಲಂಕಾರ ಕಲ್ಪಿಸುವ ಕಾಮಗಾರಿ (ಎಸ್.ಟಿ ಮೀಸಲಾತಿ).	10.00	12,500

ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಕೆ.ಪಿ.ಪಿ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	23-08-2024	ಬೆಳಿಗ್ಗೆ 12.00 ಗಂಟೆಯ ನಂತರ
2.	ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ	29-08-2024	5.00 ಗಂಟೆಯವರೆಗೆ
3.	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ	09-09-2024	16:30 ಗಂಟೆಯವರೆಗೆ.
4.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲ	10-09-2024	17:00 ಗಂಟೆಯ ನಂತರ

Goods -ಟೆಂಡರ್ ಕಾಮಗಾರಿಯ ವಿವರ

10	ಮೈಸೂರು ಮಹಾನಗರ ಪಾಲಿಕೆಯ ವಿವಿಧ ಭಾಗಗಳಿಗೆ ಮತ್ತು ವಲಯ ಕಚೇರಿಗಳಿಗೆ ಕಂಪ್ಯೂಟರ್‌ಗಳನ್ನು ಖರೀದಿಸುವ ಬಗ್ಗೆ.	49.17	98,400
	ಒಟ್ಟು ಮೊತ್ತ	160.92	

ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಕೆ.ಪಿ.ಪಿ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	26-08-2024	ಬೆಳಿಗ್ಗೆ 12.00 ಗಂಟೆಯ ನಂತರ
2.	ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ	30-08-2024	5.00 ಗಂಟೆಯವರೆಗೆ
3.	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ	11-09-2024	16:30 ಗಂಟೆಯವರೆಗೆ.
4.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲ	13-09-2024	17:00 ಗಂಟೆಯ ನಂತರ

ಸಹಿ/- ಕಾರ್ಯಪಾಲಕ ಅಭಿಯಂತರರು (ವಿ),
ಮೈಸೂರು ಮಹಾನಗರ ಪಾಲಿಕೆ, ಮೈಸೂರು.
DIPR/MYS/KAVITA/468/24-25

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಜೆಇ-1/ಟೆಂಡರ್/2024-25 ದಿನಾಂಕ: 17.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-03/2024-25
(ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಟೆಂಡರ್‌ಗಳನ್ನು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆ.ಪಿ.ಪಿ.ಪೋರ್ಟಲ್) (ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್ ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-560 025, ದೂರವಾಣಿ: 080-22485867, 080-22485927)ರಲ್ಲಿ ನೊಂದಾಯಿಸಿದ ಅರ್ಹ ಏಜೆನ್ಸಿ/ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ತುಮಕೂರು ಮತ್ತು ಉಪ ವಿಭಾಗಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್ ಮತ್ತು ಡಿ-ಗ್ರೂಪ್ ನೌಕರರನ್ನು ಸರಬರಾಜು ಮಾಡುವ ಕಾಂಗಾರಿ ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://kppp.karnataka.gov.in ಮುಖಾಂತರ ದಿನಾಂಕ: 19.08.2024 ರಿಂದ 02.09.2024 ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಟೆಂಡರ್ ತೆರೆಯುವ ದಿನಾಂಕ: 03.09.2024 ರಂದು ಸಂಜೆ 5.10 ಗಂಟೆ ನಂತರ. ಈ ಬಗ್ಗೆ ಸಂಪೂರ್ಣ ವಿವರಗಳನ್ನು https://kppp.karnataka.gov.in ನಲ್ಲಿ ಲಾಗ್‌ಇನ್ ಆಗುವ ಮುಖಾಂತರ ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816-2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ-ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
DIPR/TUM/273/KSMCA/2024-25 ಪಂ.ರಾ.ಇಂ. ವಿಭಾಗ, ತುಮಕೂರು.

ಎಸ್.ವಿ.ಸಿ. ಕೋ - ಆಪರೇಟಿವ್ ಬ್ಯಾಂಕ್ ಲಿ.
ಪ್ರಧಾನ ಕಚೇರಿ : ಕಾನೂನು ಮತ್ತು ವಸೂಲಾತಿ ವಿಭಾಗ
ಎಸ್.ವಿ.ಸಿ. ಟವರ್, ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ-400055.
ಫೋನ್ ನಂ: 66999980/66999982/66999929.

ಸ್ವಾಧೀನತೆಯ ಪ್ರಕಟಣೆ

ಈ ಕೆಳ ಸಹಿದಾರರು ಎಸ್ ವಿ ಎಸ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, (ಈ ಮೊದಲು "ದಿ ಶಾಮರಾವ್ ವಿಠ್ಠಲ್ ಕೋಆಪರೇಟಿವ್ ಬ್ಯಾಂಕ್ ಲಿ") ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಝೇಷನ್ ಮತ್ತು ರಿಕನ್ಸಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2000 ದ ಅಡಿಯಲ್ಲಿ, ತಿದ್ದುಪಡಿ ಮಾಡಲಾಗಿರುವ ದಿ ಎನ್ಫೋರ್ಸ್ಮೆಂಟ್ ಸೆಕ್ಯೂರಿಟಿ ಇಂಟರೆಸ್ಟ್ ಅಂಡ್ ರಿಕವರಿ ಆಫ್ ಡೆಬ್ಟ್ ಲಾಸ್ (ತಿದ್ದುಪಡಿ) ಆಕ್ಟ್ 2016, (2016 ರ 44) ಮತ್ತು ತದನಂತರ ತಿದ್ದುಪಡಿಯಾದ ಸೆಕ್ಯೂರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್) (ಅಮೆಂಡ್ಮೆಂಟ್) ರೂಲ್ಸ್ 2018 ಮತ್ತು ಸೆಕ್ಷನ್ 13 (12), ಸೆಕ್ಯೂರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್ಸ್) ರೂಲ್ಸ್ 2002 ರ ರೂಲ್ಸ್ 3ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 10.10.2017 ರಂದು ಡಿಮ್ಯಾಂಡ್ ನೋಟೀಸ್‌ನ್ನು ಸೆಕ್ಷನ್ 13(2) ನಿಯಮದಡಿಯಲ್ಲಿ 1. ಮೆ// ಫ್ಲೀಟಿನ್ವೆಲಿ ಸರ್ವ್ ಪ್ರೈ ಲಿಮಿಟೆಡ್, ನೋಂದಾಯಿತ ಕಚೇರಿ ಎಂ -2, ಇನ್ಲ್ಯಾಂಡ್ ಅವೆನ್ಯೂ, ಕಮರ್ಷಿಯಲ್ ಕಾಂಪ್ಲೆಕ್ಸ್ ಬಿಲ್ಡಿಂಗ್, ಕೊಡಿಯಾಲಬೈಲ್, ಮಂಗಳೂರು 575002 ಮತ್ತು 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು ಎಸ್ ಟಿ ಪಿ ಐ, 4ನೆ ಮಹಡಿ, ಐ ಟಿ ಪಾರ್ಕ್, ಹುಬ್ಬಳ್ಳಿ – 580020 ಮತ್ತು 825, 12 ನೇ ಅಡ್ಡ ರಸ್ತೆ, ಕಲಾಂತ್ರ ಟೆಕ್ನಾಲಜಿ, ಸಿದ್ದಾರ್ಥ್ ಲೇಔಟ್, ಮೈಸೂರು, ಕರ್ನಾಟಕ ಮತ್ತು ಯೂನಿಟ್ ನಂ. 2 ಮತ್ತು 3, ಮೇಲಿನ ನೆಲ ಮಹಡಿ, ರುಕ್ಮಿಣಿ ಕುಂಜ್ ಅಪಾರ್ಟ್ಮೆಂಟ್, ಸಿ ಎಸ್ ನಂ.599 ರಲ್ಲಿ ನಿರ್ಮಾಣಗೊಂಡಿದೆ, ಗುರುವಾರ್ ಪೇಟ್, ಸತಾರ, 2. ಶ್ರೀಮತಿ ಗುಡಿಬಂಡೆ ಸುಬ್ಬ ರಾವ್ ಶಿವರಂಜನಿ, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು 98, ಮೈಕ್ರೋ ಲೇಔಟ್, ಅರಕೆರೆ, ಬೆಂಗಳೂರು – 560076. ಮತ್ತು C/O ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೆ ಕ್ರಾಸ್, 19ನೆ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೆ ಹಂತ, ಬೆಂಗಳೂರು, ಕರ್ನಾಟಕ – 560070. 3. ಶ್ರೀಮತಿ ನಾಗಜ್ಯೋತಿ ಗುಡಿಬಂಡೆ ಸುಬ್ಬ ರಾವ್, ವಿಳಾಸ : ನ್ಯೂ ಲಕ್ಷ್ಮೀಪುರ ಎಕ್ಸಟೆನ್ಶನ್, ಮಂಚನಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ – 562211, 4. ಶ್ರೀ ರಘುರಾಮ್ ರಾವ್, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು C/O ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೆ ಕ್ರಾಸ್, 19ನೆ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೆ ಹಂತ, ಬೆಂಗಳೂರು, ಕರ್ನಾಟಕ – 560070 ಮತ್ತು 98, ಮೈಕ್ರೋ ಲೇಔಟ್, ಅರಕೆರೆ, ಬೆಂಗಳೂರು – 560076. ಇವರಿಗೆ ಒಟ್ಟು ಬಾಕಿ ಮೊತ್ತ ದಿನಾಂಕ: 30.09.2017ರಂತೆ ರೂ. 37,75,246/– (ರೂಪಾಯಿಗಳು ಮೂವತ್ತೇಳು ಲಕ್ಷ ಎಪ್ಪತ್ತೈದು ಸಾವಿರದ ಎರಡುನೂರಾ ನಲವತ್ತಾರು ಮಾತ್ರ) ಜೊತೆಗೆ ದಿನಾಂಕ: 01.10.2017 ರಿಂದ ಒಪ್ಪಂದದಂತೆ ನಂತರದ ಬಡ್ಡಿ ಹಾಗೂ ಕಾನೂನಾತ್ಮಕ ವೆಚ್ಚವನ್ನು ಈ ನೊಟೀಸ್ ನೀಡಿದ 60 ದಿನಗಳ ಒಳಗೆ ಪಾವತಿಸುವಂತೆ ಸೂಚಿಸಲಾಗಿತ್ತು.

ಆದಾಗ್ಯೂ ಮೇಲೆ ಉಲ್ಲೇಖಿಸಲಾದ ಸಾಲಗಾರರು/ಅಡಮಾನದಾರರು ಪೂರ್ತಿ ಹಣವನ್ನು ಬಡ್ಡಿ ಸಮೇತ ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಮೇಲ್ಕಂಡ ಸಾಲಗಾರರು/ಅಡಮಾನದಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ದಿನಾಂಕ : 04.01.2018 ರಂದು ನೀಡಿರುವ ಸಾಂಕೇತಿಕ ಸ್ವಾಧೀನದ ನೋಟಿಸ್‌ನ್ನು ತಾಂತ್ರಿಕ ಕಾರಣಗಳಿಂದ ಹಿಂಪಡೆಯಲಾಗಿದ್ದು ಕೆಳಸಹಿದಾರರಾದ ಅಧಿಕೃತ ಅಧಿಕಾರಿಯವರು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಸೆಕ್ಷನ್ 13(4) ರ ಕಾಯಿದೆಯನ್ವಯ ನಿಯಮ 8ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 21.08.2024 ರಂದು ಸಾಂಕೇತಿಕ ಸ್ವಾಧೀನ ಪಡೆದುಕೊಂಡಿರುತ್ತಾರೆ.

ಸಾರ್ವಜನಿಕರು ಹಾಗೂ ಅಡಮಾನದಾರರು ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ಯಾವುದೇ ರೀತಿಯ ವ್ಯವಹಾರ ನಡೆಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ. ಹಾಗೂ ಅಂತಹ ಯಾವುದೇ ವ್ಯವಹಾರಗಳು ಎಸ್.ವಿ.ಸಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಸಂದಾಯವಾಗತಕ್ಕ ಮೊಬಲಗು ದಿನಾಂಕ 31.07.2024ರಂತೆ ರೂ.10,19,225/– (ರೂಪಾಯಿಗಳು ಹತ್ತು ಲಕ್ಷಗಳು ಹತ್ತೊಂಬತ್ತು ಸಾವಿರದ ಎರಡುನೂರಾ ಇಪ್ಪತ್ತೈದು ಮಾತ್ರ) ಮತ್ತು ಸಂಪೂರ್ಣ ಮೊಬಲಗು ಪಾವತಿಯಾಗುವರೆಗಿನ ಮತ್ತು 01.08.2024 ರಿಂದ ಅನ್ವಯಿಸುವ ಇತರ ಕಾನೂನು ವೆಚ್ಚ, ಖರ್ಚು ಇವುಗಳಿಗೆ ಋಣ ಬಾಧ್ಯರಾಗಿರುತ್ತಾರೆ.

ಸೆಕ್ಷನ್ 13ರ ಉಪ-ವಿಭಾಗ(8)ರ ಕಾಯಿದೆಗಳಲ್ಲಿ ಅವಕಾಶವಿರುವಂತೆ ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಲಭ್ಯವಿರುವ ಸಮಯದ ಒಳಗೆ ಭದ್ರತಾ ಸ್ವತ್ತುಗಳನ್ನು ಮತ್ತೆ ಗಳಿಸಿಕೊಳ್ಳಲು ಅವಕಾಶವಿರುತ್ತದೆ.

ಸ್ಥಿರಾಸ್ತಿಯ ವಿವರ

ಎಲ್ಲ ಭಾಗಗಳು ಮತ್ತು ಭಾಗಾಂಶಗಳು ಸೇರಿ ವಾಣಿಜ್ಯ ಆವರಣ ನಂ. ಎಂ -2, ಕಾರ್ಪೋರೇಶನ್ ಡೋರ್ ನಂ. 4-1-85/18, ವಿಸ್ತೀರ್ಣ ಅಂದಾಜು 190 ಚದರ ಅಡಿಗಳು, ಮೆಜಾನಿನ್ ಮಹಡಿಯಲ್ಲಿದೆ (ನೆಲಮಹಡಿಯ ಒಂದು ಭಾಗ), ಇನ್ಲ್ಯಾಂಡ್ ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್ ನಲ್ಲಿದೆ, ಜೊತೆಗೆ ಶೇ 0.30 ಅವಿಭಜಿತ ಪಾಲು ಸಾಮಾನ್ಯ ಪ್ರದೇಶಗಳಲ್ಲಿ ಮತ್ತು ಕಟ್ಟಡದ ಸೌಲಭ್ಯಗಳಲ್ಲಿ, ಕೆಳಗಿನ ಪಾಲುಗಳು ಸೇರಿ :

Item No.	R.S.No.	T.S.No.	Kissam	Extent A.C.
1	394	227/1(p)	Converted	0-35
2	394-2	227/2(P)	Converted	0-08
3	394-1	227/1(p)	Converted	0-01

ವಿಳಾಸ : ಕೊಡಿಯಾಲಬೈಲ್ ಗ್ರಾಮ, ಮಂಗಳೂರು ತಾಲೂಕು, ಕೊಡಿಯಾಲಬೈಲ್ ವಾರ್ಡ್, ಮಂಗಳೂರು ಮಹಾನಗರ ಪಾಲಿಕೆ ಮತ್ತು ನೋಂದಣಿ ಉಪ ಜಿಲ್ಲಾ, ಮಂಗಳೂರು ವ್ಯಾಪ್ತಿಯಲ್ಲಿ

ದಿನಾಂಕ : 21.08.2024 ಸಹಿ/-
ಸ್ಥಳ : ಮಂಗಳೂರು ಅಧಿಕೃತ ಅಧಿಕಾರಿಗಳು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಪ್ರ(ನಿ)/ರಾಮನಗರವೃತ್ತ/ಕಾನಿಇಂ(ಕ)/ಸಕಾನಿಇಂ-2/ಕ-34/24-25/1492-95 ದಿ: 23.08.2024

ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ, ವಿಚಾರಣೆ ಸಂಖ್ಯೆ: KPTCL/SEE/TR(M)/RMGC/EE(O)/AEE-2/Shift & Maintenance Dtd: 20.08.2024 ರ ಅನ್ವಯ ರಾಮನಗರ ವೃತ್ತದ ವ್ಯಾಪ್ತಿಯಲ್ಲಿ ಬರುವ ವಿವಿಧ 220ಕೆವಿ ಸ್ವೀಕರಣ ಕೇಂದ್ರ ಮತ್ತು 66ಕೆವಿ ಉಪಕೇಂದ್ರಗಳಲ್ಲಿ ಪಾಳಿ ನಿರ್ವಹಣೆ ಮತ್ತು ಸಣ್ಣ ಕಾರ್ಯಗಳನ್ನು ವ್ಯವಸ್ಥೆಗೊಳಿಸಲು ವಿವಿಧ ಪ್ಯಾಕೇಜ್(17ಬಿಡ್) ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ನ **"E Procurement KPTCL"** ಹೈಪರ್‌ಲಿಂಕ್ ಅಥವಾ **https://kppp.karnataka.gov.in** ಇಲ್ಲಿಗೆ **ದಿನಾಂಕ: 31.08.2024 ರಂದು ಅಥವಾ ಆನಂತರ** ಲಾಗಿನ್ ಆಗಿ ಪಡೆದುಕೊಳ್ಳಬಹುದು.

ಸಹಿ/-ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ನಿ), ರಾಮನಗರ ವೃತ್ತ,
ಕವಿಪ್ರನಿನಿ, ಆರ್.ಆರ್. ನಗರ ಮೆಟ್ರೋ ನಿಲ್ದಾಣದ ಎದುರು, ಪಂತರಪಾಳ್ಯ,
ಮೈಸೂರು ರಸ್ತೆ, ಬೆಂಗಳೂರು-560 026, ದೂರವಾಣಿ: 080-29620155.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ
Phone No: 08372-238782 Fax No. 08372-237268 E.Mail : eepwdgad@gmail.com
ನಂ:ಕಾನಿಇಂಗ:ಲೋಇ:ಪಿಬಿ-1 4 :ವಿವಿಧ: 2024-25/2093 ದಿನಾಂಕ: 23-08-2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ **ಒಟ್ಟು 100.60 ಲಕ್ಷ** ಮೊತ್ತದಲ್ಲಿ ಒಟ್ಟು 06 ಕಾಮಗಾರಿಗೆ **(ಕನಿಷ್ಟ ಮೊತ್ತ ರೂ: 10.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ: 20.60 ಲಕ್ಷ)** ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ- 1 ಹಾಗೂ 2 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. kppp. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- 14998, 14997 -SC, 14996, 15066, 15065-ST
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪಶ್ನೋತ್ತರ **ದಿನಾಂಕ: 02-09-2024** ಟೆಂಡರ್ ಸಲ್ಲಿಸುವ **ದಿನಾಂಕ: 04-09-2024** ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 05-09-2024** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06-09-2024**

Work Indent No:- 11404-call-2 SC
ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ **ದಿನಾಂಕ: 27-08-2024** ಟೆಂಡರ್ ಸಲ್ಲಿಸುವ **ದಿನಾಂಕ: 30-08-2024** ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 31-08-2024** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 02-09-2024**

GST shall be paid separately as per prevailing Government Order.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ
ವಾ.ಸಾ.ಇ/ಗದಗ/175/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಕೂಡ್ಲಿಗಿ ಉಪ ವಿಭಾಗ, ಕೂಡ್ಲಿಗಿ
E- mail ID: acfkudligi6@gmail.com

ಮಾನ್ಸೂನ್ ಬ್ಲಾಕ್ ನೆಡುತೋಪು ನಿರ್ಮಾಣ ಮಾಡುವುದು, ಬ್ಲಾಕ್ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ ಕೈಗೊಳ್ಳುವುದು, ರಸ್ತೆಬದಿ ಮುಂಗಡ ಕಾಮಗಾರಿ ಕೈಗೊಳ್ಳುವುದು, ಬ್ಲಾಕ್ ನೆಡುತೋಪು ಬೆಳೆಸುವುದು, ಸಸಿಗಳನ್ನು ಬೆಳೆಸುವುದು, ಸಸಿಗಳನ್ನು ನಿರ್ವಹಣೆ ಮಾಡುವುದು, ಬೆಂಕಿ ಕಾವಲುಗಾರರನ್ನು ನಿಯೋಜಿಸಿಕೊಳ್ಳುವ ಕಾಮಗಾರಿಗಳಿಗೆ ಟೆಂಡರ್ ಜರುಗಿಸುವ ಕುರಿತು. (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವಿಜಯನಗರ ವಿಭಾಗ, ಹೊಸಪೇಟೆ ಇವರ ಕಛೇರಿ ಅಧಿಸೂಚನೆ **ಸಂಖ್ಯೆ: :ಬಿಜಿಟಿ/ಟೆಂಡರ್/ಸಿಆರ್-/2024-25 ದಿನಾಂಕ : 23.08.2024 ರ** ಪ್ರಕಾರ 2024-25 ನೇ ಸಾಲಿನಲ್ಲಿ ವಿಜಯನಗರ ಅರಣ್ಯ ವಿಭಾಗದ ಕೂಡ್ಲಿಗಿ ಉಪ ವಿಭಾಗ ವ್ಯಾಪ್ತಿಗೆ ಒಳಪಡುವ ವಲಯಗಳಲ್ಲಿ ವಿವಿಧ ಯೋಜನೆಗಳಡಿ ಮಾನ್ಸೂನ್ ಬ್ಲಾಕ್ ನೆಡುತೋಪು ನಿರ್ಮಾಣ ಮಾಡುವುದು, ಬ್ಲಾಕ್ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ ಕೈಗೊಳ್ಳುವುದು, ರಸ್ತೆಬದಿ ಮುಂಗಡ ಕಾಮಗಾರಿ ಕೈಗೊಳ್ಳುವುದು, ಹಣ್ಣಿನ ಬ್ಲಾಕ್ ನೆಡುತೋಪು ಬೆಳೆಸುವುದು, ಸಸಿಗಳನ್ನು ಬೆಳೆಸುವುದು, ಸಸಿಗಳನ್ನು ನಿರ್ವಹಣೆ ಮಾಡುವುದು, ಬೆಂಕಿ ಕಾವಲುಗಾರರನ್ನು ನಿಯೋಜಿಸಿಕೊಳ್ಳುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಗದಿತ ನಮೂನೆ0ಯಲ್ಲಿ ದ್ವಿಲಕೋಟೆ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೊದಲನೇ ಬಾರಿ ಟೆಂಡರ್ ಜರುಗಿಸುವುದಕ್ಕೆ ದಿನಾಂಕ : **06.09.2024** ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಮತ್ತು ಎರಡನೇ ಬಾರಿ ಟೆಂಡರ್ ಜರುಗಿಸುವುದಕ್ಕೆ ದಿನಾಂಕ : **25.09.2024** ರಂದು ಮಧ್ಯಾಹ್ನ 3.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಹೊಸಪೇಟೆ ಉಪ ವಿಭಾಗ, ಕೂಡ್ಲಿಗಿ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/212

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಗೃಹಲಕ್ಷ್ಮೀ ಕೊಟ್ಟೆವೆಂದು ಬೀಗುವ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ನಮ್ಮ ರಾಜ್ಯದ ಜನ ಬಯಸುತ್ತಿರುವುದು ಮನೆಯಿಂದ ಹೊರಗೆ ಹೋಗ ಲಕ್ಷ್ಮೀ ಗೃಹಕ್ಕೆ ಸುರಕ್ಷಿತವಾಗಿ ಬರುವ ಯೋಜನೆಯನ್ನು. ರಾಜ್ಯದಲ್ಲಿ ಕಳೆದ ಏಳು ತಿಂಗಳಲ್ಲಿ 340 ಅತ್ಯಾಚಾರ ಪ್ರಕರಣಗಳು ದಾಖಲಾಗಿರುವುದು ದೇಶದೆದುರು ಕರ್ನಾಟಕ ರಾಜ್ಯವೇ ತಲೆತಗ್ಗಿಸುವಂತಾಗಿದೆ.

ಬೇಡರ ಕಣ್ಣಪ್ಪ, ಬೆಂಗಳೂರು

ಮಣಿಪುರ ಮಾತ್ರವಲ್ಲ, ಇಡೀ ದೇಶದ ಜನರು ಇದನ್ನೇ ಬೇಡುತ್ತಿದ್ದಾರೆ. ಆದರೆ ಪ್ರಧಾನಿ ಮೋದೀಜಿ ಅವರು ಕೇವಲ ಕೆಂಪುಕೋಟೆ ಮೇಲೆ ಮಾತ್ರ ಮಹಿಳಾ ಸುರಕ್ಷತೆ ನೀಡುತ್ತಿದ್ದಾರೆ. 3 ಸಾವಿರ ಮಹಿಳೆಯರ ಮಾನ ಕಳೆದ ಪ್ರಜ್ವಲ್ ರೇವಣ್ಣ ಮತ್ತು ಅವನ ಅಪ್ಪನ ಜತೆಗೆ ಮೋದೀಜಿ ಸ್ನೇಹ ಬೆಳೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ವಾಂತಿ -ಭೇದಿ: ಮೂವರು ಸಾವು

ಮಧುಗಿರಿ: ತಾಲೂಕಿನ ಬುಳ್ಳಸಂದ್ರ ಗ್ರಾಮದಲ್ಲಿ ಮುತ್ತುರಾಯ ಸ್ವಾಮಿ ಜಾತ್ರೆ ಪ್ರಯುಕ್ತ ಮನೆಯಲ್ಲಿ ಮಾಡಿದ್ದ ಅಡುಗೆ ಊಟ ಮಾಡಿ ವಾಂತಿ, ಭೇದಿ ಕಾಣಿಸಿಕೊಂಡು ಮೂವರು ಸಾವನ್ನಪ್ಪಿದ್ದಾರೆ. ತಿಮ್ಮಕ್ಕ (85), ಗಿರಿಯಮ್ಮ (90) ಹಾಗೂ ಮಡಕಶಿರಾ ತಾಲೂಕಿನ ಸಿದ್ದಗಿರಿ ಗ್ರಾಮದ ಕಾಟಮ್ಮ (45) ಮೃತರಾಗಿದ್ದು , ಅಸ್ವಸ್ಥರಾಗಿರುವ 6 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತಾಲೂಕಿನ ಬುಳ್ಳಸಂದ್ರ ಗ್ರಾಮದಲ್ಲಿ ಮುತ್ತುರಾಯ ಸ್ವಾಮಿ ಜಾತ್ರೆಗಾಗಿ ಮನೆಯಲ್ಲಿ ಅಡುಗೆ ಮಾಡಿದ್ದರು. ಆಹಾರ ಸೇವನೆಯಿಂದಾಗಿ 8 ಮಂದಿಗೆ ವಾಂತಿ, ಭೇದಿ ಕಾಣಿಸಿಕೊಂಡಿದೆ. ತೀವ್ರವಾಗಿ ಅಸ್ವಸ್ಥರಾಗಿದ್ದ ಮೂವರು ಮೃತಪಟ್ಟಿದ್ದಾರೆ. ಬುಳ್ಳಸಂದ್ರ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಕ್ಲಿನಿಕ್ ತೆರೆದು ಚಿಕಿತ್ಸೆ ನೀಡಲಾಗುತ್ತಿದೆ. ತೀವ್ರವಾಗಿ ಅಸ್ವಸ್ಥರಾಗಿದ್ದ ಇಬ್ಬರನ್ನು ಮಧುಗಿರಿ ಸಾರ್ವಜನಿಕ ಆಸ್ಪತ್ರೆಗೆ ಸೇರಿಸಲಾಗಿದೆ. ಸ್ಥಳಕ್ಕೆ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಾ.ಪಂ ಇಒ ಲಕ್ಷ್ಮಣ್, ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, ಪಿಡಿಒ ದಯಾನಂದ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾರು ಪಲ್ಟಿ: ನಾಲ್ವರಿಗೆ ಗಂಭೀರ ಗಾಯ

ತುಮಕೂರು: ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾದ ಪರಿಣಾಮ ನಾಲ್ವರು ಗಂಭೀರ ಗಾಯಗೊಂಡ ಘಟನೆ ತುಮಕೂರು ಜಿಲ್ಲೆ ಶಿರಾ ತಾಲೂಕಿನ ಚಿಕ್ಕನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ನಡೆದಿದೆ. ಕುಟುಂಬವೊಂದು ಸ್ವಿಫ್ಟ್ ಕಾರಿನಲ್ಲಿ ಬೆಂಗಳೂರಿನಿಂದ ಬಳ್ಳಾರಿ ಕಡೆಗೆ ಹೊರಟಿತ್ತು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಗಾಯಾಳುಗಳನ್ನು ಕೂಡಲೇ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಕಳ್ಳಂಬೆಳ್ಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ, ರಾಜ್ಯಪಾಲರಿಗೆ ಪತ್ರ ಬರೆಯುತ್ತೇನೆ

ಹುಬ್ಬಳ್ಳಿ: ನಟ ದರ್ಶನ್ ಪ್ರಕರಣದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಈ ವಿಚಾರವಾಗಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರಿಗೆ ಪತ್ರ ಬರೆಯುವುದಾಗಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜೈಲಿನಲ್ಲಿ ಇರುವ ಕೊಲೆ ಆರೋಪಿ ದರ್ಶನ್‌ಗೆ ರಾಜಾತಿಥ್ಯ ನೀಡುತ್ತಿರುವ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದರು. ದರ್ಶನ್ ಪ್ರಕರಣದಲ್ಲಿ ರಾಜ್ಯ ಸರಕಾರಕ್ಕೆ ಗಂಭೀರತೆಯೇ ಇಲ್ಲ ಎಂದು ಕಿಡಿಕಾರಿದ್ದಾರೆ. ರಾಜಾತಿಥ್ಯ ನೀಡಿದ ಹಿನ್ನೆಲೆಯಲ್ಲಿ ಈಗ ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಿದ್ದಾರೆ. ಇಷ್ಟು ದಿನ ಸರಕಾರ ಏನು ಕತ್ತೆ ಕಾಯುತ್ತಿತ್ತಾ? ಇದರಲ್ಲಿ ಕೆಲವು ರಾಜಕಾರಣಿಗಳ ಹಸ್ತಕ್ಷೇಪವೂ ಇದೆ. ದರ್ಶನ್ ಪ್ರಕರಣದಲ್ಲಿ ಸಾಕ್ಷಿ ನಾಶ ಮಾಡಲು ಪ್ಲ್ಯಾನ್ ಮಾಡಿದಂತಿದೆ. ಇದನ್ನು ನೋಡಿದರೆ ಸರಕಾರವೇ ದರ್ಶನ್ ರಕ್ಷಣೆಗೆ ನಿಂತಿದೆ ಅನಿಸುತ್ತದೆ. ಸರಕಾರ ಏನೋ ಸಂಚು ಮಾಡುತ್ತಿದೆ ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.



ಭಟ್ರೇ, ನಿಮ್ಮ 'ಕುಡಿಯೋಣ ಬಾರಾ' ಓದಿದೆ. ಬಹಳ ಮಜಾ ಇದೆ. ಕುಡಿತದ ಬಗ್ಗೆ ಇಂಥದೊಂದು ಪುಸ್ತಕವನ್ನು ಓದಿರಲಿಲ್ಲ. ಕುಡಿಯುವವರು, ಕುಡಿಯದವರು ಓದಲೇಬೇಕಾದ ಕೃತಿ.
- ನವೀನ್ ಗೌಡ, ಮಂಡ್ಯ
ಸಾಮಾಜಿಕ ಕಾರ್ಯಕರ್ತರು

ಗೋಕಾಕ್, ಅರಭಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ | ಮೈತ್ರಿ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

ನನ್ನ ವಿರುದ್ಧದ ಷಡ್ಯಂತ್ರ ಸೋಲಿಸೋಣ

ಬೆಳಗಾವಿ: ಸುದೀರ್ಘ 40 ವರ್ಷಗಳ ರಾಜಕೀಯ ಬದುಕಿನಲ್ಲಿ ಒಂದೂ ಕಪ್ಪು ಚುಕ್ಕೆ ಇಟ್ಟುಕೊಳ್ಳದ ನನ್ನ ವಿರುದ್ಧ ಷಡ್ಯಂತ್ರದಿಂದ ಮಾಡದ ತಪ್ಪನ್ನು ತಲೆಗೆ ಕಟ್ಟುವ ಕೆಲಸ ವಿರೋಧಿಗಳು ಮಾಡುತ್ತಿದ್ದು, ಎಲ್ಲರೂ ಒಟ್ಟಾಗಿ ಬಿಜೆಪಿ ಮತ್ತು ಜೆಡಿಎಸ್ ನ ಷಡ್ಯಂತ್ರ ಸೋಲಿಸೋಣ ಎಂದು ಸಿಎಂ ಸಿದ್ದರಾಮಯ್ಯ ಕರೆ ನೀಡಿದರು.

ಆಗಸ್ಟ್ ತಿಂಗಳಿನಲ್ಲಿ ಎರಡನೇ ಬಾರಿಗೆ ಬೆಳಗಾವಿಗೆ ಆಗಮಿಸಿದ್ದ ಸಿಎಂ ಸಿದ್ದರಾಮಯ್ಯ ಈ ಬಾರಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಮಾಡುವ ಮೂಲಕ ತಮ್ಮ ಶಕ್ತಿ ಪ್ರದರ್ಶನ ಮಾಡಿದರು. ಸೋಮವಾರ ಬೆಳಗಾವಿಯ ಗೋಕಾಕ್ ಹಾಗೂ ಅರಭಾವಿ ಮತಕ್ಷೇತ್ರದಲ್ಲಿ ಮೂರುಕಡೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಮಾಡಿದ್ದಲ್ಲದೆ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಆರೋಪದ ಕುರಿತು ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದರು.

ನನ್ನ ವ್ಯಕ್ತಿತ್ವದಲ್ಲಿ 40 ವರ್ಷದಿಂದ ಇಲ್ಲದ ಕಪ್ಪುಚುಕ್ಕೆಯನ್ನು ಬಿಜೆಪಿ, ಜೆಡಿಎಸ್ ಈಗ ಹುಡುಕುತ್ತಿವೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು. ಇಷ್ಟು ವರ್ಷ ಮಾಡದ ತಪ್ಪನ್ನು ಈಗ ಮಾಡುತ್ತೇನಾ? ನಾನು ಮಾಡದಿರುವ ತಪ್ಪನ್ನು ಷಡ್ಯಂತ್ರದಿಂದ ನನ್ನ ತಲೆಗೆ ಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದ ಏಳು ಕೋಟಿ ಜನರ ಆಶೀರ್ವಾದ ನನ್ನ ಮೇಲೆ ಇರುವಾಗ ಯಾರಿಂದಲೂ ನನ್ನ ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಿಲ್ಲ ಎಂದರು.

ಬಾಲಚಂದ್ರ ಜಾರಕಿಹೊಳಿ ಅವರು ಬಿಜೆಪಿ ಶಾಸಕರಿದ್ದರೂ ಅವರು ನಮ್ಮ ಪರವಾಗಿದ್ದಾರೆ. ಆದರೇ ಅವರ ಮಿತ್ರರು ಮಾತ್ರ ನಮ್ಮನ್ನು ವಿರೋಧಿಸಿಕೊಂಡು ಬರುತ್ತಿದ್ದಾರೆಂದು ಬಾಲಚಂದ್ರ ಜಾರಕಿಹೊಳಿ ಅವರತ್ತ ಮುಖ ನೋಡಿ ಸಿಎಂ ಸಿದ್ದರಾಮಯ್ಯ ಅವರು ಮುಗುಳ್ನಗೆ ಬೀರಿದರು.

ಸಿದ್ದರಾಮಯ್ಯ ಪರ ಅಭಿಮಾನಿಗಳ ಜಯಘೋಷ

ಸೋಮವಾರ ಗೋಕಾಕ್ ತಾಲೂಕಿನ ಕಳ್ಳಿಗುದ್ದಿ, ಕೌಜಲಗಿ ಹಾಗೂ ಮೂಡಲಗಿ ತಾಲೂಕಿನ ಯಾದವಾಡ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿ ಅನಾವರಣ ಹಾಗೂ ಕಲ್ಲೋಳಿ ಗ್ರಾಮದ ನೂತನ ರಾಯಣ್ಣ ಮೂರ್ತಿಗೆ ಗೌರವಾರ್ಪಣೆ ಸಲ್ಲಿಸಿದ ಸಿದ್ದರಾಮಯ್ಯನವರಿಗೆ ಅಭಿಮಾನಿಗಳು ಭರ್ಜರಿ ಸ್ವಾಗತ ಕೋರಿದರು. ರಾಜ್ಯದ ಮುಖ್ಯಮಂತ್ರಿ ತಮ್ಮ ಗ್ರಾಮಕ್ಕೆ ಆಗಮಿಸುತ್ತಿದ್ದಾರೆ ಎಂಬ ಸಂಭ್ರಮದಲ್ಲಿದ್ದ ಊರಿನ ಜನ ನಾನಾ ಭಗೆಯಲ್ಲಿ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರನ್ನು ನೋಡಲು ಜನ ಮನೆ ಮೇಲೆ ಹತ್ತಿ ಕಣ್ತುಂಬಿಕೊಂಡರು. ಡೊಳ್ಳು ಕುಣಿತ ಹಾಗೂ ವಿವಿಧ ವಾದ್ಯಗಳ ಮೇಳದಲ್ಲಿ ಜಾತ್ರೆಯ ಸಡಗರ ಮನೆಮಾಡಿತ್ತು.

ಕಲ್ಲೋಳ್ಳಿ ಗ್ರಾಮದಲ್ಲಿ ನೂತನವಾಗಿ ಉದ್ಘಾಟನೆಗೊಂಡ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಗೌರವಾರ್ಪಣೆ ಸಲ್ಲಿಸಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> ಹಿಂದುಳಿದ ಸಮುದಾಯದಿಂದ ಬಂದು ಎರಡು ಬಾರಿ ಸಿಎಂ ಆಗಿದ್ದನ್ನು ವಿಪಕ್ಷದವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದಲೇ ಕಾಂಗ್ರೆಸ್ ಸರಕಾರ ಅಸ್ಥಿರಗೊಳಿಸಲು ಯತ್ನಿಸುತ್ತಿದ್ದಾರೆ. ಇದಕ್ಕೆ ನಾವು ಅವಕಾಶ ಕೊಡಬಾರದು. ನಮ್ಮ ಕಾಂಗ್ರೆಸ್ ಸರಕಾರ ಇರುವವರೆಗೂ ಬಡವರ, ಮಧ್ಯಮ ವರ್ಗದವರ ಪರವಾದ ಗ್ಯಾರಂಟಿ ಕಾರ್ಯಕ್ರಮಗಳು ಜಾರಿಯಲ್ಲಿದ್ದು, ಸದಾ ನಮ್ಮ ನೆರವಿನ ಹಸ್ತ ಬಡವರ ಪರವಾಗಿ ಇರುತ್ತದೆ.
>
> -ಸಿದ್ದರಾಮಯ್ಯ ಮುಖ್ಯಮಂತ್ರಿ

ಕಂಚಿನ ಪುತ್ಥಳಿ ಅನಾವರಣ

ಕೌಜಲಗಿ ಪಟ್ಟಣದಲ್ಲಿ ಕಾಂತ್ರಿವೀರ ಸಂಗೊಳ್ಳಿ ರಾಯಣ್ಣನ ಕೋಟೆ ಮತ್ತು ಕಂಚಿನ ಪುತ್ಥಳಿಯನ್ನು ಅನಾವರಣಗೊಳಿಸಿ ಮಾತನಾಡಿದ ಸಿಎಂ, ಸಂಗೊಳ್ಳಿ ರಾಯಣ್ಣ ಹುಟ್ಟಿದ ಸ್ಥಳದಲ್ಲಿ ಮ್ಯೂಜಿಯಮ್ ಮತ್ತು ಸೈನಿಕ ಶಾಲೆ ತೆರೆಯಲಾಗಿದೆ. ನಂದಗಡದಲ್ಲಿರುವ ಸಮಾಧಿಯನ್ನು ಸಹ ಅಭಿವೃದ್ಧಿ ಮಾಡಲಾಗಿದೆ. ಸಂಗೊಳ್ಳಿ ಯಾತ್ರಾ ಕೇಂದ್ರವಾಗಬೇಕು. ರಾಯಣ್ಣನ ಜೀವನ ದರ್ಶನದ ಬಗ್ಗೆ ಇಂದಿನ ಯುವ ಪೀಳಿಗೆಗೆ ಅರಿವು ಮೂಡಿಸಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಆಯೋಜನೆ

ದಾಖಲೆಗಾಗಿ 350 ನೃತ್ಯ ಕಲಾವಿದರಿಂದ ನೃತ್ಯ

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಅಂತಾರಾಷ್ಟ್ರೀಯ ದಾಖಲೆಗಾಗಿ ಏಕಕಾಲದಲ್ಲಿ 350 ನೃತ್ಯ ಕಲಾವಿದರು ಭಾನುವಾರ ಶ್ರೀನಾಮ ರಾಮಾಯಣಂ ನೃತ್ಯ ಪ್ರದರ್ಶಿಸಿದರು.

ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಅಂತಾರಾಷ್ಟ್ರೀಯ ದಾಖಲೆಗಾಗಿ ಏಕಕಾಲದಲ್ಲಿ 350 ನೃತ್ಯ ಕಲಾವಿದರು ಶ್ರೀನಾಮ ರಾಮಾಯಣಂ ನೃತ್ಯ ಪ್ರದರ್ಶಿಸಿದರು.

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳವರ ಮಠ ಹಾಗೂ ಚನ್ನರಾಯಪಟ್ಟಣದ ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ದಾಖಲೆಗಾಗಿ ಹಮ್ಮಿಕೊಂಡಿದ್ದ ನಾಮ ರಾಮಾಯಣಂ ನೃತ್ಯ ಪ್ರದರ್ಶನ ಮಠದ ಪೀಠಾಧಿಪತಿಗಳಾದ ಸುಬುಧೇಂದ್ರ ತೀರ್ಥರು ಉದ್ಘಾಟಿಸಿದರು.

ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ನಲ್ಲಿ ಅಕಾಡೆಮಿ ಮತ್ತು ಮಕ್ಕಳು ಹಾಗೂ ಮಠದ ಹೆಸರನ್ನು ಸೇರಿಸುವ ಹಿನ್ನೆಲೆಯಲ್ಲಿ ಜಪಾನ್ ಜರ್ಮನಿ ಇಂಡೋನೇಷಿಯಾ ದೇಶ ಸೇರಿದಂತೆ ಭಾರತ ದೇಶದ ಹಲವಾರು ರಾಜ್ಯದ ಭಾಗಗಳಿಂದ ಆಗಮಿಸುತ್ತಿರುವ ಕಲಾವಿದರಿಗೆ ರಾಯರ ದರ್ಶನ ಮಾಡಿಸುವ ಮೂಲಕ ಈ ನೃತ್ಯೋತ್ಸವ ಸಂಭ್ರಮ ರಾಯರ ಪಾದದಲ್ಲಿ ಸಮರ್ಪಣೆ ಮಾಡಲಿದ್ದೇವೆ ಎಂದು ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿಯ ಮುಖ್ಯಸ್ಥ ಅರವಿಂದ ಸಿಂಗ್, ಪ್ರಧಾನ ಕಾರ್ಯದರ್ಶಿ ಡಾ. ಸ್ವಾತಿ ಪಿ ಭಾರದ್ವಾಜ್ ತಿಳಿಸಿದರು.

ಕೆಲವು ವರ್ಷಗಳಿಂದ 9ನೇ ಕ್ರಸ್ಟ್ ಗೇಟ್ ದುರಸ್ತಿಗೆ ರೈತರಿಂದ ಮನವಿ

ಮಾಲವಿ ಒಡ್ಡು ಒಡೆದು ನೀರು ಪೋಲು

ವಿಜಯನಗರ: ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕೊಚ್ಚಿ ಹೋಗಿ ಎಲ್ಲರ ಆತಂಕಕ್ಕೆ ಕಾರಣವಾಗಿತ್ತು. ಇದೀಗ ವಿಜಯನಗರ ಜಿಲ್ಲೆಯ ಮಾಲವಿ ಜಲಾಶಯದಲ್ಲಿ ಇಂತಹುದೇ ಬೆಳವಣಿಗೆ ಕಂಡುಬಂದಿದೆ.

ಕೆಲ ದಿನಗಳಿಂದ ಸುರಿದ ಭಾರಿ ಮಳೆಯಿಂದಾಗಿ ಮಾಲವಿ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದುಬಂದಿದ್ದು, ಅದರ 9ನೇ ಗೇಟ್ ದುರಸ್ತಿಯಾಗದೆ, ನೀರು ಸಂಗ್ರಹಣೆಗೆ ಹಾಕಲಾಗಿದ್ದ ಒಡ್ಡು ಒಡೆದಿದೆ. ಇದರಿಂದ ಬಹುಪಾಲು ನೀರು ವ್ಯರ್ಥವಾಗಿ ಹರಿದು ಹೋಗಿದೆ. ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯೆ ನೀಡಿ, ಕ್ರಸ್ಟ್ ಗೇಟ್‌ಗಳಿಂದ ಹೊರಹರಿವಾಗುತ್ತಿಲ್ಲ. ಕ್ರಸ್ಟ್ ಗೇಟ್ ಸಂಬಂಧ ರಾಜ್ಯ ಸರಕಾರಕ್ಕೆ ವರದಿ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ.

ದುರಸ್ತಿಗೆ ಬಳಕೆಯಾಗದ ಅನುದಾನ: ಜಲಮೂಲಗಳಿಂದ ಒಟ್ಟು 2ಟಿಎಂಸಿಯಷ್ಟು ನೀರು ಸಂಗ್ರಹವಾಗುವ ಜಲಾಶಯದಿಂದ ಸುತ್ತಲಿನ ಹಲವು ಗ್ರಾಮಗಳಲ್ಲಿಅಂತರ್ಜಲ ಹೆಚ್ಚುವ ಜತೆಗೆ 16ಸಾವಿರ ಎಕರೆ ಪ್ರದೇಶ ನೀರಾವರಿಯಾಗಲಿದೆ. ಆದರೆ, ಜಲಾಶಯದ 9ನೇ ಗೇಟ್‌ಗೆ ದುರಸ್ತಿಗೆ 4.02 ಕೋಟಿ ರು. ಅನುದಾನವಿದ್ದರೂ ವರ್ಷದಿಂದ ಬಳಕೆಯಾಗದಿರುವುದು, ದುರಸ್ತಿ ಕೈಗೆತ್ತಿಕೊಳ್ಳದಿರುವುದು ಸಮಸ್ಯೆಯ ಮೂಲವಾಗಿದೆ.

ಮಾಲವಿ ಜಲಾಶಯದ ಹಾನಿಗೊಳಗಾದ ಕ್ರಸ್ಟ್ ಗೇಟ್‌ಗಳನ್ನು ಸರಿಪಡಿಸುತ್ತಿರುವ ಅಧಿಕಾರಿಗಳು.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿರುವ ಮಾಲವಿ ಜಲಾಶಯವನ್ನು 1972 ರಲ್ಲಿ ನಿರ್ಮಿಸಲಾಗಿದೆ. ಜಲಾಶಯವು ಒಟ್ಟು 10 ಕ್ರಸ್ಟ್ ಗೇಟ್‌ಗಳನ್ನು ಹೊಂದಿದ್ದು, ಇದು ತಾಲೂಕಿನ ನೀರಾವರಿಗೆ ಮತ್ತು ತುಂಗಭದ್ರಾ ಅಣೆಕಟ್ಟೆಗೆ ಪ್ರಮುಖ ನೀರಿನ ಮೂಲವಾಗಿದೆ. ಕಳೆದ ಕೆಲವು ವರ್ಷಗಳಿಂದ, ಕ್ರಸ್ಟ್ ಗೇಟ್‌ಗಳನ್ನು ನವೀಕರಿಸಬೇಕೆಂದು ಆಡಳಿತ ಮಂಡಳಿಗೆ ರೈತರು ಮನವಿ ಮಾಡುತ್ತಲೇ ಬಂದಿದ್ದಾರೆ.

ಗೃಹಲಕ್ಷ್ಮಿ ಹಣದಲ್ಲಿ ಹೋಳಿಗೆ ಊಟ ಹಾಕಿಸಿದ್ದ ಅಕ್ಕಾತಾಯಿಗೆ ಸಿಎಂ ಸನ್ಮಾನ

ನಾಡಿಗೆ ಅನ್ನ ಕೊಡೋ ದೊರೆ ನಿನ್ನ ಕೈ ಮೇಲಾಗ್ಲಿ

ಬೆಳಗಾವಿ: ನಾಡಿಗೆ ಅನ್ನ ಕೊಡೋ ದೊರೆ ನಿನ್ನ ಕೈ ಮೇಲಾಗ್ಲಿ ಎಂದು ರಾಯಬಾಗ ತಾಲೂಕಿನ ಸುಟ್ಟಟ್ಟಿ ಗ್ರಾಮದ ಅಕ್ಕಾತಾಯಿ ಮುಖ್ಯಮಂತ್ರಿಗಳಿಗೆ ಆಶೀರ್ವಾದ ಮಾಡಿದರು.

ಗೃಹಲಕ್ಷ್ಮಿ ಹಣದಲ್ಲಿ ಗ್ರಾಮಕ್ಕೇ ಹೋಳಿಗೆ ಊಟ ಹಾಕಿದ ಅಕ್ಕಾತಾಯಿ ಲಂಗೂಟಿಯನ್ನು ಸಿಎಂ ಸಿದ್ದರಾಮಯ್ಯ ಅವರು ಬೆಳಗಾವಿ ವಿಮಾನನಿಲ್ದಾಣದಲ್ಲಿ ಸನ್ಮಾನಿಸಿ ದರು. ಸನ್ಮಾನ ಸ್ವೀಕರಿಸಿದ ಬಳಿಕ ಅಕ್ಕಾತಾಯಿ ಸಿಎಂಗೆ ತುಂಬು ಹೃದಯದಿಂದ ಆಶೀರ್ವ ದಿಸಿದರು.

ಕೈ ಮೇಲಾಗ್ಲಿ-ದೇಶ ಆಳು ದೊರೆಯೇ

ನಾಡಿಗೆ ಅನ್ನ ಕೊಡೋ ದೊರೆ ನೀನು. ನಿಮ್ಮ ಕೈ ಇನ್ನೂ ಮೇಲಾಗ್ಲಿ. ನಾಡ ಆಳುವ ದೊರೆ ನೀನು ದೇಶ ಆಳ್ಬೇಕು. ಹಿಂಗಾ ಆಳ್ಕೊತಾ ಹೋಗ್ತಾ ಇರಬೇಕು. ನಾಡಿಗೆ ಒಳ್ಳೇದಾಗ್ಬೇತ್ರಿ ಎಂದರು. ಅಕ್ಕಾತಾಯಿ ಜತೆ ಬಂದಿದ್ದ ಇತರೆ ತಾಯಂದಿರು ಒಟ್ಟಾಗಿ ಮುಖ್ಯಮಂತ್ರಿಗಳಿಗೆ, ನಾವು ಲಕ್ಷ್ಮೀದೇವಿಗೆ ಪೂಜೆ ಮಾಡೀವಿ. ಕಂಟಕ ನಾಶ ಆಗ್ಲಿ ಅಂತ ದೇವಿಗೆ ಕೈಮುಗಿದೀವಿ ಎಂದು ಹಾರೈಸಿದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಅಕ್ಕಾತಾಯಿ ಮತ್ತು ತಾಯಂದಿರಿಗೆ ಸೀರೆ, ಅರಸಿನ ಕುಂಕುಮ ಬಾಗಿನ ನೀಡಿ ಸನ್ಮಾನಿಸಿದರು.

ನಿಮ್ಮ ಆಶೀರ್ವಾದ ಹೀಗೇ ಇರಲಿ : ಅಕ್ಕಾತಾಯಿ ಮತ್ತು ಗ್ರಾಮದ ತಾಯಂದಿರು ಆಶೀರ್ವಾದ ಸ್ವೀಕರಿಸಿದ ಮುಖ್ಯಮಂತ್ರಿಗಳು ನಿಮ್ಮ ಆಶೀರ್ವಾದ ಹೀಗೇ ಇರಲಿ. ನಮ್ಮ ಸರಕಾರ ಇರುವವರೆಗೂ ಗೃಹಲಕ್ಷ್ಮಿ ಯೋಜನೆ ನಿಲ್ಲಲ್ಲ. ಹೀಗೇ ಪ್ರತೀ ತಿಂಗಳು ನಿಮ್ಮ ಮಡಿಲು ಸೇರುತ್ತಿರುತ್ತದೆ ಎಂದರು.

ಗೃಹಲಕ್ಷ್ಮಿ ಹಣದಲ್ಲಿ ಗ್ರಾಮಕ್ಕೇ ಹೋಳಿಗೆ ಊಟ ಹಾಕಿದ ಅಕ್ಕಾತಾಯಿ ಲಂಗೂಟಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸನ್ಮಾನಿಸಿದರು.

ಕಾಂಗ್ರೆಸ್ ಯಾವ ಶಾಸಕರೂ ಆಮಿಷಕ್ಕೆ ಬಲಿಯಾಗಲ್ಲ: ಎಂಬಿಪಿ

ಕಾಂಗ್ರೆಸ್‌ನಲ್ಲಿ ಯಾರೂ ಏಕನಾಥ್ ಸಿಂಧೆಗಳಿಲ್ಲ

ಬೆಂಗಳೂರು: ಮಹಾರಾಷ್ಟ್ರ ಮಾದರಿ ಯಲ್ಲಿ ಸರಕಾರವನ್ನು ಬೀಳಿಸುವ ಪ್ರಯತ್ನ ಕರ್ನಾಟಕದಲ್ಲಿ ನಡೆಯಲ್ಲ, ಏಕೆಂದರೆ, ಕರ್ನಾಟಕ ಕಾಂಗ್ರೆಸ್‌ನಲ್ಲಿ ಯಾರೂ ಏಕನಾಥ್ ಸಿಂಧೆಗಳಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರು ಆಮಿಷಕ್ಕೆ ಬಲಿಯಾಗಲ್ಲ. ಇಲ್ಲಿ ಯಾರೂ ಏಕನಾಥ್ ಶಿಂಧೆಗಳಿಲ್ಲ. ನಾವು 136 ಸೀಟು ಪಡೆದು ಸರಕಾರ ರಚಿಸಿ ದ್ದೇವೆ. ಸರಕಾರ ಕೆಡವಬೇಕಾದರೆ ಅವ ರಿಗೆ 80 ಸೀಟುಗಳು ಬೇಕಾಗುತ್ತದೆ. ಆಪರೇಷನ್ ಕಮಲ ಮಾಡಿದರೂ 60 ಮಂದಿ ಬೇಕು. ಬಿಜೆಪಿಯ ಎಂಟತ್ತು ಶಾಸಕರು ಕಾಂಗ್ರೆಸ್ ಜತೆ ಗುರುತಿಸಿ ಕೊಂಡಿದ್ದಾರೆ. ಹೀಗಾಗಿ ಆಪರೇಷನ್ ಕಮಲ ವರ್ಕ್ ಔಟ್ ಆಗುವುದಿಲ್ಲ. ಒಬ್ಬನೇ ಒಬ್ಬ ಕಾಂಗ್ರೆಸ್ ಶಾಸಕ ಬಿಜೆಪಿಗರ ಈ ಆಮಿಷಕ್ಕೆ ಬಲಿಯಾಗು ವುದಿಲ್ಲ. 100 ಕೋಟಿಯಲ್ಲ ಐನೂರು ಕೋಟಿ ಕೊಟ್ಟರೂ ಏನು ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

- ಮಹಾರಾಷ್ಟ್ರ ಮಾದರಿಯಲ್ಲಿ ಸರಕಾರವನ್ನು ಬೀಳಿಸುವ ಪ್ರಯತ್ನ ಕರ್ನಾಟಕದಲ್ಲಿ ನಡೆಯಲ್ಲ.
- ಆಪರೇಷನ್ ಕಮಲ ವರ್ಕ್ ಔಟ್ ಆಗುವುದಿಲ್ಲ
- 100 ಕೋಟಿಯಲ್ಲ ಐನೂರು ಕೋಟಿ ಕೊಟ್ಟರೂ ಏನು ಆಗುವುದಿಲ್ಲ

ಜಿಂದಾಲ್‌ಗೆ ಭೂಮಿ ಕೊಟ್ಟಿದ್ದು ಬಿಎಸ್‌ವೈ

ಜಿಂದಾಲ್‌ಗೆ ಭೂಮಿ ನೀಡಿದ ವಿಚಾರವಾಗಿ ಮಾತನಾಡಿ, ಭೂಮಿ ಕೊಟ್ಟವರು ಯಡಿಯೂರಪ್ಪ. ಮಾರು ಕಟ್ಟೆ ಬೆಲೆಗೆ ಭೂಮಿ ನೀಡಲಾಗಿದೆ. ಚಾಣಕ್ಯ ವಿವಿಯಂತೆ ನಾವು ಮಾಡಿಲ್ಲ. ಸರಕಾರ ನೀತಿಯಂತೆಯೇ ಮಾಡಿದ್ದೇವೆ. ಕೈಗಾರಿಕೆ ಮಾಡಬೇಕಾದರೆ ಕೋಟಿ ರು.ಯಿದ್ದರೆ ನಾವು ಜಾಗ ನೀಡುತ್ತೇವೆ. ಅವತ್ತಿನ ಮಾರುಕಟ್ಟೆಯ ಬೆಲೆಯಂತೆ ಕೊಟ್ಟಿರುತ್ತೇವೆ. ಯಾವಾಗಲೇ ಮಾಡಿ ದರೂ, ಮೊದಲಿನ ಷರತ್ತಿಗೆ ಅನುಗುಣ ವಾಗಿ ನೀಡಬೇಕಾಗುತ್ತದೆ. ಆದ್ದರಿಂದ ಜಿಂದಾಲ್‌ಗೂ ಬೇರೆಯದಕ್ಕೂ ಸಂಬಂಧ ವಿಲ್ಲ. ಹೈಕೋರ್ಟ್ ನಿರ್ದೇಶನ ಕೊಟ್ಟಿದೆ. 2020ರ ಕ್ಯಾಬಿನೆಟ್ ತೀರ್ಮಾನ ಪಾಲನೆಗೆ ಹೇಳಿದೆ ಎಂದು ವಿವರಿಸಿದರು.

ಗಣಿಗ ರವಿ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

ಬಿಜೆಪಿ ಸೇರಲು ಶಾಸಕರಿಗೆ 100 ಕೋಟಿ ರು. ಆಫರ್ ನೀಡಿದ್ದಾರೆ ಎಂಬ ಮಂಡ್ಯ ಶಾಸಕ ಗಣಿಗ ರವಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಬಿಜೆಪಿ ದೂರು ನೀಡಿದೆ. ಮಂಡ್ಯ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ರಾಜ್ಯ ಬಿಜೆಪಿ ವಕ್ತಾರ ಅಶ್ವತ್ಥ ನಾರಾಯಣ ನೇತೃತ್ವದಲ್ಲಿ ದೂರು ನೀಡಿದ ಜಿಲ್ಲಾ ಘಟಕ ಪಕ್ಷದ ವಿರುದ್ಧ ಮಾನಹಾನಿ ಹೇಳಿಕೆ ನೀಡಿರುವ ಶಾಸಕ ಗಣಿಗ ರವಿ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದೆ. ಗಣಿಗಾ ರವಿ ಅವರನ್ನು ಯಾರು? ಎಲ್ಲಿ? ಯಾವಾಗ? ಭೇಟಿ ಮಾಡಿದರು. ಅವರಿಗೆ 100 ಕೋಟಿ ಆಫರ್ ನೀಡಿರುವುದಕ್ಕೆ ದಾಖಲೆಯಿದೆಯೇ?, ಇದ್ದರೆ ಅದನ್ನು ಏಕೆ ಬಿಡುಗಡೆ ಮಾಡಬಾರದು?, ಸುಳ್ಳು ಆರೋಪ ಮಾಡಿರುವ ಅವರ ವಿರುದ್ಧ ಎಫ್ಐಆರ್ ದಾಖಲಿಸ ಬೇಕೆಂದು ದೂರಿನಲ್ಲಿ ಮನವಿ ಮಾಡಲಾಗಿದೆ. ಈ ಹಿಂದೆಯೂ ಇದೇ ರೀತಿ ಸುಳ್ಳು ಆರೋಪಗ ಳನ್ನು ಮಾಡುತ್ತಾ ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿರುವ ಅವರ ವಿರುದ್ಧ ತಕ್ಷಣವೇ ಎಫ್ಐಆರ್‌ದಾಖಲಿಸಿ ಬಂಧಿಸಬೇಕು. ಈ ಹೇಳಿಕೆಯಿಂದ ಬಿಜೆಪಿಗೆ ಸಾಕಷ್ಟು ಮುಜುಗರವಾ ಗಿದೆ ಎಂದು ದೂರಿನಲ್ಲಿ ಹೇಳಿದ್ದಾರೆ.

ದರ್ಶನ್ ಜತೆ ವಿಡಿಯೊ ಕಾಲ್ ಮಾಡಿದ ರೌಡಿಶೀಟರ್ ವಶಕ್ಕೆ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಜತೆ ವಿಡಿಯೊ ಕಾಲ್ ಮೂಲಕ ಮಾತನಾಡಿದ ಸತ್ಯನನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಮಂಡ್ಯದಲ್ಲಿ ವಶಕ್ಕೆ ಪಡೆದು ಬೆಂಗಳೂರಿಗೆ ಕರೆತಂದು ವಿಚಾರಣೆ ನಡೆಸಿದ್ದಾರೆ.

ವಿಚಾರಣಾಧೀನ ಕೈದಿ ಆಗಿರುವ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಿನೊಳಗೆ ಅಕ್ರಮವಾಗಿ ಅನೇಕ ಸೌಕರ್ಯಗಳನ್ನು ಒದಗಿಸಲಾಗಿದೆ. ರೌಡಿಗಳ ಜತೆ ಸಂಪರ್ಕ, ಗಾರ್ಡನ್ ಏರಿಯಾದಲ್ಲಿ ಹರಟೆ ಹೊಡೆಯುವ ಅವಕಾಶ, ಸಿಗರೇಟ್, ಕುರ್ಚಿ ಸೇರಿದಂತೆ ರಾಜಾತಿಥ್ಯ ಸಿಕ್ಕಿದೆ. ಅದರ ಜತೆಗೆ ವಿಡಿಯೊ ಕಾಲ್ ಕೂಡ ಮಾಡಿರುವುದು ಬಹಿರಂಗ ಆಗಿದ್ದು, ದೊಡ್ಡ ಸಂಚಲನ ಸೃಷ್ಟಿ ಮಾಡಿದೆ.

ವಿಡಿಯೊ ಕಾಲ್ ಮಾಡಿದ್ದು ಹೇಗೆ?: ವೈರಲ್ ಆದ ದರ್ಶನ್ ವಿಡಿಯೊ ಕಾಲ್ ತುಣುಕಿನಲ್ಲಿ ಇರುವವನು ಬ್ಯಾಡರಹಳ್ಳಿ ರೌಡಿಶೀಟರ್ ಜಾನಿ ಅಲಿಯಾಸ್ ಜನಾರ್ದನ್‌ನ ಮಗ ಸತ್ಯ. ಆತನಿಗೆ ಜೈಲಿನಿಂದ ವಿಡಿಯೊ ಕಾಲ್ ಮಾಡಿ ದರ್ಶನ್‌ರನ್ನು ತೋರಿಸಿದವನು ಕೂಡ ಇನ್ನೋರ್ವ ರೌಡಿಶೀಟರ್ ಮಾರ್ಕೆಟ್ ಧರ್ಮ. ಇತ್ತೀಚೆಗೆ ಸತ್ಯ ಕೂಡ ಜೈಲಿಗೆ ಹೋಗಿಬಂದಿದ್ದ. ಕೆಎಲ್‌ಇ ಕಾಲೇಜು ವಿದ್ಯಾರ್ಥಿಗಳಿಗೆ ಉಲ್ಟಾ ಮಚ್ಚಿನಲ್ಲಿ ಆತ ಹೊಡೆದಿದ್ದ. ಅನ್ನಪೂರ್ಣೇಶ್ವರಿ ನಗರ ಠಾಣಾ ವ್ಯಾಪ್ತಿಯಲ್ಲಿ ಈ ಪ್ರಕರಣ ದಾಖಲಾಗಿತ್ತು. ಜೈಲಿಗೆ ಹೋಗಿದ್ದ ಸತ್ಯ ಜಾಮೀನಿನ ಮೇಲೆ ಹೊರಗೆ ಬಂದಿದ್ದ. ಹೊರಗೆ ಬಂದವನು ಮಾರ್ಕೆಟ್ ಧರ್ಮನಿಗೆ ವಿಡಿಯೊ ಕಾಲ್ ಮಾಡಿದ್ದ. ದರ್ಶನ್ ಇರುವುದು ನಮ್ಮ ಪಕ್ಕದ ಸೆಲ್‌ನಲ್ಲಿ. ನಿನಗೂ ತೋರಿಸ್ತಿನಿ ಎಂದು ಸತ್ಯನಿಗೆ ಹೇಳಿದ್ದ ಮಾರ್ಕೆಟ್ ಧರ್ಮ, ದರ್ಶನ್ ಕೈಯಲ್ಲಿ ಹಾಯ್ ಹೇಳಿಸಿದ್ದ. ಅದೇ ವಿಡಿಯೋ ಎಲ್ಲ ಕಡೆ ವೈರಲ್ ಆಗಿದೆ.

ರೌಡಿಶೀಟರ್ ಬಿಲ್ಡಪ್

ದರ್ಶನ್ ಜತೆ ವಿಡಿಯೊ ಕಾಲ್‌ನಲ್ಲಿ ಮಾತನಾಡಿದ ಕ್ಲಿಪಿಂಗ್ ಇಟ್ಟುಕೊಂಡ ಸತ್ಯ ಕಲಾಸಿಪಾಳ್ಯದ ಒಂದಷ್ಟು ಹುಡುಗರಿಗೆ ಕಳಿಸಿದ್ದ. ಅಲ್ಲದೇ ತನ್ನ ಏರಿಯಾದಲ್ಲಿ ಬಿಲ್ಡಪ್ ಕೊಡಲು ಈ ವಿಡಿಯೊ ತುಣುಕನ್ನು ಬಳಸಿಕೊಂಡಿದ್ದ. ಸಹಚರರ ವಾಟ್ಸಪ್ ಸ್ಟೇಟಸ್‌ನಲ್ಲೂ ಅದನ್ನು ಅಪ್‌ಲೋಡ್ ಮಾಡಲಾಗಿತ್ತು. ಆದ್ದರಿಂದ ದರ್ಶನ್ ಜತೆಗಿನ ಆತನ ವಿಡಿಯೊ ಕಾಲ್ ಎಲ್ಲ ಕಡೆಗಳಲ್ಲಿ ವೈರಲ್ ಆಯಿತು.

ಪರಪ್ಪನ ಅಗ್ರಹಾರದ ಜೈಲಿನ ಅವ್ಯವಸ್ಥೆ ಹೊಸದಲ್ಲ

ಮಂಡ್ಯ: ಪರಪ್ಪನ ಅಗ್ರಹಾರದಲ್ಲಿರುವ ಹಲವು ಕೈದಿಗಳಿಗೆ ಪಂಚತಾರಾ ಹೋಟೆಲ್‌ನ ವ್ಯವಸ್ಥೆ ಇದೆ ಎಂಬ ಚರ್ಚೆ ಅನೇಕ ವರ್ಷಗಳಿಂದ ನಡೆಯುತ್ತಿದೆ. ಈಗ ದರ್ಶನ್ ವಿಚಾರದಲ್ಲಿ ಅದು ಮತ್ತೆ ಮುನ್ನೆಲೆಗೆ ಬಂದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಪ್ಪನ ಅಗ್ರಹಾರ ಜೈಲಿನಲ್ಲಿನ ಅವ್ಯವಸ್ಥೆ ಹೊಸದಾಗಿ ಆಗಿಲ್ಲ, ಹಿಂದಿನಿಂದಲೂ ನಡೆಯುತ್ತಾ ಇದೆ. ಹಿಂದೆ ಡಿಜಿ ಮತ್ತು ಡಿಸಿಪಿ ನಡುವೆ ದೊಡ್ಡ ಗಲಾಟೆ ಆಗಿತ್ತು. ತನಿಖೆ ನಡೆಯಬೇಕು ಎಂದು ಗಲಾಟೆ ಆಗಿತ್ತು. ಸದ್ಯ ಸರಕಾರ ರೇಣುಕಾಸ್ವಾಮಿ ಕೊಲೆ ಪ್ರಕರಣದ ಕೈದಿಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕು ಎಂದು ತೀರ್ಮಾನ ಮಾಡುತ್ತಿದೆಯಂತೆ ಎಂದರು.

ದುಡ್ಡು ಇದ್ದರೆ ಏನು ಬೇಕಾದರೂ ಕೊಂಡುಕೊಳ್ಳಬಹುದು. ಚಿತ್ರದುರ್ಗ ದಲ್ಲಿ ರೇಣುಕಾಸ್ವಾಮಿ ಕುಟುಂಬಸ್ಥರು ಅವರ ನೋವು ಹೇಳಿಕೊಳ್ಳುತ್ತಾರೆ. ಪರಮೇಶ್ವರ್ ಅವರು ಪ್ರತಿದಿನ ಒಂದೊಂದು ಕಥೆ ಹೇಳ್ತಾರೆ. ಪಾರದರ್ಶಕ ಸರಕಾರ ಮಾಡ್ತಾ ಇದೀವಿ. ನಮ್ಮದು ಹೈಟೆಕ್ ಸರಕಾರ ಅಂತಾರೆ. ಪರಪ್ಪನ ಅಗ್ರಹಾರದಲ್ಲಿ ಕೊಡ್ತಾ ಇರುವುದೇ ಹೈಟೆಕ್ ವ್ಯವಸ್ಥೆ. ಅವರು ಮಾಡಿರುವ ತಪ್ಪುಗಳನ್ನು ಮುಚ್ಚಿಕೊಳ್ಳಲು ವಿಷಯ ತಿರುಗಿಸುತ್ತಿದ್ದಾರೆ ಎಂದರು.

ವಿಧಾನಸೌಧದಲ್ಲಿ ಸಭೆ ನಡೆಸಿದ ಗೃಹ ಸಚಿವ ಪರಂ | ಅಧಿಕಾರಿಗಳ ಅಮಾನತು, ಸೂಕ್ತ ತನಿಖೆಗೆ ಸೂಚನೆ

ದಾಸನಿಗೆ ವಿಶೇಷ ಆತಿಥ್ಯ: ಪರಮೇಶ್ವರ ಗರಂ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಟ ದರ್ಶನ್‌ಗೆ ವಿಶೇಷ ಸತ್ಕಾರ ನೀಡಿರುವ ಪ್ರಕರಣ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕೈದಿಗಳ ದೈನಂದಿನ ಚಟುವಟಿಕೆ ಮೇಲೆ ನಿಗಾವಹಿಸದಿರುವುದು, ಪ್ರಮುಖ ಪ್ರಕರಣಗಳ ಆರೋಪಿಗಳ ಭೇಟಿ ಮಾಡಿ ಹೋದ ನಂತರ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸದಿರುವುದಕ್ಕೆ ಜೈಲಿನ ಮುಖ್ಯ ಅಧೀಕ್ಷಕ, ಅಧೀಕ್ಷಕ ಹಾಗೂ ಮತ್ತಿತರ ಜೈಲು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆಯಾದ ಬಳಿಕ ನಟ ದರ್ಶನನ್ನು ಬಂಧಿಸಿರುವುದು ಹಾಗೂ ಪ್ರಕರಣದ ಸ್ವರೂಪ ಏನೆಂಬುದು ಎಲ್ಲವೂ ಗೊತ್ತಿದೆ. ಆದರೂ ನಿಯಮಗಳನ್ನು ಮೀರಿ ಆರೋಪಿಗಳಿಗೆ ಟೀ, ಸಿಗರೇಟ್ ಮತ್ತಿತರ ಸವಲತ್ತುಗಳನ್ನು ಪೂರೈಕೆಯಾಗಿದೆ. ದಿನದ 24 ಗಂಟೆಯೂ ವಾರ್ಡ್‌ಗಳು ಕರ್ತವ್ಯದಲ್ಲಿರುತ್ತಾರೆ. ಘಟನೆ ಎಲ್ಲರ ಕಣ್ತಪ್ಪಿ ನಡೆಯಲು ಹೇಗೆ ಸಾಧ್ಯ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಸಿಸಿಬಿ ಪೊಲೀಸರು ದಾಳಿ ನಡೆಸಿದಾಗ ಯಾವ ವಸ್ತುಗಳು ಪತ್ತೆಯಾಗಿಲ್ಲ. ಜೈಲಿನಲ್ಲಿ ಮೊಬೈಲ್ ಬಳಕೆಯಾಗುತ್ತಿದೆ ಎಂಬುದು ಕಂಡು ಬಂದಿದೆ. ಹೈಫ್ರಿಕ್ವೆನ್ಸಿ ಜಾಮರ್, ಅತ್ಯುತ್ತಮ ಗುಣಮಟ್ಟದ ಮೆಟಲ್ ಡಿಟೆಕ್ಟರ್ ಯಂತ್ರ, ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಇಷ್ಟೆಲ್ಲ ಬಂದೋಬಸ್ತ್, ಪರಿಶೀಲನೆ ನಡುವೆಯೂ ಕಾರಾಗೃಹದೊಳಗೆ ಸಿಗರೇಟ್, ಮೊಬೈಲ್ ತಲುಪಿರುವುದಕ್ಕೆ ಆಕ್ರೋಶವ್ಯಕ್ತಪಡಿಸಿದರು.

ಜೈಲಿನಲ್ಲಿ ಇನ್ನಷ್ಟು ಕ್ರಮವಹಿಸಿ

ರಾಜ್ಯದ ಎಲ್ಲ ಬಂಧಿಖಾನೆಗಳಲ್ಲಿ ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಕಾರಾಗೃಹ ಮತ್ತು ಸುಧಾರಣಾ ಸೇವೆ ಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಅವರಿಗೆ ಸೂಚನೆ ನೀಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪರಮೇಶ್ವರ ಅವರು, ಈಗಾಗಲೇ ಒಂಬತ್ತು ಅಧಿಕಾರಿಗಳನ್ನು ಅಮಾನತುಗೊಳಿ ಸಲಾಗಿದೆ. ಚೀಫ್ ಸೂಪರಿಡೆಂಟ್ ಶೇಷಮೂರ್ತಿ, ಸೂಪರಿಡೆಂಟ್ ಮಲ್ಲಿಕಾರ್ಜುನ್ ಸ್ವಾಮಿ ಬಂಧಿಖಾನೆಯ ಜವಾಬ್ದಾರಿ ಹೊತ್ತ ಹಿರಿಯ ಅಧಿಕಾರಿಗಳು. ಪರಿಶೀಲನೆ ವೇಳೆ ಈ ಇಬ್ಬರು ಅಧಿಕಾರಿಗಳ ವೈಫಲ್ಯ, ನಿರ್ಲಕ್ಷ್ಯತನ ಕಂಡು ಬಂದ ಹಿನ್ನೆಲೆಯಲ್ಲಿ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದರು.

> ಎಲ್ಲ ಕಡೆ ಸಿಸಿ ಕ್ಯಾಮೆರಾ ಗಳನ್ನು ಅಳವಡಿಸಲಾಗಿದೆ. ಹೆಚ್ಚಿನ ಸಿಸಿ ಕ್ಯಾಮೆರಾಗಳ ಅಗತ್ಯವಿದ್ದರೆ ಅಳವಡಿಸಲಾಗುವುದು. ಮಾನಿಟರಿಂಗ್ ಮಾಡುವ ಸಂದರ್ಭದಲ್ಲಿ ನಿರ್ಲಕ್ಷ್ಯವಹಿಸ ಲಾಗಿದೆ. ಆರೋಪಿಗಳನ್ನು ಬೇರೆ ಬಂಧಿಖಾನೆಗೆ ಶಿಫ್ಟ್ ಮಾಡುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ವಿಐಪಿ ಆರೋಪಿಗಳ ಟ್ರೀಟ್ಮೆಂಟ್‌ಗೆ ರೌಡಿಶೀಟರ್‌ಗಳನ್ನು ಬಳಕೆ ಮಾಡಿಕೊಳ್ಳುತ್ತಿ ರುವುದು ಸೇರಿದಂತೆ ಯಾವುದೇ ರೀತಿಯ ತಪ್ಪು ಕಂಡು ಬಂದರೂ ಕ್ರಮ ಜರುಗಲಿದೆ.
>
> ಪರಮೇಶ್ವರ್ ಗೃಹ ಸಚಿವ

> ನಟ ದರ್ಶನ್, ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ನಾಗರಾಜ್ ಮೇಲೆ ಪ್ರಕರಣ ದಾಖಲಾಗಿದೆ. ಜೈಲು ಸೂಪರಿಡೆಂಟೆಂಟ್ ದೂರಿನ ಮೇಲೆ 3 ಎಫ್ಐಆರ್ ದಾಖಲಾಗಿವೆ. ಜೈಲಿನಲ್ಲಿ ಕುಳಿತಿರುವುದರ ಜತೆಗೆ ಕುರ್ಚಿಗಳನ್ನ ಯಾರು ಕೊಟ್ಟರೆಂಬುದರ ಬಗ್ಗೆ ಪ್ರಕರಣ ದಾಖಲಾಗಿದೆ. ಕೈದಿಗಳನ್ನು ಬೇರೆ ಜೈಲಿಗೆ ಶಿಫ್ಟ್ ಮಾಡುವ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಅಧಿಕಾರಿಗಳ ವೈಫಲ್ಯದಿಂದ ಹೀಗೆ ಆಗಿದೆ.
>
> -ಮಾಲಿನಿ ಕೃಷ್ಣಮೂರ್ತಿ ಬಂಧಿಖಾನೆ ಡಿಜಿಪಿ

ವಿಶ್ವವಾಣಿ

ಸಂಪಾದಕೀಯ

ಜೈಲು ಬಿರಿಯಾನಿ ಕೇಂದ್ರವಾಗದಿರಲಿ

ನಟ ದರ್ಶನ್, ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಈಗ ಎರಡು ತಿಂಗಳುಗಳೇ ಕಳೆದಿವೆ. ವಿಚಾರಣಾಧೀನ ಕೈದಿಯಾದ ದರ್ಶನ್‌ಗೆ ಮನೆ ಊಟ ತರಿಸಿಕೊಳ್ಳಲು ಅವಕಾಶ ನೀಡಬೇಕು ಎಂದು ವಾದಿಸಿ ಅವರ ವಕೀಲರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಹೈಕೋರ್ಟ್ ಆದೇಶ ಹೊರಬೀಳುವ ಮೊದಲೇ ದರ್ಶನ್, ಜೈಲು ಅಧಿಕಾರಿಗಳ ಸಹಕಾರದೊಂದಿಗೆ ಕಾರಾಗೃಹದಲ್ಲಿಯೇ ರಾಜವೈಭೋಗದ ಜೀವನ ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ತಮಗೆ ಬೇಕಾದ ಹೊಟೇಲ್‌ನಿಂದ ಬಿರಿಯಾನಿ ಊಟ, ಸಿಗರೇಟು ತರಿಸಿಕೊಂಡು ತಮಗೆ ಬೇಕಾದವರ ಜೊತೆ ಕುಳಿತು ಬಿಂದಾಸ್ ಆಗಿ ಪಾರ್ಟಿ ಮಾಡುತ್ತಿರುವ ವಿಷಯ ಜಗಜ್ಜಾಹೀರಾಗಿದೆ. ದರ್ಶನ್, ಜೈಲು ಸೇರಿದ ಬಳಿಕ ಕನ್ನಡ ಚಿತ್ರರಂಗದ ಹಲವರು ಅವರನ್ನು ನಿಯಮಿತವಾಗಿ ಭೇಟಿ ಮಾಡುತ್ತಲೇ ಇದ್ದಾರೆ. ''ಜೈಲಿನಲ್ಲಿ ದರ್ಶನ್ ಅವರನ್ನು ನೋಡುವುದಕ್ಕಾಗುತ್ತಿಲ್ಲ. ಅವರಿಗೆ ತಮ್ಮ ಕೃತ್ಯದ ಬಗ್ಗೆ ಪಶ್ಚಾತ್ತಾಪ ಇದೆ'' ಎಂದು ಅವರನ್ನು ಭೇಟಿಯಾಗಿ ಬಂದ ಕೆಲವರು ಸಿನಿಮಾ ಡೈಲಾಗ್ ಹೊಡೆದಿದ್ದರು. ಆದರೆ ಇದೆಲ್ಲವೂ ಸುಳ್ಳು, ಕೊಲೆ ಕೃತ್ಯದ ಬಗ್ಗೆ ಅವರಿಗೆ ಯಾವ ಪಶ್ಚಾತ್ತಾಪವೂ ಇಲ್ಲ ಎನ್ನುವುದಕ್ಕೆ ಈ ಫೋಟೋ ಸಾಕ್ಷಿಯಾಗಿದೆ. ದುಡ್ಡಿದ್ದವರಿಗೆ ಜೈಲಿನಲ್ಲೂ ರಾಜಾತಿಥ್ಯ ಸಿಗುತ್ತದೆ ಎಂಬ ಮಾತುಗಳು ಹಿಂದೆಯೂ ಕೇಳಿಬಂದಿದ್ದವು. ಜೈಲಿಗೆ ಹಣ, ಮದ್ಯ, ಮಾದಕ ಪದಾರ್ಥ, ಶಸ್ತ್ರಾಸ್ತ್ರ ಪೂರೈಕೆಯಾಗುವುದು ಮಾತ್ರವಲ್ಲ ಸಮಾಜ ವಿದ್ರೋಹಿಗಳಿಗೆ ಇದು ಸುರಕ್ಷಿತ ಸ್ಥಳ ಎಂಬ ದೂರುಗಳಿಗೆ ಈಗ ಮತ್ತೊಮ್ಮೆ ಪುಷ್ಟಿ ದೊರೆತಿದೆ. ತಮಿಳುನಾಡಿನ ಸಿಎಂ ಆಗಿದ್ದ ಜಯಲಲಿತಾ ಅವರ ಆಪ್ತೆ ವಿ.ಕೆ. ಶಶಿಕಲಾ ನಟರಾಜನ್ ಇದೇ ಪರಪ್ಪನ ಅಗ್ರಹಾರ ಜೈಲಿನಲ್ಲಿ ಆರಾಮವಾಗಿ ನಾಲ್ಕು ವರ್ಷ ಸಜೆ ಪೂರೈಸಲು ಅಧಿಕಾರಿಗಳು ಅವಕಾಶ ಮಾಡಿಕೊಟ್ಟಿದ್ದರು. ಈಗ ದರ್ಶನ್ ಸೇವೆಗೆ ಟೊಂಕ ಕಟ್ಟಿರುವುದು ನಮ್ಮ ಕಾನೂನು ಮತ್ತು ವ್ಯವಸ್ಥೆಯ ಅಣಕ. ಜಾಮೀನು ದೊರೆತರೂ, ಠೇವಣಿ ಹಣ ಕಟ್ಟಲಾಗದೆ ಅದೆಷ್ಟೋ ವಿಚಾರಣಾಧೀನ ಕೈದಿಗಳು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಇನ್ನೊಂದೆಡೆ ರೌಡಿ ಶೀಟರ್‌ಗಳು ಜೈಲನ್ನೇ ಅಡ್ಡೆ ಮಾಡಿಕೊಂಡು ಪೊಲೀಸ್ ಅಧಿಕಾರಿಗಳ ಕೈಯಲ್ಲಿ ಸೇವೆ ಮಾಡಿಸಿಕೊಳ್ಳುತ್ತಿದ್ದಾರೆ. ಜೈಲುಗಳು ಸಜಾ ಕೇಂದ್ರಗಳಾಗಿರ ಬೇಕೇ ಹೊರತು ಬಿರಿಯಾನಿ ಕೇಂದ್ರಗಳಾಗಬಾರದು. ರೌಡಿಗಳು, ಕೊಲೆ ಆರೋಪಿಗಳ ಬೆಂಗಾವಲಿಗೆ ನಿಂತು ನೆಲದ ಕಾನೂನಿನ ಅವಹೇಳನ ಮಾಡಿದ ಅಧಿಕಾರಿಗಳನ್ನು ಸೇವೆಯಿಂದಲೇ ವಜಾಗೊಳಿಸಿ ತಕ್ಕ ಪಾಠ ಕಲಿಸಬೇಕು.

ಸೊಂಪಾದಕೀಯ

ಸಿದ್ದಯ್ಯ ಸ್ವಾಮಿ ಬನ್ನಿ!

ರಾಜಕಾರಣ ಮತ್ತು ಅಧ್ಯಾತ್ಮ ಎರಡಕ್ಕೂ ಇನ್ನಿಲ್ಲದ ನಂಟು. ವೋಟಿನ ವಿಷಯದಲ್ಲಿ ನಮ್ಮ ನಾಡಿನ ಸ್ವಾಮೀಜಿಗಳು ಯಾರ ಪರ ನಿಲ್ಲುತ್ತಾರೆ ಅನ್ನೋದು ತುಂಬಾ ಮುಖ್ಯ ಆಗುತ್ತೆ. ಸ್ವಾಮೀಜಿಗಳ ಒಂದು ಮಾತಿಗೆ ಸರಕಾರಗಳೇ ಉರುಳಿ ಬೀಳುತ್ತವೆ ಮತ್ತು ಎದ್ದು ನಿಲ್ಲುತ್ತವೆ. ಮೊನ್ನೆ ರಾಜ್ಯದ ಅನೇಕ ಹಿಂದುಳಿದ ಜಾತಿಗಳ ಸ್ವಾಮೀಜಿಗಳ ಹಿಂಡು, ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅಹಿಂದ ನಾಯಕನ ಹಿಂದೆ ನಾವಿದ್ದೇವೆ ಅನ್ನೋ ಸಂದೇಶ ಸಾರಿದ್ದಾರೆ. ಹಾಗಾಗಿ ಮುಡಾ ಭ್ರಷ್ಟಾಚಾರದ ವಿಷಯದಲ್ಲಿ ಕಾಲು ಜಾರಿದರು ಅನ್ನೋ ಆರೋಪ ಇರೋ ಸಿಎಂ ಸಿದ್ದರಾಮಯ್ಯ ಅವರು ಈಗ ಸಾವರಿಸಿಕೊಂಡು 'ನನ್ನ ವಿರುದ್ಧ ಯಾರೂ ಷಡ್ಯಂತ್ರ ಮಾಡೋಕೆ ಆಗಲ್ಲ' ಅಂತ ಅಬ್ಬರಿಸಿದ್ದಾರೆ. ಸ್ವಾಮೀಜಿಗಳ ಭೇಟಿಯ ನಂತರ, 'ಇದು ನನ್ನ ವಿರುದ್ಧ ಮಾಡುತ್ತಿರುವ ಕುತಂತ್ರ ಅಲ್ಲ, ಬದಲಾಗಿ ಇದು ಹಿಂದುಳಿದ ಜಾತಿಯವರ ಮೇಲೆ ನಡೆಸುತ್ತಿರೋ ದೌರ್ಜನ್ಯ' ಅಂತ ವಿಷಯವನ್ನು ಜಾತಿ ಆಧಾರಿತ ಅಂತ ಮಾಡಿ ತಿರುಗಿಸಿ ದ್ದಾರೆ ಸಿದ್ದರಾಮಯ್ಯ. ಇದಕ್ಕೆ ಸಕಲ ಸ್ವಾಮೀಜಿಗಳೂ ಕೈ ಮತ್ತು ಧ್ವನಿಗೂಡಿಸಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಲು ನಾವು ಸದಾ ಸಿದ್ಧ ಎಂಬ ಸಂದೇಶವನ್ನು ಸಿದ್ದರಾಮಯ್ಯ ಅವರ ವಿರೋಧಿಗಳಿಗೆ ಕೊಟ್ಟಿದ್ದಾರೆ. ಸಿದ್ದ ರಾಮಯ್ಯ ಅವರ ವಿರುದ್ಧ ತೊಡೆ ತಟ್ಟಿದ ಕುಮಾರಸ್ವಾಮಿ ಅವರ ಮೇಲೆಯೇ ಈಗಾಗಲೇ ಕೆಲವು ಆರೋಪಗಳು ಬಂದಿದ್ದು ಅವರ ಜಂಘಾ ಬಲ ಉಡುಗಿಹೋಗಿದೆ. ಅದು ಸಾಲದು ಎಂಬಂತೆ ಈಗ ಸ್ವಾಮೀಜಿಗಳು ನನ್ನ ಜತೆಗೆ ಇದ್ದಾರೆ ಎಂದು ಗುಡುಗುವ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಸಿಎಂ ಕುರ್ಚಿಯನ್ನು ಗಟ್ಟಿ ಮಾಡಿಕೊಂಡಿದ್ದಾರೆ ಅನ್ನೋ ಅನಿಸಿಕೆ ಎಲ್ಲರದು. ಅದೇನೇ ಇರಲಿ, ರಾಜಕೀಯದ ದಾಳಗಳನ್ನು ಮೀರಿ ಕಾವಿ ಅನ್ನೋದು ಒಂದು ಮಾತಾಡಿದರೆ ಅದಕ್ಕೆ ಎಷ್ಟು ತಾಕತ್ತು ಇರುತ್ತೆ ಅನ್ನೋದು ಮತ್ತೊಮ್ಮೆ ಪ್ರೂವ್ ಆಗಿದೆ ಅಂದ್ರೆ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಚಂದ್ರಸ್ವಾಮಿ ಸಹವಾಸ

ಭಾರತದ ರಾಜಕಾರಣದಲ್ಲಿ ಪಿ.ವಿ.ನರಸಿಂಹ ರಾವ್ ಅವರಿಗೆ ವಿಶೇಷ ಸ್ಥಾನಮಾನವಿದೆ. ಈ ದೇಶ ಕಂಡ ಸಂಭಾವಿತ, ವಿದ್ಯಾಸಂಪನ್ನ ಮತ್ತು ಬಹುಭಾಷಾ ಪಂಡಿತ ರಾಜಕಾರಣಿ ಎಂಬ ಅಗ್ಗಳಿಕೆ ಅವರಿಗಿತ್ತು. ಕಾಂಗ್ರೆಸ್ ಪಕ್ಷದಲ್ಲೊಂದೇ ಅಲ್ಲ, ಬೇರೆ ಪಕ್ಷಗಳಲ್ಲೂ ನರಸಿಂಹರಾಯರಿಗೆ ಸ್ನೇಹಿತರು, ಅಭಿಮಾನಿಗಳು, ಹಿತೈಷಿಗಳು ಇದ್ದರು. ನೆಹರು–ಗಾಂಧಿ ಕುಟುಂಬದ ಹೊರಗಿನವರಾಗಿ ಪ್ರಧಾನಿಯಾಗುವ ಅರ್ಹತೆ ಅವರಿಗೆ ಮಾತ್ರ ಇದೆ ಎಂದು ಕಾಂಗ್ರೆಸ್ ನಾಯಕರು ಗುಟ್ಟಾಗಿ ಹೇಳುತ್ತಿದ್ದರು. ನಂತರ ಅವರು ಒಂದು ಅವಧಿಗೆ ಪ್ರಧಾನಿಯೂ ಆದರು. ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ನರಸಿಂಹರಾಯರನ್ನು ಕಂಡರೆ ವಿಶೇಷ ಅಭಿಮಾನ. ತಮ್ಮ ಕವಿತಾ ಸಂಕಲನ ಬಿಡುಗಡೆಗೆ ನರಸಿಂಹರಾಯರನ್ನೇ ಆಹ್ವಾನಿಸಿದ್ದರು. ನರಸಿಂಹರಾಯರು ಎಂಟು ಭಾಷೆಗಳಲ್ಲಿ ವ್ಯವಹರಿಸುತ್ತಿದ್ದರು. 'ಅವರಿಗೆ ಯಾವ ಹೊಣೆಗಾರಿಕೆಯನ್ನು ವಹಿಸಿದರೂ, ಅತ್ಯಂತ ಜವಾಬ್ದಾರಿಯಿಂದ ನೆರವೇರಿಸುತ್ತಾರೆ' ಎಂದು ದಿವಂಗತ ಪ್ರಧಾನಿ ಇಂದಿರಾ ಗಾಂಧಿ ವಿಶ್ವಾಸದಿಂದ ಹೇಳುತ್ತಿದ್ದರಂತೆ. ಹೀಗಾಗಿ ನರಸಿಂಹರಾಯರಿಗೆ ಅತ್ಯಂತ ಮಹತ್ವದ ಸಚಿವ ಖಾತೆಗಳ ಹೊಣೆಯನ್ನು ವಹಿಸಿದ್ದರು. ಆ ಎಲ್ಲ ಸಚಿವ ಸ್ಥಾನಗಳಿಗೆ ನರಸಿಂಹರಾಯರು ಘನತೆ ತಂದುಕೊಟ್ಟರು. ಇಂಥ ನರಸಿಂಹರಾಯರು ಜ್ಯೋತಿಷಿಗಳನ್ನು ನಂಬುತ್ತಿದ್ದರು. ಅದೇನೂ ತಪ್ಪಲ್ಲ ಬಿಡಿ. ಆದರೆ 'ದೇವಮಾನವ' ಎಂದು ಕರೆಯಿಸಿಕೊಂಡಿದ್ದ ನೇಮಿ ಚಂದ್ ಜೈನ್ ಆಲಿಯಾಸ್ ತಾಂತ್ರಿಕ ಜಗದಾಚಾರ್ಯ ಚಂದ್ರಸ್ವಾಮಿ ಅವರನ್ನು ಬಹಳವಾಗಿ ನಂಬುತ್ತಿದ್ದರು. ಇದು ನರಸಿಂಹರಾಯರನ್ನು ಹತ್ತಿರದಿಂದ ಬಲ್ಲವರಿಗೂ ನಿಗೂಢ ಪ್ರಶ್ನೆಯಾಗಿತ್ತು. ನರಸಿಂಹರಾಯರಂಥ ಬುದ್ಧಿವಂತ ಮನುಷ್ಯ, ತಿಳಿವಳಿಕೆಯುಳ್ಳವರು ನಕಲಿ ದೇವಮಾನವರನ್ನೆಲ್ಲ ನಂಬುತ್ತಾರಲ್ಲ ಎಂದು ಜನ ಮಾತಾಡಿಕೊಳ್ಳುತ್ತಿದ್ದರು. ಆಂಧ್ರಪ್ರದೇಶ ಮೂಲದ, ರಾಯರಿಗೆ ಆಪ್ತರಾದ ಹಿರಿಯ ಐಎಎಸ್ ಅಧಿಕಾರಿಯೊಬ್ಬರು, 'ನಿಮ್ಮ ಮತ್ತು ಚಂದ್ರಸ್ವಾಮಿ ಸಂಬಂಧ ನನಗೆ ಅರ್ಥವಾಗುವುದಿಲ್ಲ. ನಿಮ್ಮಂಥವರು ಆ ನಕಲಿ ಮನುಷ್ಯನನ್ನು ಹೇಗೆ ನಂಬುತ್ತೀರಿ? ಇದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ. ಆತ ನಿಮ್ಮ ಸಾಮೀಪ್ಯವನ್ನು ದುರುಪಯೋಗಪಡಿಸಿಕೊಳ್ಳಬಹುದು, ಹುಷಾರು' ಎಂದು ಎಚ್ಚರಿಸಿದ್ದರು. ಆದರೆ ನರಸಿಂಹರಾಯರು, 'ನಿಮಗೆ ಚಂದ್ರಸ್ವಾಮಿ ಬಗ್ಗೆ ಏನೂ ಗೊತ್ತಿಲ್ಲ. ಅವರಲ್ಲಿ ವಿಶೇಷ ದೈವಿಕ ಶಕ್ತಿಯಿದೆ. ಅವರ ಬಗ್ಗೆ ಏನನ್ನೂ ತಿಳಿದುಕೊಳ್ಳದೇ ಅಪದ್ಧ ನುಡಿಯಬೇಡಿ' ಎಂದು ತಮ್ಮ ಸ್ನೇಹಿತ ಅಧಿಕಾರಿಯ ಬಾಯಿ ಮುಚ್ಚಿಸಿದ್ದರು. ಮುಂದೆ ನರಸಿಂಹರಾಯರು ಪ್ರಧಾನಿಯಾದರು. ಅವರ ನಿವಾಸದೊಳಗೆ ಪ್ರವೇಶಿಸುತ್ತಿದ್ದಂತೆ, ಗೋಡೆಗೆ ಚಂದ್ರಸ್ವಾಮಿಯವರ ದೊಡ್ಡ ಫೋಟೋ! ಅವರು ಪ್ರಧಾನಿಯಾದ ಶುರುವಾತಿನಲ್ಲಿ, ಪತ್ರಿಕೆಯೊಂದು ನರಸಿಂಹರಾಯರ ಫೋಟೋವನ್ನು ಪ್ರಕಟಿಸಿತ್ತು. ಹಿಂಬದಿಗೆ ಚಂದ್ರಸ್ವಾಮಿ ಫೋಟೋ! ಅಲ್ಲಿಗೆ ದೇವಮಾನವನ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಿತ್ತು. ಪ್ರಧಾನಿಯವರ ನಿವಾಸಕ್ಕಿಂತ ಚಂದ್ರಸ್ವಾಮಿಯ ಆಶ್ರಮದಲ್ಲಿ ಹೆಚ್ಚು ಜನ ಸೇರುತ್ತಿದ್ದರು. ಪ್ರಧಾನಿಯಿಂದ ಕೆಲಸ ಮಾಡಿಸಿಕೊಳ್ಳಬಯಸುವವರು ಚಂದ್ರಸ್ವಾಮಿ ಆಶ್ರಮದಲ್ಲಿ ಮೊಕ್ಕಾಂ ಹೂಡಲಾರಂಭಿಸಿದರು. ಆಯಕಟ್ಟಿನ ಹುದ್ದೆಗಳಿಗೆ ನೇಮಕ ಬಯಸುವವರು 'ದೇವಮಾನವ'ನ ಸುತ್ತ ಸುಳಿಯಲಾರಂಭಿಸಿದರು. ಚಂದ್ರಸ್ವಾಮಿ ತಮ್ಮ ಆಶ್ರಮಕ್ಕೆ ನರಸಿಂಹರಾಯರನ್ನು ಕರೆಯಿಸಿಕೊಳ್ಳುವಷ್ಟು ಸಲುಗೆಯನ್ನು ಚಲಾಯಿಸಲಾರಂಭಿಸಿದರು. ನರಸಿಂಹರಾಯರು ಆಶ್ರಮಕ್ಕೆ ಹೋದರೆ ಒಂದೆರಡು ಗಂಟೆಗಳಾದರೂ ಹೊರಬರುತ್ತಿರಲಿಲ್ಲ. ಅವರ ಸಂಬಂಧ ಎಂಥದ್ದು ಎಂಬುದು ಇಂದಿಗೂ ನಿಗೂಢವೇ. ನಂತರ ಏನಾಯಿತು? 'ದೇವಮಾನವ'ನ ಸಹವಾಸದಿಂದ ನರಸಿಂಹರಾಯರು ತೊಂದರೆಗೆ ಸಿಲುಕಿದರು. ಪಡಬಾರದ ಕಷ್ಟ ಅನುಭವಿಸಿದರು. ಉಪ್ಪಿನಕಾಯಿ ವ್ಯಾಪಾರಿ ಲಕ್ಕುಭಾಯಿ ಪಾಠಕ್, ನರಸಿಂಹರಾಯರ ವಿರುದ್ಧ ಲಂಚ ಸ್ವೀಕಾರದ ಆರೋಪ ಹೊರಿಸಿದ. ಸೇಂಟ್ ಕೀಟ್ಸ್ ಹಗರಣದಲ್ಲೂ ನರಸಿಂಹರಾಯರ ಹೆಸರು ಕೇಳಿಬಂದಿತು. ಈ ಎರಡೂ ಪ್ರಕರಣಗಳಲ್ಲಿ ನರಸಿಂಹರಾಯರು ಖುಲಾಸೆಯಾಗಿದ್ದು ಬೇರೆ ಮಾತು. ಆದರೆ ಚಂದ್ರಸ್ವಾಮಿ ಸಹವಾಸದಿಂದ, ಅನಗತ್ಯ ವಿವಾದವನ್ನು ಎಳೆದುಕೊಳ್ಳಬೇಕಾಯಿತು. ನರಸಿಂಹರಾಯರು ಹೀಗೇಕೆ ಮಾಡಿದರು? ಗೊತ್ತಿಲ್ಲ.

ದಾಖಲೆ ಹೊರಬರುವುದು ಯಾವಾಗ?



ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ರಾಜಕೀಯ ಎನ್ನುವುದೇ 'ಆರೋಪ–ಪ್ರತ್ಯಾರೋಪ'ಗಳ ಜಂಗಿಕುಸ್ತಿ. ಈ ಜಂಗಿಕುಸ್ತಿಯಲ್ಲಿ ವಿರೋಧಿಯನ್ನು ಸೋಲಿಸುವುದರೊಂದಿಗೆ, ತಮ್ಮ ಮಾತುಗಳ ಮೂಲಕ ಜನರನ್ನು ಯಾರು ನಂಬಿಸುವರೋ ಅವರೇ ಬಲಶಾಲಿಗಳು. ಅದರಲ್ಲಿಯೂ ಕರ್ನಾಟಕದಂಥ ರಾಜಕೀಯ ವಾತಾವರಣದಲ್ಲಿ ಮಾತೇ ಮಾಣಿಕ್ಯ. ಉತ್ತರ ಭಾರತದ ಕೆಲವು ರಾಜ್ಯಗಳ ರೀತಿಯಲ್ಲಿ ಅಥವಾ ನೆರೆಯ ಆಂಧ್ರಪ್ರದೇಶದಲ್ಲಿರುವ 'ತೋಳ್ಬಲ'ದ ರಾಜಕೀಯ ಮಾಡೆಲ್ ಕರ್ನಾಟಕದಲ್ಲಿ ಈವರೆಗೆ ಬಹು ದೊಡ್ಡ ಪರಿಣಾಮವನ್ನು ಬೀರಿಲ್ಲ. ಮಾತು, ಆರೋಪವನ್ನು ಮುಂದಿಟ್ಟುಕೊಂಡೇ ಕರ್ನಾಟಕದಲ್ಲಿ ಬಹುತೇಕ ಪಕ್ಷಗಳು ಅಸ್ತಿತ್ವ ಉಳಿಸಿಕೊಂಡಿವೆ. ಮಾತಿನ ಬಲದೊಂದಿಗೆ ಹಣಬಲ ವಿರಬೇಕು ಎನ್ನುವುದು ಎರಡನೇ ಮಾತು. ಇಂಥ ಇತಿಹಾಸ ವಿರುವ ಕರ್ನಾಟಕ ರಾಜಕೀಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಾತು ಎಲ್ಲೆ ಮೀರುತ್ತಿದೆ ಎನ್ನುವುದು ಒಂದು ಭಾಗವಾದರೆ, ಆರೋಪಗಳು ಕೇವಲ 'ಆ ಕ್ಷಣ'ಕ್ಕೆ ಸೀಮಿತವಾಗಿರುವಂತೆ ಭಾಸವಾಗುತ್ತಿದೆ.

ಹೌದು, ಕರ್ನಾಟಕದಲ್ಲಿ ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಪ್ರತಿಪಕ್ಷ ಸ್ಥಾನದಲ್ಲಿರಲಿ, ಎದುರಾಳಿಯ ಮೇಲೆ ಯಾವುದೇ ಆರೋಪ ಹೊರಿಸಿಬಿಡುವುದು ಸಾಮಾನ್ಯ. ಬಳಿಕ ಅದರ ದಾಖಲೆಗಳನ್ನು ಕೇಳಿದರೆ, 'ಸೂಕ್ತ ಸಮಯದಲ್ಲಿ ಸೂಕ್ತ ದಾಖಲೆ' ಎನ್ನುವ ಮಾತನ್ನು ಹೇಳುವ ಮೂಲಕ ಸಮಯ ಸಾಗಹಾಕಿಬಿಡುವುದನ್ನು ನೋಡಿದ್ದೇವೆ. ಆದರೆ ಈ ಸೂಕ್ತ ಸಮಯ ಎಂದು ಬರುತ್ತದೆ ಎನ್ನುವ ಪ್ರಶ್ನೆಗೆ ಮಾತ್ರ ಯಾವ ರಾಜಕಾರಣಿಯ ಬಳಿಯೂ ಉತ್ತರವಿಲ್ಲ.

ಈ ರೀತಿಯ 'ಹಿಟ್ ಆ್ಯಂಡ್ ರನ್' ರಾಜಕಾರಣಗಳು ಯಾವುದೋ ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ, ಬಹುತೇಕ ಎಲ್ಲ ಪಕ್ಷದಲ್ಲಿಯೂ ಈ ರೀತಿಯ ನಡವಳಿಕೆ ಇತ್ತೀಚಿನ ದಿನದಲ್ಲಿ ಹೆಚ್ಚಾಗುತ್ತಿರುವುದು ಸಾಮಾನ್ಯವಾಗಿದೆ. ಸಾಮಾಜಿಕ ಜಾಲತಾಣ ಬರುವ ಮೊದಲಾದರೆ, ಸುದ್ದಿಗೋಷ್ಠಿ ಅಥವಾ ಮಾಧ್ಯಮಗಳ ಮೂಲಕ ಈ ರೀತಿ ಮಾಡಬೇಕಾಗಿತ್ತು. ದಾಖಲೆಸಹಿತ ಆರೋಪವೋ, ದಾಖಲೆರಹಿತ ಆರೋಪವೋ ಎಂದು ಪರಾಮರ್ಶಿಸುವ ಕೆಲಸವನ್ನು ಮಾಧ್ಯಮಗಳಾದರೂ ಮಾಡುತ್ತಿದ್ದವು. ಆದರೀಗ ಅದೆಲ್ಲ ಬೇಕಿಲ್ಲ, ಬೆಳಗ್ಗೆ ಒಂದು, ಸಂಜೆಯೊಂದು ಪೋಸ್ಟ್ ಮಾಡಿದರೆ ಸಾಕು. ಆ ಆರೋಪ ಅಥವಾ ಪೋಸ್ಟ್‌ನ ಸತ್ಯಾಸತ್ಯತೆ ಅರಿಯುವ ಮೊದಲೇ, 'ವೈರಲ್ ಆಗಿ' ಆಗಬೇಕಾದ ಡ್ಯಾಮೇಜ್ ಆಗಿರುತ್ತದೆ.

ಇದು ಕೇವಲ ಯಾವುದೋ ಒಂದು ಪಕ್ಷಕ್ಕೆ ಸಂಬಂಧಿಸಿರುವ ಸಮಸ್ಯೆಯಾಗಿ ಉಳಿದಿಲ್ಲ. ಬಿಜೆಪಿಗರ ಮೇಲೆ ಕಾಂಗ್ರೆಸಿಗರು, ಕಾಂಗ್ರೆಸಿಗರ ಮೇಲೆ ಬಿಜೆಪಿಗರು ಈ ರೀತಿ ಆರೋಪ ಮಾಡಿ ಹೋಗುವ ನಾಯಕರಿಗೆ ಇದರಿಂದ ಯಾವುದೇ ಸಮಸ್ಯೆಯಾಗುವುದಿಲ್ಲ. ಆದರೆ ಆರೋಪ ಮಾಡಿಸಿಕೊಂಡ ವ್ಯಕ್ತಿ, ತಾನೇನೂ ಮಾಡಿಲ್ಲ ಎನ್ನುವುದನ್ನು 'ಪ್ರೂವ್' ಮಾಡಬೇಕಾದ ಒತ್ತಡ ಹಾಗೂ ಅನಿವಾರ್ಯತೆಗೆ ಸಿಲುಕುತ್ತಾನೆ. ಬಹುತೇಕ ಸಮಯದಲ್ಲಿ ಇಂದು ಆರೋಪ ಹೊತ್ತಿರುವ ವ್ಯಕ್ತಿ, ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಬದಲಿಗೆ, 'ಅವರ ಕಾಲದಲ್ಲಿ ಆಗಿಲ್ಲವೇ?' ಎನ್ನುವ ಪ್ರಶ್ನೆ ಎತ್ತುತ್ತಾನೆ. ಅದಕ್ಕೆ ದಾಖಲೆಗಳನ್ನು ಕೇಳಿದರೆ ಪುನಃ 'ಸಮಯ ಬಂದಾಗ ಕೊಡುತ್ತೇನೆ' ಎನ್ನುವ ಸಿದ್ಧ ಉತ್ತರದೊಂದಿಗೆ ಜಾಗ ಖಾಲಿಮಾಡುತ್ತಾನೆ.

ಕಳೆದೊಂದು ವರ್ಷದಿಂದ ಈ ರೀತಿಯ ಹಿಟ್ ಆ್ಯಂಡ್ ರನ್ ಸಂಸ್ಕೃತಿ ಹೆಚ್ಚುತ್ತಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು 'ಸರಕಾರವಿಡೀ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಎಲ್ಲರೂ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆ. ಈ ಎಲ್ಲದಕ್ಕೂ ನನ್ನ ಬಳಿಯಿರುವ ಪೆನ್‌ಡ್ರೈವ್‌ನಲ್ಲಿ ದಾಖಲೆಗಳಿವೆ' ಎನ್ನುವ ಮಾತನ್ನು ಹೇಳಿದ್ದರು. ಈ ಪೆನ್‌ಡ್ರೈವ್ ಬಗ್ಗೆ ಕೇಳಿದಾಗೆಲ್ಲಾ ಜೇಬಿನಲ್ಲಿದ್ದ ಪೆನ್‌ಡ್ರೈವ್ ಹೊರ ತೆಗೆಯುವುದು, 'ಇಗೋ ಇದರಲ್ಲಿದೆ' ಎನ್ನುವುದು ಅವರ ಅಭ್ಯಾಸವಾಗಿತ್ತು. ಆದರೆ ವರ್ಷ ಕಳೆದರೂ ಈ ಪೆನ್‌ಡ್ರೈವ್‌ನಲ್ಲಿರುವ ದಾಖಲೆಗಳು ಮಾತ್ರ ಕುಮಾರಸ್ವಾಮಿ ಅವರಿಂದ ಹೊರಬಂದಿಲ್ಲ.

ಕುಮಾರಸ್ವಾಮಿ ಅವರು ಈ ರೀತಿ ಆರೋಪ ಮಾಡಿ ಹೋಗುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ ಹತ್ತು ಹಲವು ಪ್ರಕರಣಗಳಲ್ಲಿ ದಾಖಲೆ ಬಿಡುಗಡೆ ಮಾಡುವುದಾಗಿ ಗರ್ಜಿಸಿ ಬಳಿಕ ಸುಮ್ಮನಾಗಿ ಮತ್ತೊಂದು ಹೊಸ ಆರೋಪ ಪಟ್ಟಿಯನ್ನು ಮಾಧ್ಯಮದ ಮುಂದೆ ತಂದಿದ್ದಾರೆ. ಇದೇ ಕಾರಣಕ್ಕೆ 'ಹಿಟ್ ಆ್ಯಂಡ್ ರನ್' ಎನ್ನುವ ಬಿರುದು ಅವರಿಗೆ ಸಿಕ್ಕಿದೆ. ಹಿಟ್ ಆ್ಯಂಡ್ ರನ್ ಸಂಸ್ಕೃತಿ ಆರಂಭಿಸಿದ್ದು ಅವರೇ ಆಗಿರಬಹುದು. ಆದರೆ ಇತ್ತೀಚಿನ ದಿನದಲ್ಲಿ ಎಲ್ಲ ಪಕ್ಷದವರೂ ಇದೇ ದಾರಿಯಲ್ಲಿ ಸಾಗುತ್ತಿದ್ದಾರೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಉದಾಹರಣೆಗೆ, ಕಳೆದ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ 40 ಪರ್ಸೆಂಟ್ ಸರಕಾರ, ಪೇಟಿಎಂ ಸರಕಾರ ಸೇರಿದಂತೆ ಹತ್ತು ಹಲವು ಗಂಭೀರ ಆರೋಪಗಳನ್ನು ದಿನಕ್ಕೊಂದರಂತೆ ಮಾಡುತ್ತಾ ಸಾಗಿದರು. ಆದರೆ ಈ ಯಾವುದಕ್ಕೂ ದಾಖಲೆಗಳನ್ನು ಮಾತ್ರ ನೀಡಲಿಲ್ಲ. ಬಿಜೆಪಿ ಸರಕಾರದ ವಿರುದ್ಧ ಆರೋಪ ಮಾಡುವ ಪ್ರತಿ ಹಂತದಲ್ಲಿಯೂ, ಇದಕ್ಕೆ ಯಾವುದಾದರೂ ದಾಖಲೆಗಳನ್ನು ನೀಡಿ ಎಂದು ಹತ್ತು ಹಲವು ಸಮಯದಲ್ಲಿ ಕೇಳಿದಾಗಲೂ, ಸಮಯ ಬಂದಾಗ ನೀಡುತ್ತೇವೆ ಎಂದರೇ ಹೊರತು ಯಾವುದನ್ನೂ ನೀಡಲಿಲ್ಲ. ಕಾಂಗ್ರೆಸ್ ತಾನು ಘೋಷಿಸಿದ ಪಂಚಗ್ಯಾರಂಟಿಗಳು ಮತ್ತು ಈ ಸರಣಿ ಆರೋಪಗಳ ಬಲದೊಂದಿಗೆ ರಾಜ್ಯದಲ್ಲಿ ಅಧಿಕಾರದ ಗದ್ದುಗೆಯನ್ನು ಹಿಡಿಯಿತು. ಅಧಿಕಾರಕ್ಕೆ ಬಂದ ಬಳಿಕವಾದರೂ ಬಿಜೆಪಿ ಸರಕಾರದ ಅವಧಿಯ ಒಂದೊಂದೇ ಭ್ರಷ್ಟಾಚಾರದ ದಾಖಲೆಗಳನ್ನು ಕಾಂಗ್ರೆಸಿಗರು ಬಹಿರಂಗಪಡಿಸುತ್ತಾರೆ ಎಂದೇ ಅನೇಕರು ಭಾವಿಸಿದ್ದರು. ಆದರೆ ಅಧಿಕಾರಕ್ಕೆ ಬಂದು ವರ್ಷ ಕಳೆದರೂ, 'ಸಮಯ ನೋಡಿಕೊಂಡು ಬಿಡುಗಡೆ ಮಾಡುತ್ತೇವೆ', 'ತನಿಖೆ ನಡೆಸುತ್ತಿರುವ ಸಂಸ್ಥೆಗಳ ಮುಂದೆ ಮಾಹಿತಿ ನೀಡುತ್ತೇವೆ' ಎನ್ನುವ ಉತ್ತರದ ಮೂಲಕ ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸವನ್ನು ಮುಂದುವರಿಸಿದ್ದಾರೆ. ಇದು ಕೇವಲ ಕಾಂಗ್ರೆಸ್‌ಗೆ ಸೀಮಿತವಾಗಿಲ್ಲ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಬಿಜೆಪಿಯವರೂ ಇದೇ ಚಾಳಿಯನ್ನು ಮುಂದುವರಿಸಿದ್ದಾರೆ.

ಬಿಜೆಪಿ ಸರಕಾರದ ಅವಧಿಯಲ್ಲಿ ಸುಮಾರು 14 ಹಗರಣ ನಡೆದಿವೆ ಎನ್ನುವ ಆರೋಪವನ್ನು ಕಾಂಗ್ರೆಸ್ ನಾಯಕರು ಮಾಡಿಕೊಂಡು ಬಂದಿದ್ದರು. ಈ ಎಲ್ಲ ಆರೋಪಗಳ ಬಗ್ಗೆ ತನಿಖೆ ನಡೆಸುವ ಮಾತಗಳನ್ನು ಆಡಿದ್ದ ನಾಯಕರು, ಅಧಿಕಾರಕ್ಕೆ ಬರುತ್ತಿದ್ದಂತೆ ಎಸ್‌ಐಟಿ, ನ್ಯಾಯಾಂಗ ತನಿಖೆಯಂತೆ ವಿವಿಧ ಮಾದರಿಯಲ್ಲಿ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿದ್ದರು. ಆದರೆ ತನಿಖೆ ಆರಂಭಗೊಂಡು ವರ್ಷ ಕಳೆದರೂ, ಆ ಸಂಸ್ಥೆಗಳ ಮುಂದೆ ಯಾವುದೇ ದಾಖಲೆಗಳನ್ನು ಸಲ್ಲಿಕೆ ಮಾಡಿಲ್ಲ. ಬಿಜೆಪಿ ವಿರುದ್ಧ ಕೇಳಿಬಂದ ಬಹುದೊಡ್ಡ ಆರೋಪವೆಂದರೆ, 40 ಪರ್ಸೆಂಟ್ ಕಮಿಷನ್. ಈ ಆರೋಪಕ್ಕೆ ಗುತ್ತಿಗೆದಾರರ ಸಂಘದವರು ದಾಖಲೆ ನೀಡಬೇಕಿತ್ತು. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ದಾಖಲೆ ನೀಡುವುದಾಗಿ ಒಂದೆರಡು ಬಾರಿ ಹೇಳಿದರೇ ಹೊರತು, ದಾಖಲೆಗಳನ್ನು ನೀಡಿದ್ದಾರೆ ಎನ್ನುವುದಕ್ಕೆ ಯಾವುದೇ ಮಾಹಿತಿಗಳಿಲ್ಲ ಎನ್ನುವುದು ವಿಪರ್ಯಾಸ.

ಇನ್ನು, ಈ ರೀತಿಯ ಆರೋಪಗಳ ಬಳಿಕ ಸಾಮಾನ್ಯವಾಗಿ ಕೇಳಿಬರುವ ಮಾತೆಂದರೆ, ಪ್ರಕರಣವನ್ನು ವಿಶೇಷ ತನಿಖಾ ದಳಕ್ಕೆ ಒಪ್ಪಿಸಿದ್ದೇವೆ ಅಥವಾ ನ್ಯಾಯಾಂಗ ತನಿಖೆ ಮಾಡಲಾಗುವುದು ಎನ್ನುವುದು. ಕರ್ನಾಟಕದಲ್ಲಿ ಈವರೆಗೆ ಈ ರೀತಿಯ ಭ್ರಷ್ಟಾಚಾರದ ಆರೋಪದ ಕಾರಣಕ್ಕೆ ನೂರಾರು ನ್ಯಾಯಾಂಗ ತನಿಖೆ ನಡೆದಿರುವ ಉದಾಹರಣೆಗಳಿವೆ. ಆರಂಭಿಕ ಕೆಲ ವಾರಗಳ ಕಾಲ ಈ ನ್ಯಾಯಾಂಗ ತನಿಖೆಗೆ ಭಾರಿ ಬೇಡಿಕೆಯಿರುತ್ತದೆ. ಎಲ್ಲರೂ 'ಫೋಕಸ್' ಆಗಿರುತ್ತಾರೆ. ಆದರೆ ಅದಾದ ಬಳಿಕ ಈ ನ್ಯಾಯಾಂಗ ವರದಿ ಏನಾಯಿತು? ತನಿಖಾ ಸಂಸ್ಥೆಗಳು ಏನಾದವು ಎನ್ನುವುದೇ ಬಹುತೇಕರಿಗೆ ತಿಳಿಯುವುದಿಲ್ಲ. ಇನ್ನು ಈ ಸಂಸ್ಥೆಗಳು ಒಂದು ವರ್ಷ, ಎರಡು ವರ್ಷ ಓಡಾಡಿ, ಸುತ್ತಾಡಿ 'ಸಾಕ್ಷ್ಯ' ಸಂಗ್ರಹಿಸಿ ಒಂದು ವರದಿಯನ್ನು ಸರಕಾರಕ್ಕೆ ಸಲ್ಲಿಸುತ್ತವೆ. ಆದರೆ ಈ ವರದಿ ಸಲ್ಲಿಕೆಯಾದ ಬಳಿಕ ಮುಂದೇನು ಎನ್ನುವುದು ಮಾತ್ರ ಯಾರಿಗೂ ಗೊತ್ತಿಲ್ಲ. ರಾಜ್ಯದ ಇತಿಹಾಸದಲ್ಲಿ ಈವರೆಗೆ ಬೆರಳೆಣಿಕೆಯಷ್ಟು ನ್ಯಾಯಾಂಗ ವರದಿಗಳ ಆಧಾರದಲ್ಲಿ ತನಿಖೆ, ಶಿಕ್ಷೆಯಾಗಿದೆಯೇ ಹೊರತು, ಇನ್ನುಳಿದ ಎಲ್ಲ ವರದಿಗಳು 'ರೆಕಾರ್ಡ್ ರೂಮ್'ನಲ್ಲಿ ಧೂಳು ಹಿಡಿದು ಕೂತಿವೆ.

ಹಾಗಾದರೆ, ಈ ಎಲ್ಲ ನ್ಯಾಯಾಂಗ ತನಿಖೆಯ ನಾಟಕಗಳನ್ನು ಮಾಡುವುದಾದರೂ ಏಕೆ ಎನ್ನುವ ಪ್ರಶ್ನೆಯನ್ನು ಅನೇಕರು ಕೇಳುತ್ತಾರೆ. ಇದಕ್ಕೆ ಸರಳ ಉತ್ತರ 'ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು' ಎನ್ನುವುದಲ್ಲದೇ ಮತ್ತೇನೂ ಇಲ್ಲ. ಯಾವುದೇ ರಾಜಕೀಯ ನಾಯಕನ ವಿರುದ್ಧ ಆರೋಪ ಕೇಳಿಬಂದಾಗ, ಆ ಕ್ಷಣದಲ್ಲಿ ಆ ಪ್ರಕರಣವನ್ನು 'ಡೈವರ್ಟ್' ಮಾಡಿದರೆ ಆತ ಬಚಾವಾಗುತ್ತಾನೆ. ಅದಕ್ಕೆ ಈ ರೀತಿಯ ವಿಶೇಷ ತನಿಖಾ ತಂಡ, ನ್ಯಾಯಾಂಗ ತನಿಖೆ ಎನ್ನುವ ಮೂಲಕ ವಿಷಯವನ್ನು ತಣ್ಣಗೆ ಮಾಡುತ್ತಾರೆ.

ರಾಜಕೀಯ ಪಕ್ಷಗಳು ತಮಗೆ ಬೇಕಾದಾಗ ಈ ರೀತಿಯ 'ಭ್ರಷ್ಟಾಚಾರ' ದಾಖಲೆಗಳ ಬಗ್ಗೆ ಪ್ರಸ್ತಾಪಿಸುತ್ತವೆಯೇ ಹೊರತು, ಭ್ರಷ್ಟಾಚಾರದ ದಾಖಲೆಗಳನ್ನು ಎಂದಿಗೂ ಬಹಿರಂಗಪಡಿಸಿದ ಉದಾಹರಣೆಗಳಿಲ್ಲ. ಇನ್ನು ದಾಖಲೆಗಳನ್ನು ಬಿಡುಗಡೆಗೊಳಿಸಿದರೂ, 'ಒನ್‌ಸೈಡ್' ದಾಖಲೆಗಳನ್ನು ಜನರಿಗೆ ತೋರಿಸಿ ತಮಗೆ ಬೇಕಾದ ಅಭಿಪ್ರಾಯ ಮೂಡಿಸುವ ಪ್ರಯತ್ನ ಮಾಡುತ್ತಾರೆಯೇ ಹೊರತು, ವಿಷಯವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ರೀತಿಯಲ್ಲಿ ಈವರೆಗೆ ಯಾವುದೇ ದಾಖಲೆ ಬಿಡುಗಡೆಯ ಘೋಷಣೆಗಳನ್ನು ಮಾಡಿಲ್ಲ ಎನ್ನುವುದು ಕಟುಸತ್ಯ. ಈಗಲೂ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ದಾಖಲೆ ಬಿಡುಗಡೆ ಮಾಡುವುದಾಗಿ, ಬಿಜೆಪಿಗರು, ಜೆಡಿಎಸ್ ನಾಯಕರು ಹೇಳುತ್ತಾರೆ. ಇದಕ್ಕೆ ಪ್ರತ್ಯುತ್ತರವಾಗಿ 'ಬಿಜೆಪಿ ಅವಧಿಯ ದಾಖಲೆ'ಗಳನ್ನು ನಾವು ಬಿಡುಗಡೆ ಮಾಡುತ್ತೇವೆಂದು ಕಾಂಗ್ರೆಸಿಗರು ಹೇಳುತ್ತಾರೆ. ಆದರೆ ಮತಕೊಟ್ಟು ಗೆಲ್ಲಿಸಿರುವ ಮತಪ್ರಭು ಮಾತ್ರ 'ಅಕ್ರಮ' ದಾಖಲೆಗಳ ಬಿಡುಗಡೆ ದಿನದ ಎಣಿಕೆಯಲ್ಲಿ ತೊಡಗಿರಬೇಕಷ್ಟೇ. ಒಬ್ಬರ ಮೇಲೊಬ್ಬರು 'ದಾಖಲೆ' ಯುದ್ಧ ಮಾಡುತ್ತಿರುವುದು ನೋಡಿದಾಗ, ಒಂದು ದಿನ ಎಲ್ಲ ಸರಕಾರದ ಅವಧಿಯಲ್ಲಿ ನಡೆದಿರುವ ಅಕ್ರಮಗಳ ದಾಖಲೆಗಳನ್ನು ಯಾರಾದರೊಬ್ಬರು ಗುಡ್ಡೆ ಹಾಕಬೇಕು ಎನ್ನುವುದು ಬಹುತೇಕರ ಕನಸಾಗಿದೆ. ಆದರೆ ಈ ಕೆಲಸವನ್ನು ಮಾಡುವವರ್‍ಯಾರು ಎನ್ನುವುದೇ ಈಗಿರುವ ಯಕ್ಷಪ್ರಶ್ನೆ!

ಹೋರಾಟಗಳು ಬೇಗ ತಣ್ಣಗಾಗುವುದೇಕೆ?

ಯಕ್ಷಪ್ರಶ್ನೆ

ಸಾಗರ್ ಮುಧೋಳ
vveditoped@gmail.com

'ಅತ್ಯಾಚಾರದ ವಿರುದ್ಧದ ಹೋರಾಟಗಳು ಬಹು ಬೇಗ ತಣ್ಣಗಾಗುವುದೇಕೆ? ಇಷ್ಟೇನಾ ನಿಮ್ಮ ಕಿಚ್ಚು? ಸಹಾನುಭೂತಿಯು ಬರಿಯ 4 ಮೋಂಬತ್ತಿಗಳನ್ನು ಬೆಳಗಿಸುವುದಕ್ಕಾ ಅಥವಾ Demanding for justice ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಅಬ್ಬರಿಸಿ ನಾಲ್ಕು ದಿನ ಟ್ರೆಂಡ್ ಮಾಡಿ, ನಾವು ಕೂಡ ಇಂಥ ಹೋರಾಟದ ಭಾಗ ಎಂದು ತೋರಿಸಿಕೊಳ್ಳಲಿಕ್ಕಾ?'– ಈ ಪ್ರಶ್ನೆಗಳನ್ನು ಕೇಳುತ್ತಿರುವುದು ಅತ್ಯಾಚಾರಕ್ಕೊಳಗಾಗಿ ದುರಂತದ ಜೀವನ ನಡೆಸುತ್ತಿರುವವರು ಅಥವಾ ತಮ್ಮ ಪ್ರಾಣವನ್ನೇ ಕಳೆದುಕೊಂಡು ವರ್ಷಗಳೇ ಆದರೂ ನ್ಯಾಯಸಿಗದಂಥ ಮಹಾತಾಯಿಯರ ಆತ್ಮಗಳು. ಮಾತ್ರವಲ್ಲ, ಅತ್ಯಾಚಾರಕ್ಕೊಳಗಾದ ಹೆಣ್ಣಿನ ನೆತ್ತರನ್ನು ನುಂಗಿದ ಭೂತಾಯಿಯ ಒಡಲು, ಆಕೆಯ ಉಸಿರಾಟವನ್ನು ಮೇಳೈಸಿಕೊಂಡ ಸುತ್ತಲಿನ ಗಾಳಿ, ಆಕೆಯ ದೇಹವನ್ನು ಸುಟ್ಟ ಬೆಂಕಿ, ನಮ್ಮಷ್ಟು ಓದದೆ–ಬರೆಯದೆ ಇದ್ದರೂ ನಮ್ಮಂತೆ ಅರಿವುಗೇಡಿಗಳಾಗದ ಪಶು–ಪಕ್ಷಿಗಳು ಹೀಗೆ ಒಂದಿಡೀ ಪ್ರಕೃತಿಯೇ ರೋದಿಸುತ್ತಿದೆ.

ಇತ್ತೀಚೆಗೆ ಕೋಲ್ಕತ್ತಾದಲ್ಲಾದ ವೈದ್ಯೆಯ ಮೇಲಿನ ಅತ್ಯಾಚಾರ ಈ ದೇಶಕ್ಕೆ ಅಂಟಿದ ಮತ್ತೊಂದು ಕಳಂಕ. ಮನೆಯ ಮಗಳಿಗೇ ಸುರಕ್ಷಿತ ವಾತಾವರಣವಿಲ್ಲದಿರುವಾಗ, ನಾವು ಇನ್ನೇನು ಘನಂದಾರಿ ಸಾಧನೆ ಮಾಡಲು ಹೊರಟಿದ್ದೇವೆ? ಒಂದೆಡೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯೂ, ಆರೋಗ್ಯ ಮತ್ತು ಗೃಹಮಂತ್ರಿಯೂ ಸ್ವತಃ ಒಬ್ಬ ಮಹಿಳೆಯೂ ಆಗಿರುವ ಮಮತಾ ಬ್ಯಾನರ್ಜಿ ಸರಕಾರದ ಅಧಿನಾಯಕಿಯಾಗಿದ್ದುಕೊಂಡು ತಮ್ಮ ಸರಕಾರದ ವಿರುದ್ಧವೇ ಪ್ರತಿಭಟನೆ ಮಾಡುತ್ತಿದ್ದಾರೆ. ಇನ್ನೊಂದೆಡೆ, ಹುಡುಗ–ಹುಡುಗಿಯರು ತುಂಬಾ ಸಲಿಗೆಯಿಂದ ಒಟ್ಟಿಗೆಯಿರುವುದರಿಂದಲೇ ಅತ್ಯಾಚಾರದಂಥ ಘಟನೆಗಳು ಮರುಕಳಿಸುತ್ತಿವೆ ಎಂದು ಹೇಳಿಕೆ ನೀಡಿದ್ದಾರೆ. ಕರ್ನಾಟಕದಲ್ಲೂ ಹಿಂದೊಮ್ಮೆ ಅತ್ಯಾಚಾರ ಪ್ರಕರಣವೊಂದು ಬೆಳಕಿಗೆ ಬಂದಾಗ ರಾಜ್ಯದ ಅಂದಿನ ಗೃಹಮಂತ್ರಿ ಮಾಧ್ಯಮಗಳೆದುರು, 'ಅಲ್ರೀ, ಆ ಹುಡುಗಿ ಅಷ್ಟೊತ್ತಿಗೆ ಅಲ್ಲಿಗೇಕೆ ಹೋದಳು?' ಎಂದು ಹೇಳಿ, ಸಂತ್ರಸ್ತೆಯದು ಕೂಡ ತಪ್ಪಿದೆ ಎಂಬ ಧಾಟಿಯಲ್ಲಿ ಮಾತಾಡಿದ್ದರು. ಅತ್ಯಾಚಾರದ ಕುರಿತಾದ ಜೋಕ್ ಒಂದನ್ನು ಶಾಸಕರೊಬ್ಬರು ಪ್ರಜಾಪ್ರಭುತ್ವದ ದೇಗುಲವಾದ ವಿಧಾನಸಭೆಯಲ್ಲಿ ಹೇಳಿದಾಗ, ಅವರನ್ನು ಎಚ್ಚರಿಸಿ ಸುಮ್ಮನಿರಿಸಬೇಕಾಗಿದ್ದ ಸಭಾಧ್ಯಕ್ಷರು, ತಾವೂ ಜತೆಗೂಡಿ ನಕ್ಕಿದ್ದರು. ಅಪ್ರಾಪ್ತ ಬಾಲಕಿಯ ಮೇಲಿನ ಲೈಂಗಿಕ ಕಿರುಕುಳದ ಆರೋಪಿಯಾಗಿರುವವರು ರಾಜ್ಯದ ಹಲವು ರಾಜಕಾರಣಿಗಳಿಗೆ 'ಅಪ್ಪಾಜಿ'. ವಿಧಾನಸೌಧದಲ್ಲಿ ಬ್ಲೂಫಿಲಂ ನೋಡಿದವರು, ಕಾಮಕೇಳಿಯ ವಿಡಿಯೋಗಳಲ್ಲಿದ್ದ ಲಜ್ಜೆಗೆಟ್ಟವರೆಲ್ಲ ನಮ್ಮ ಮಹಾನಾಯಕರು!

'ಅತ್ಯಾಚಾರಿಗಳಿಗೆ ನೇಣುಹಾಕಬೇಕು' ಎಂದೇನೋ ನಾವು ಅಬ್ಬರಿಸುತ್ತೇವೆ, ಆದರೆ ಇಂಥ ಎಷ್ಟು ಶಿಕ್ಷೆಗಳಾಗಿವೆ? ಎಷ್ಟು ಮಂದಿ ಸಂತ್ರಸ್ತೆಯರಿಗೆ ನ್ಯಾಯ ಸಿಕ್ಕಿದೆ? ಬಹಳ ಹಿಂದೆ ಹೋಗುವುದು ಬೇಡ, 1972ರ ಮಥುರಾ ಅತ್ಯಾಚಾರ ಪ್ರಕರಣವನ್ನೇ ಪರಿಗಣಿಸೋಣ. ಮಹಾರಾಷ್ಟ್ರದ ಆದಿವಾಸಿ ಬುಡಕಟ್ಟು ಸಮುದಾಯದ 16ರ ಹರೆಯದ ಮಥುರಾ ಎಂಬಾಕೆ ತನ್ನ ಸೋದರನೊಂದಿಗೆ ಇನ್ನೊಬ್ಬರ ಮನೆಗೆಲಸ ಮಾಡಿ ಜೀವನ ಸಾಗಿಸುತ್ತಿದ್ದಳು. ಆಕೆಯ ಮದುವೆ ನಿಶ್ಚಯವಾಯಿತು; ಆದರೆ ಅವಳಿನ್ನೂ ಅಪ್ರಾಪ್ತೆ ಎಂದು ದೂರು ನೀಡಲು ಆಕೆಯ ಸೋದರ ಗಡ್‌ಚಿರೋಲ್‌ ಜಿಲ್ಲೆಯ ದೇಸಾಯಿಗಂಜ್ ಪೊಲೀಸ್ ಠಾಣೆಗೆ ತೆರಳಿದ. ದೂರುದಾರರು ಮತ್ತು ಆರೋಪಿಗಳೆಲ್ಲವನ್ನೂ ಹೊರಗೆ ಕಳಿಸಿದ ಪೊಲೀಸರು ಮಥುರಾಳನ್ನು ಮಾತ್ರ ಠಾಣೆಯಲ್ಲೇ ಇರಲು ಹೇಳಿದರು. ನಂತರ ಇಬ್ಬರು ಪೇದೆಗಳು ಆ ಮುಗ್ಧೆಯ ಮೇಲೆ ಬರ್ಬರವಾಗಿ ಅತ್ಯಾಚಾರವೆಸಗಿದರು. ಆದರೆ ಅವರ ಮೇಲೆ ಯಾವ ದೂರೂ ದಾಖಲಾಗಲಿಲ್ಲ. ಜನರು ಒಗ್ಗಟ್ಟಾಗಿ, 'ನೀವು ದೂರು ದಾಖಲಿಸಿಕೊಳ್ಳದಿದ್ದರೆ ಪೊಲೀಸ್ ಠಾಣೆಯನ್ನೇ ಸುಟ್ಟುಬಿಡುತ್ತೇವೆ' ಎಂದು ಆಕ್ರೋಶ ವ್ಯಕ್ತಪಡಿಸಿದಾಗ, 'ನಾಮ್–ಕೆ–ವಾಸ್ತೆ' ದೂರು ದಾಖಲಿಸಿಕೊಂಡರು. ಈ ಪ್ರಕರಣ ಸೆಷನ್ಸ್ ಕೋರ್ಟ್ ಅಂಗಳವನ್ನು ತಲುಪಿದಾಗ, 'ಆರೋಪಿತರ ತಪ್ಪು ಯಾವ ರೀತಿಯಲ್ಲೂ ಸಾಬೀತಾಗಿಲ್ಲ. ಮಥುರಾ ಲೈಂಗಿಕವಾಗಿ ತುಂಬಾ ಉತ್ಸುಕಳಾಗಿದ್ದಳು ಮತ್ತು ಇದು ಅತ್ಯಾಚಾರದ ಪ್ರಕರಣವಲ್ಲ' ಎಂದು ನ್ಯಾಯಾಲಯ ಷರಾ ಬರೆದು ಆರೋಪಿ ಪೇದೆಗಳನ್ನು ಬಿಡುಗಡೆ ಮಾಡಿ ಆದೇಶ ನೀಡಿತು. ಇದನ್ನು ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ನ ಮೆಟ್ಟಿಲೇರಿದರೂ ವಿಶೇಷವೇನೂ ಘಟಿಸಲಿಲ್ಲ; ಇಬ್ಬರು ಆರೋಪಿಗಳಿಗೆ ತಲಾ ಒಂದು ವರ್ಷ ಮತ್ತು ಐದು ವರ್ಷಗಳ ಜೈಲುಶಿಕ್ಷೆ ನೀಡಿ ನ್ಯಾಯಾಲಯ ಕೈತೊಳೆದುಕೊಂಡಿತು. ಪ್ರಕರಣ ಸರ್ವೋಚ್ಚ ನ್ಯಾಯಾ ಲಯದ ಮೆಟ್ಟಿಲೇರಿದಾಗ ಅಲ್ಲಿನ ತ್ರಿಸದಸ್ಯ ನ್ಯಾಯಪೀಠವು, 'ಅತ್ಯಾಚಾರದ ಸಂದರ್ಭದಲ್ಲಿ ಆಕೆಯು ಪ್ರತಿಭಟಿಸಿದ ಯಾವುದೇ ಗುರುತುಗಳು ಪತ್ತೆಯಾಗಿಲ್ಲ. ಆಕೆ ಲೈಂಗಿಕವಾಗಿ ತುಂಬಾ ಉತ್ಸುಕಳಾಗಿದ್ದಳು. ಪೇದೆಗಳು ರಾತ್ರಿಹೊತ್ತು ಮದ್ಯ ಪಾನ ಮಾಡಿರಬೇಕು, ಈಕೆ ಅವರನ್ನು ಲೈಂಗಿಕ ಕ್ರಿಯೆಗೆ ಪ್ರೇರೇಪಿಸಿರಬಹುದು. ಇದು ಅತ್ಯಾಚಾರವಲ್ಲ' ಎಂದು ತೀರ್ಪು ನೀಡಿತು.

ಬನ್ವಾರಿ ದೇವಿ ಎಂಬ ಸಾಮಾಜಿಕ ಕಾರ್ಯಕರ್ತೆಗೆ ಸಂಬಂಧಿ ಸಿದ 1992ರ ಪ್ರಕರಣವೊಂದನ್ನು ನೋಡೋಣ. ಈಕೆ ರಾಜ ಸ್ಥಾನದ ಬತೇರಿಯಲ್ಲಿ ಬಾಲ್ಯವಿವಾಹಗಳನ್ನು ತಡೆಯುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿದ್ದವರು. ಪತಿಯೊಂದಿಗೆ ಈಕೆ ಹೊಲದಲ್ಲಿ ದುಡಿಯುತ್ತಿರುವಾಗ ಬಂದ ಸ್ಥಳೀಯ ಗೂಂಡಾಗಳು ಪತಿಯನ್ನು ಥಳಿಸಿ, ಅವನ ಎದುರಿನಲ್ಲೇ ಬನ್ವಾರಿ ದೇವಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ದರು. ದೂರು ನೀಡಲೆಂದು ಆಕೆ ಪೊಲೀಸ್ ಠಾಣೆಗೆ ಹೋದಾಗ, ದೂರು ದಾಖಲಿಸಿಕೊಳ್ಳಲು ಅಲ್ಲಿ ಮೊದಲಿಗೆ ಅಸಮ್ಮತಿ ತೋರಿದರು. ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆ ಯನ್ನೂ ಸರಿಯಾಗಿ ಮಾಡಲಿಲ್ಲ. ಆದರೆ ಆರೋಪಿಗಳು ಬಹುದೊಡ್ಡ ನ್ಯಾಯವಾದಿಗಳ ಪಡೆಯನ್ನೇ ನೇಮಿಸಿ ಕೊಂಡರು. ನ್ಯಾಯಾಲಯವು, 'ಯಾವ ಗಂಡನೂ ತನ್ನ ಹೆಂಡತಿಯ ಮೇಲಾಗುತ್ತಿರುವ ಅತ್ಯಾಚಾರವನ್ನು ನೋಡುತ್ತಾ ಸುಮ್ಮನಿರುವುದಿಲ್ಲ' ಎಂದು ಹೇಳಿ, ಇಲ್ಲಿ ಯಾವ ಅತ್ಯಾಚಾರ ನಡೆದೇ ಇಲ್ಲವೆಂಬಂತೆ ಆರೋಪಿಗಳನ್ನು ಬಿಡುಗಡೆ ಮಾಡಿ ಆದೇಶಿಸಿತು. ಹೀಗೆ ಬಿಡುಗಡೆಯಾದ ಆರೋಪಿಗಳನ್ನು ತೊಡಗಿಸಿಕೊಂಡು ಸ್ಥಳೀಯ ಶಾಸಕನೊಬ್ಬ ಅಂದು ದೊಡ್ಡ ಮೆರವಣಿಗೆಯನ್ನೇ ಆಯೋಜಿಸಿದ. ಇದು ನಾವು ಅತ್ಯಾಚಾರಿಗಳನ್ನು ಶಿಕ್ಷಿಸುವ ಪರಿ! ಕೊನೆಗೆ ಜನಾಕ್ರೋಶ ಹೆಚ್ಚಿದಾಗ ಸರಕಾರವು ಕೆಳ ನ್ಯಾಯಾಲಯದ ಆದೇಶದ ವಿರುದ್ಧ ಅಪೀಲು ಮಾಡಿತು. ತೀರ್ಪು ಬರುವ ಹೊತ್ತಿಗೆ ಆರೋಪಿಗಳ ಪೈಕಿ ಇಬ್ಬರು ಕಾಲವಾಗಿದ್ದರು. ಕೆಲಸದ ಸ್ಥಳಗಳಲ್ಲಿ ಆಗುತ್ತಿರುವ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಯಲು ಸರ್ವೋಚ್ಚ ನ್ಯಾಯಾಲಯವು 1997ರಲ್ಲಿ ಸರಕಾರಕ್ಕೆ Vishaka Guidelines ಹೆಸರಿನ, ಕಾರ್ಯವಿಧಾನದ ಮಾರ್ಗದರ್ಶಿ ಸೂತ್ರಗಳನ್ನು ನೀಡಿತು. ಅದು ಕಾನೂನಾಗಿ ಬಂದಿದ್ದು 2013ರಲ್ಲಿ, ನಮ್ಮ ಸರಕಾರ ಅಲ್ಲಿಯವರೆಗೆ ಮಾಡಿದ್ದು ಕೇವಲ ನೌಟಂಕಿ!

ನಾವೆಲ್ಲ ತಲೆ ತಗ್ಗಿಸುವಂತೆ ಮಾಡಿದ್ದು 2012ರ 'ನಿರ್ಭಯಾ' ಪ್ರಕರಣ, ಅತ್ಯಾಚಾರದ ಆರೋಪಿಗಳಿಗೆ ಶಿಕ್ಷೆಯ ವಿನಾಯಿತಿ ನೀಡಿದ ಇತ್ತೀಚಿನ ಬಿಲ್ಕಿಸ್ ಬಾನು ಪ್ರಕರಣ. ಆಗ ಕೂಡ ನಾವು ಮೋಂಬತ್ತಿ ಬೆಳಗಿಸಿ ಪ್ರತಿಭಟನೆಯ ಘೋಷಣೆಗಳನ್ನು ಕೂಗಿದ್ದೆವು. ಹಾಗೆ ನೋಡಿದರೆ, ದೇಶದ ವಿವಿಧ ನಗರ–ಪಟ್ಟಣ–ಗ್ರಾಮಗಳಲ್ಲಿ ನಡೆವ ಅತ್ಯಾಚಾರ ಪ್ರಕರಣಗಳಲ್ಲಿ ಹೆಚ್ಚಿನವು ಬೆಳಕಿಗೇ ಬರುವುದಿಲ್ಲ ಎನ್ನಬೇಕು. ಅತ್ಯಾಚಾರ ರಹಿತ ಸಮಾಜವು ಇಂದಿಗೂ ನಮ್ಮ ಯೋಗ್ಯತೆಗೆ ದಕ್ಕುತ್ತಿಲ್ಲ. ಅತ್ಯಾಚಾರದ ಸಂತ್ರಸ್ತೆಗೆ ತಕ್ಷಣ ನೀಡುವ Victim Compensation Scheme ಶೀಘ್ರವಾಗಿ ಮರು ಪರಿಶೀಲನೆಗೆ ಒಳಗಾಗುವ ಅವಶ್ಯಕತೆಯಿದೆ. ಸಂತ್ರಸ್ತೆಗೆ ನೀಡಬೇಕಾದ ವೈದ್ಯಕೀಯ ಸೌಲಭ್ಯಗಳು/ಪರೀಕ್ಷೆ, ಆಪ್ತಸಮಾಲೋಚನೆ ಇವುಗಳ ಬಗ್ಗೆ ನಮ್ಮ ಸರಕಾರಗಳು ಸೂಕ್ತ ವ್ಯವಸ್ಥೆ ಮಾಡಬೇಕು. ಮಾದಕ ವಸ್ತುಗಳ ಸಾಗಣೆ/ಮಾರಾಟ, ಮಾನವ ಕಳ್ಳಸಾಗಣೆ, ವೇಶ್ಯಾವಾಟಿಕೆ, Pornography ಮುಂತಾದವುಗಳ ನಿಗ್ರಹಕ್ಕೆ ಕಠಿಣ ಕಾನೂನುಗಳು ಜಾರಿಯಾಗಬೇಕು. ಇಂಥ ಪ್ರಕರಣಗಳ ತನಿಖೆಗಾಗಿ ಅಖಿಲ ಭಾರತ ಮಟ್ಟದಲ್ಲಿ ವಿಶೇಷ ತನಿಖಾದಳವೊಂದನ್ನು ರಚಿಸ ಬೇಕು ಮತ್ತು ತನಿಖೆ, ವಿಚಾರಣೆ ಕೈಗೊಳ್ಳುವ, ಶಿಕ್ಷೆ ಪ್ರಕಟ ಮಾಡುವ ಸಂಪೂರ್ಣ ಅಧಿಕಾರವನ್ನು ಆ ದಳಕ್ಕೆ ನೀಡಬೇಕು. ಅದೊಂದು Quasi Judicial Forum ರೀತಿಯಲ್ಲಿ ವರ್ತಿಸಬೇಕು. ಅದರ ತೀರ್ಪನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮಾತ್ರವೇ ಮರುಪರಿಶೀಲಿಸುವ ಅಧಿಕಾರವನ್ನು ಹೊಂದಿರಬೇಕು. ಹೆಣ್ಣುಮಕ್ಕಳನ್ನು ಅಸಹ್ಯವಾಗಿ ಬಳಸಿಕೊಳ್ಳುವ ಜಾಹೀರಾತುಗಳಿಗೆ ತಡೆ ಬೀಳಬೇಕು. ರಾಜಕೀಯ ಮತ್ತು ಸಾರ್ವಜನಿಕ ಹುದ್ದೆಯಲ್ಲಿರುವವರಿಗೆ Gender Sensitisation Code ಜಾರಿಯಾಗಬೇಕು.

ಅತ್ಯಾಚಾರದ ಸಂತ್ರಸ್ತೆಯನ್ನು ಆಕೆ ವೈದ್ಯೆ, ದಾದಿ, ವಕೀಲೆ ಎಂದು ನೋಡದೆ ಅಥವಾ ಆಯಾ ವೃತ್ತಿಪರರ ಹೋರಾಟವಾಗಿ ಪರಿಗಣಿಸದೆ, ಇವರು ನಮ್ಮಂತೆಯೇ ಮನುಷ್ಯರು ಎಂಬ ಭಾವದೊಂದಿಗೆ ಜನಾಂದೋಲನವಾಗಬೇಕು. ಅತ್ಯಾಚಾರದ ವಿರುದ್ಧದ ಹೋರಾಟಗಳು ಬೇಗ ತಣ್ಣಗಾಗದೆ ಕ್ರಾಂತಿಯ ಜನಾಂದೋಲನಗಳಾಗಿ, ನಮ್ಮ ನಮ್ಮ ಭಾಗದ ಶಾಸಕರು ಮತ್ತು ಸಂಸದರನ್ನು ಪ್ರಶ್ನಿಸುವಂತಾಗಬೇಕು; ಕಾರಣ ಅವರನ್ನು ನಮ್ಮ ಪ್ರತಿನಿಧಿಗಳಾಗಿ ಚುನಾಯಿಸಿ ಕಳಿಸುತ್ತಿರುವುದು ಅಸೆಂಬ್ಲಿ, ಪಾರ್ಲಿಮೆಂಟ್‌ಗೆ ಹೋಗಿ ಹವಾನಿಯಂತ್ರಿತ ಸದನದಲ್ಲಿ ಬೆಚ್ಚಗೆ ಮಲಗಲು ಅಲ್ಲ, ಜನರ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರರೂಪದ ಕ್ರಮಗಳು/ಕಾನೂನುಗಳನ್ನು ರೂಪಿಸಲು. ಇಂದು ನಾವು ಪ್ರಶ್ನಿಸದಿದ್ದರೆ, ಇಂಥ ನೂರಾರು ಅತ್ಯಾಚಾರದ ಹೋರಾಟಗಳು ತಣ್ಣಗಾಗುತ್ತಲೇ ಹೋಗುತ್ತವೆ. ಪ್ರತಿ ಅತ್ಯಾಚಾರದ ಪ್ರಕರಣದ ನಂತರ ಮೊಸಳೆ ಕಣ್ಣೀರನ್ನು ಸುರಿಸುತ್ತಾ, ಒಂದಿಷ್ಟು ಮೇಣದ ಬತ್ತಿಗಳನ್ನು ಬೆಳಗಬೇಕಾಗುತ್ತದೆ. ಇದು ಹೀಗೆಯೇ ಮುಂದುವರಿದರೆ, ನಾಳೆ ನಮ್ಮ ಮನೆಗೂ ತಲುಪಬಹುದು, ಎಚ್ಚರ!

(ಲೇಖಕರು ನ್ಯಾಯವಾದಿಗಳು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪಕ್ಷಪಾತ ಧೋರಣೆ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ನಂತರ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಸಾಕಷ್ಟು ಸದ್ದುಮಾಡುತ್ತಿವೆ. ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ರಾಜ್ಯಪಾಲರ ವಿರುದ್ಧ ಕೀಳು ಅಭಿರುಚಿಯ ಭಾಷಾಪ್ರಯೋಗ ಕೂಡ ನಡೆಯುತ್ತಿದೆ. ಇದು ಸರಿಯಲ್ಲ. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಕೆಲವು ನಾಯಕರ ವಿರುದ್ಧ ಲೋಕಾಯುಕ್ತ ಪೊಲೀಸರು ಹೂಡಿರುವ ಪ್ರಕರಣಗಳಿಗೆ ಸಂಬಂಧಿಸಿದ ಹಾಗೆ, ಅಂಥವರ ವಿರುದ್ಧ ಅಭಿಯೋಜನೆಗೆ ಕೋರಿ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಮನವಿಯನ್ನು ರಾಜ್ಯಪಾಲರು ಪುರಸ್ಕರಿಸಿಲ್ಲ. ಇದರಿಂದಾಗಿ ರಾಜ್ಯಪಾಲರು ಪಕ್ಷಪಾತದ ಧೋರಣೆಯನ್ನು ಅನುಸರಿಸುತ್ತಿದ್ದಾರೆಯೇ ಎಂಬ ಸಂದೇಹ ಉಂಟಾಗುತ್ತದೆ. ಮುಖ್ಯವಾಗಿ ರಾಜ್ಯಪಾಲರು ಪಕ್ಷಾತೀತರಾಗಿರಬೇಕಾಗಿದ್ದು, ಸಂವಿಧಾನದ ಆಶಯಗಳಿಗೆ ಪೂರಕವಾಗಿ ಅವರು ನಡೆದುಕೊಳ್ಳಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಅದು ಆ ಹುದ್ದೆಗೆ ಬಗೆದ ದ್ರೋಹವಾಗುತ್ತದೆ. ಇಲ್ಲಿ ವ್ಯಕ್ತಿ ಮುಖ್ಯವಲ್ಲ, ಅವರು ಅಲಂಕರಿಸಿರುವ ಹುದ್ದೆ ಮುಖ್ಯವಾಗುತ್ತದೆ. ರಾಜ್ಯಪಾಲರು ರಾಷ್ಟ್ರಪತಿಗಳ ಪ್ರತಿನಿಧಿಯಾಗಿ, ಯಾವುದೇ ರಾಗ–ದ್ವೇಷಗಳಿಗೆ ಅವಕಾಶ ಕೊಡದೇ, ಓರ್ವ ನ್ಯಾಯಾಧೀಶನ ಹಾಗೆ ಕರ್ತವ್ಯ ನಿರ್ವಹಿಸ ಬೇಕು.

– ಕೆ.ವಿ.ವಾಸು, ಮೈಸೂರು

ಪ್ರಸಾದೋಪಿ ಭಯಂಕರಃ..

ನಾಡಿನ ಅನೇಕ ದೇಗುಲಗಳು ದೇವರ ದರ್ಶನಕ್ಕೆ ಬಂದ ಭಕ್ತಾದಿಗಳಿಗೆ ಪ್ರಸಾದವನ್ನು ವಿತರಣೆ ಮಾಡುತ್ತವೆ. ಪ್ರಸಾದವನ್ನು ಮನೆಗೆ ಕೊಂಡೊಯ್ಯುವುದು ಭಕ್ತರಲ್ಲಿ ಒಂದು ರೀತಿಯ ಧನ್ಯತಾ ಭಾವವನ್ನು ಉಂಟು ಮಾಡುತ್ತದೆ. ಈ ಪ್ರಸಾದಗಳು ಹೆಚ್ಚಾಗಿ ಪ್ಲಾಸ್ಟಿಕ್ ಕವರ್‌ಗಳಲ್ಲಿ ಇರುತ್ತವೆ. ಬಹುತೇಕ ದೇಗುಲಗಳಲ್ಲಿ ಪ್ರಸಾದದ ಕವರ್‌ಗೆ ಸ್ಟೇಪಲ್ ಪಿನ್ ಅನ್ನು ಹೊಡೆದಿರುತ್ತಾರೆ. ಈ ಪಿನ್ನುಗಳು ತೀರಾ ಚಿಕ್ಕ ಗಾತ್ರದವು. ಕಣ್ಣು ಮುಚ್ಚಿ ಭಕ್ತಿಯಿಂದ ಪ್ರಸಾದ ಸ್ವೀಕರಿಸುವ ಭಕ್ತರು ಸ್ವಲ್ಪ ಯಾಮಾರಿದರೂ, ಈ ಲೋಹದ ಪಿನ್ನುಗಳು ಅವರ ಉದರ ಪ್ರವೇಶಿಸುವುದು ಖಾತರಿ. ಅದರಿಂದ ಮುಂದಾಗುವ ಪರಿಣಾಮಗಳನ್ನು ಊಹಿಸಲೂ ಸಾಧ್ಯವಿಲ್ಲ. ಇಂಥ ದೇಗುಲಗಳ ಸಾಲಿನಲ್ಲಿ ಉಡುಪಿಯ ಶ್ರೀಕೃಷ್ಣ ಮಠವೂ ಸೇರಿದೆ. ಅದು ಜನಪ್ರಿಯ 'ಪಂಚಕಜ್ಜಾಯ' ಮತ್ತು 'ಅರಳು ಲಡ್ಡಿಗೆ' ಪ್ರಸಾದವನ್ನು ಸ್ಟೇಪಲ್ ಪಿನ್ ಹೊಡೆದ ಕವರ್‌ನಲ್ಲಿಟ್ಟು ನೀಡುತ್ತಿದೆ. ಪುತ್ತಿಗೆ ಶ್ರೀಗಳು ತಮ್ಮ ವಿಶಿಷ್ಟ 'ವಿಶ್ವ ಗೀತಾ' ಪರ್ಯಾಯವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ಇಡೀ ವಿಶ್ವವನ್ನೇ ಸುತ್ತಿಬಂದು ಸರ್ವಜ್ಞ ಪೀಠವನ್ನು ಏರಿ ಕುಳಿತಿದ್ದಾರೆ. ಸ್ಟೇಪಲ್ ಪಿನ್‌ಗೆ 'ಪರ್ಯಾಯ'ಮಾರ್ಗ ಇಲ್ಲ ಎಂದು 'ಪರ್ಯಾಯ' ಪುತ್ತಿಗೆ ಮಠದ ಸಿಬ್ಬಂದಿ ಭಾವಿಸಿದಂತಿದೆ. ತಂತ್ರಜ್ಞಾನ ಮುಂದುವರಿದಿರುವ ಈ ಕಾಲದಲ್ಲಿ ಬದಲಿ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ. ಪ್ರಸಾದ ಸ್ವೀಕರಿಸುವ ಭಕ್ತರ ಹಿತವನ್ನು ಕಾಯುವ ನಿಟ್ಟಿನಲ್ಲಿ ಮಠದ ಪರಿವಾರ ವರ್ಗದವರು ಮುನ್ನಡೆದು ಸ್ಟೇಪಲ್ ಪಿನ್‌ಗೆ ಮುಕ್ತಿ ಕೊಡಲಿ.

– ರಾಘುರಾಯ, ಮೈಸೂರು

ಅಲ್ಲೂ ರಾಜಾತಿಥ್ಯವೇ?

ರೇಣುಕಾಸ್ವಾಮಿಯ ಅಮಾನವೀಯ ಕೊಲೆ ಪ್ರಕರಣದ ಆರೋಪಿಗಳಲ್ಲಿ ಒಬ್ಬರೆನಿಸಿಕೊಂಡಿರುವ ಚಿತ್ರನಟ ದರ್ಶನ್‌ಗೆ ಯಾವಾಗ ತಕ್ಕ ಶಿಕ್ಷೆ ನೀಡಲಾಗುತ್ತದೆ ಎಂದು ಜನರು ಮೈತುಂಬಾ ಕಣ್ಣು–ಕಿವಿ ಮಾಡಿಕೊಂಡು ನಿರೀಕ್ಷೆಯಲ್ಲಿರುವಾಗ, ದರ್ಶನ್‌ಗೆ ಕಾರಾಗೃಹದಲ್ಲಿ ರಾಜಾತಿಥ್ಯ ಸಿಗುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ನಿಜದರ್ಶನವೂ ಹೌದು, ಅಚ್ಚರಿಯ ಸಂಗತಿಯೂ ಹೌದು. ಈ ವಿಷಯದಲ್ಲಿ ಸಂಬಂಧಪಟ್ಟವರು ಕೇವಲ ಕಣ್ಣೊರೆಸುವ ತನಿಖೆ ಮಾಡಿ ಕೈತೊಳೆದುಕೊಳ್ಳಬಾರದು; ಸಂಬಂಧಿತ ಖಾತೆಯ ಸಚಿವರು ಕೂಡ ಈ ಬೆಳವಣಿಗೆಗೆ ಹೊಣೆಯಾಗಬೇಕು. ಪ್ರಭಾವಿ ಅಪರಾಧಿಗಳು/ಆರೋಪಿಗಳು ಕಾರಾಗೃಹದಲ್ಲಿ ತಾವು ಬಯಸಿದ ಆತಿಥ್ಯವನ್ನು ಪಡೆಯುತ್ತಾರೆ ಎಂಬ ಆಪಾದನೆಗೆ ಇದೊಂದು ಪುರಾವೆ. ಅಷ್ಟೇ ಅಲ್ಲ, ಮಗ್‌ನಲ್ಲಿ ಬರೀ ಕಾಫಿ–ಚಹಾ ಕುಡಿಯಬೇಕೆಂದೇನೂ ಇಲ್ಲ, ನಮ್ಮ ರಾಜ್ಯದ ಜನಪ್ರಿಯ ರಾಜಕಾರಣಿಯೊಬ್ಬರು ಬೆಳಗ್ಗೆ ಎದ್ದ ಕೂಡಲೇ ಬೆಳ್ಳಿ ಲೋಟದಲ್ಲಿ ಮದ್ಯಪಾನ ಮಾಡುತ್ತಿದ್ದ ಸುದ್ದಿ ಈ ಹಿಂದೆ ಚಾಲ್ತಿಯಲ್ಲಿತ್ತು (ನೋಡುವವರು ಅದನ್ನು ಬೆಡ್ ಕಾಫಿಯೆಂದು ಭಾವಿಸುವಂತೆ!). ಹಾಗಾಗಿ ಮಗ್‌ನಲ್ಲಿ ಮತ್ತು ಸಿಗರೇಟಿನಲ್ಲಿ ವಾಡಿಕೆಗಿಂತ ಮಿಗಿಲಾದ ಬೇರಾವ ಪದಾರ್ಥವೂ ಇರಬಹುದು! ಅಲ್ಲದೆ ಇದು ಕಾರಾಗೃಹದ ಹೊರಾಂಗಣ ಚಿತ್ರ; ಇನ್ನು ಒಳಾಂಗಣ ಚಿತ್ರ'ದರ್ಶನ' ಹೇಗಿರಬಹುದು ಎಂಬುದು ಊಹೆಗೂ ನಿಲುಕದ್ದು.

– ಬೆಳ್ಳಿ ಚಂದ್ರಶೇಖರ ಶೆಟ್ಟಿ, ಬೆಂಗಳೂರು

ದಂಡ ವಸೂಲಿಯಾಗಲಿ

ಬಿಎಂಟಿಸಿ ಬಸ್ಸುಗಳು ಹಾಗೂ ಮೆಟ್ರೋ ರೈಲುಗಳು ಬೆಂಗಳೂರು ಮಹಾನಗರಿಯ ಜೀವನಾಡಿಗಳಾಗಿವೆ. ಹಿರಿಯ ನಾಗರಿಕರಿಗೆ ದೈಹಿಕ ದೌರ್ಬಲ್ಯವಿರುವ ಸಂಭವ ಜಾಸ್ತಿ ಎಂಬ ಕಾರಣಕ್ಕೆ ಅವರಿಗೆಂದು ಈ ಬಸ್ಸು–ರೈಲುಗಳಲ್ಲಿ ಆಸನಗಳನ್ನು ಮೀಸಲಿಡುವ ವ್ಯವಸ್ಥೆಯಿದೆ. ಬೇಸರದ ಸಂಗತಿಯೆಂದರೆ, ಮೀಸಲಿಟ್ಟ ಆಸನಗಳೇ ಬಹಳ ಕಡಿಮೆ, ಅದರಲ್ಲೂ ತರುಣ–ತರುಣಿಯರು ಕುಳಿತಿರುತ್ತಾರೆ. ಹಾಗೆ ಕುಳಿತಿದ್ದರೂ, ಹಿರಿಯರು ಬಂದ ಕೂಡಲೇ ತಾವಾಗಿಯೇ ಆಸನವನ್ನು ಬಿಟ್ಟುಕೊಡಬೇಕು ಅಥವಾ ಅವರು ಏಳುವಂತೆ ಹೇಳಿದಾಗ ಗೊಣಗದೇ, ಏನಾದರೂ ಪ್ರಶ್ನೆಗಳನ್ನು ಕೇಳದೆ ಎದ್ದುಬಿಡಬೇಕು ಎಂಬುದು ಇವರಿಗೆ ಅರಿವಾಗುವುದಿಲ್ಲವೇಕೆ? ಇಂಥ ಸೌಜನ್ಯವನ್ನು ಇವರು ಕಲಿಯುವುದು ಯಾವಾಗ? ತಮಗಾಗಿ ಮೀಸಲಿಟ್ಟ ಆಸನಗಳಲ್ಲಿ ಕುಳಿತವರನ್ನು ಹೇಗೆ ಎಬ್ಬಿಸುವುದು ಎಂದು ಮುಜುಗರ ಪಟ್ಟುಕೊಂಡು ಕೆಲವು ವಯೋವೃದ್ಧರು ದೂರದ ಸ್ಥಳಗಳಿಗೆ ನಿಂತುಕೊಂಡೇ ಪ್ರಯಾಣ ಮಾಡುವುದು ಸಾಮಾನ್ಯವಾಗಿದೆ. ಈ ಸಮಸ್ಯೆಗೆ ಪರಿಹಾರೋಪಾಯವೆಂದರೆ, ವಯೋವೃದ್ಧರಿಗೆಂದು ಹೆಚ್ಚಿನ ಸಂಖ್ಯೆಯ ಆಸನಗಳನ್ನು ಮೀಸಲಿಡುವುದು ಹಾಗೂ ಅವುಗಳಲ್ಲಿ ಬೇರೆಯವರು ಬಂದು ಕುಳಿತರೆ ಅಂಥವರಿಂದ ಒಂದು ಸಾವಿರ ರುಪಾಯಿ ದಂಡವನ್ನು ಮುಲಾಜಿಲ್ಲದೆ ವಸೂಲಿ ಮಾಡುವುದು.

– ಬಿ.ಎನ್.ಭರತ್, ಬೆಂಗಳೂರು

ಸ್ವಾಗತಾರ್ಹ ಕ್ರಮ

ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು, ಗಣೇಶ ಹಬ್ಬದ ಆಚರಣೆಗೆ ಸಂಬಂಧಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಏಕಗವಾಕ್ಷಿ ಪದ್ಧತಿಯಲ್ಲಿ ಅನುಮತಿ ಪತ್ರವನ್ನು ನೀಡಲಾಗುವುದು ಎಂದಿದ್ದಾರೆ. ಇದೊಂದು ಸ್ವಾಗತಾರ್ಹ ಕ್ರಮ. ಇನ್ನು ಸಾರ್ವಜನಿಕರಾದ ನಾವು ನಮ್ಮ ಕರ್ತವ್ಯವನ್ನು ನಿಭಾಯಿಸುವುದೊಂದೇ ಬಾಕಿ. ವ್ಯಾಪಾರಿಗಳು ಕೇವಲ ಜೇಡಿ ಮಣ್ಣಿನ ಗೌರಿ–ಗಣೇಶ ಮೂರ್ತಿಗಳನ್ನು ಮಾರಲು ಮುಂದಾದರೆ ಸಾರ್ವಜನಿಕರೂ ಬದಲಾಗೇ ಆಗುತ್ತಾರೆ. ಈ ಬೆಳವಣಿಗೆಯು ಕುಂಬಾರರಿಗೂ ಸಹಾಯಹಸ್ತ ಚಾಚುತ್ತದೆ. ಪಿಒಪಿ ಮೂರ್ತಿಗಳಿಗೆ ತಿಲಾಂಜಲಿ ನೀಡುವುದರಿಂದ ಪರಿಸರ ಮಾಲಿನ್ಯವೂ ತಪ್ಪುತ್ತದೆ.

– ಮಹೇಶ್ ಹೊಸಮನಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ರಾಹುಲ್ ಗಾಂಧಿ ಇನ್ನೂ ಯಾಕೆ ಮದುವೆಯಾಗಿಲ್ಲ?
– ದಲಿತ ಹುಡುಗಿ ಮಿಸ್ ಇಂಡಿಯಾ ಆಗುವ ತನಕ ಕಾಯುತ್ತಿರಬಹುದಾ?!

● ಸಂದೀಪ ನಾಯಕ, ಬೆಂಗಳೂರು
ಭಟ್ರೇ, ಬೆಂಗಳೂರಿನಲ್ಲಿ ಸುರಕ್ಷಿತ ಜಾಗ ಅಂದ್ರೆ ಯಾವುದು?
– ಪರಪ್ಪನ ಅಗ್ರಹಾರ ಜೈಲು!

● ರಾಮು ಮಲ್ಲಿಕಟ್ಟೆ, (ಇಮೇಲ್ ಮೂಲಕ)
ಭಟ್ರೇ, ದರ್ಶನ್ ಹೊಸ ವರಸೆ ಏನು?
– ಮನೆಯಾಕೆ ಬೇಡ, ಆದ್ರೆ ಮನೆಯೂಟ ಬೇಕು!

● ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, ಮಂಗನಿಂದ ಮಾನವನಾಗಲು ಸಾವಿರಾರು ವರ್ಷಗಳಾದರೆ, ಮಾನವ ಮಂಗನಾಗಲು?
– ಮೊಬೈಲ್‌ನಲ್ಲಿ ಸೆಲ್ಫಿ ಕೊಟ್ಟಾಗಲೇ ಗೊತ್ತಾಗಲಿಲ್ಲವಾ?!

● ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ನನ್ನ ಹೆಂಡತಿಯನ್ನು ಚಂದ್ರಮುಖಿ ಎಂದು ಕರೆಯಬಹುದಾ?
– ಚಂದ್ರನ ಮೇಲಿನ ಚಿತ್ರವನ್ನು ನೋಡಿದರೆ, ಅದು ವರ್ಣನೆ ಅಲ್ಲ, ಬೈಗುಳ ಅಂದುಕೊಳ್ಳಬಹುದು!

● ಉಜ್ಜಿನಿ ಜಲೇಂದ್ರ, ಮಲ್ಲುಂಗೆರೆ
ಭಟ್ರೇ, ಕಣ್ಣಿನ ನೋಟಕ್ಕೂ, ಕಳ್ಳನೋಟಕ್ಕೂ ಏನು ವ್ಯತ್ಯಾಸ?
– ಎಲ್ಲ ಕಳ್ಳನೋಟಗಳೂ, ಕಣ್ಣ ನೋಟಗಳೇ. ಆದರೆ ಎಲ್ಲ ಕಣ್ಣ ನೋಟ, ಕಳ್ಳ ನೋಟಗಳಲ್ಲ!

● ಎಲ್.ವಿ.ಸತೀಶ್, ಮೈಸೂರು
ಭಟ್ರೇ, ತುಂಬಾ ಒಳ್ಳೆಯವರು ಅಂದ್ರೆ ಯಾರು?
– ನೀನು ಯಾರಿಗೆ ಈ ಪ್ರಶ್ನೆ ಕೇಳಿದ್ದೀಯಾ ಎಂಬುದನ್ನು ಯೋಚಿಸು!

● ಡಾ.ಆನಂದ ಕುಲಿಗೋಡ, ಧಾರವಾಡ
ಭಟ್ರೇ, ನಿಮ್ಮ ನೂರನೇ ಕೃತಿಯನ್ನು ನಿಮ್ಮ ಮಾಜಿ ಪ್ರೇಯಸಿಗೆ ಅರ್ಪಿಸುತ್ತೀರಂತೆ, ಹೌದಾ?
– ಒಬ್ಬಳಿಗೆ ಅರ್ಪಿಸಿದರೆ ಉಳಿದವರು ಬೇಸರಿಸಿಕೊಳ್ಳುವುದಿಲ್ಲವೇ?!

● ಮಹಾನಂದ ಪಾಟೀಲ, (ಇಮೇಲ್ ಮೂಲಕ)
ಭಟ್ರೇ, ಮುಂದಿನ ಐದೂ ವರ್ಷ ಸಿದ್ದರಾಮಯ್ಯನವರೇ ಸಿಎಂ ಎಂದು ಡಿಕೆಶಿ ಹೇಳಿದ್ದಾರಲ್ಲ?
– ಬಾಯ್ತಪ್ಪಿ ಹಾಗೆ ಹೇಳಿದ್ದು ಅಂತ ನಂತರ ಹೇಳಲಿಕ್ಕಿಲ್ಲ ತಾನೇ?!

● ರಾಜೇಶ್ವರಿ ಶರ್ಮ, ಹೊನ್ನಾವರ
ಭಟ್ರೇ, ಮುಖ್ಯಮಂತ್ರಿಗಳ ಪತ್ನಿ ಪಾರ್ವತಿಯವರನ್ನು ನೋಡುವ ಆಸೆ, ಏನು ಮಾಡಲಿ?
– ಟಿವಿ ಚಾನೆಲ್ಲುಗಳಿಗೇ ಇನ್ನೂ ಸಿಕ್ಕಿಲ್ಲ, ನಿಮಗೆ ಹೇಗೆ ಸಿಗ್ತಾರೆ?!

● ಚಿದಾನಂದ ಹೆಗಡೆ, ಶಿರಸಿ
ಭಟ್ರೇ, ಗರ್ಲ್ ಫ್ರೆಂಡಿಗೆ ಮೊಬೈಲ್ ಉಡುಗೊರೆ ಕೊಡಬಹುದಾ?
– ನೋಕಿಯಾ ಬೇಸಿಕ್ ಸೆಟ್ ಕೊಡು ಅಂತ ಭಟ್ಟರು ಹೇಳಿದ್ದಾರೆಂದು ಹೇಳಬೇಡ!

ಉತ್ತರ ಕೊರಿಯಾ ಸಮಸ್ಯೆಗಳಿಗೆ ಉತ್ತರವೇನು?

ಉತ್ತರ ಕೊರಿಯಾದ ಹಣದ ವಹಿವಾಟನ್ನು ನಿಯಂತ್ರಿಸುವುದು 'ಆಫೀಸ್ 39' ವ್ಯವಸ್ಥೆ. ಹಣಕಾಸು ಖಾತೆಯಾಗಲೀ ಮಂತ್ರಿಯಾಗಲೀ ಈ ವ್ಯವಹಾರದ ಬಗ್ಗೆ ಉಸಿರೆತ್ತುವುದಿಲ್ಲ. ಹಣಕಾಸು ಮಂತ್ರಾಲಯದಲ್ಲಿ ನೇರವಾಗಿ ಬರುವ ಹಣದ ಮೇಲಷ್ಟೇ ಅದಕ್ಕೆ ಅಧಿಕಾರ. ಉಳಿದ ಹಣ ಸರ್ವಾಧಿಕಾರಿ ಕಿಮ್ ಮನೆಯನ್ನು ಸೇರುತ್ತದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಅದು 1953ರ ಸಮಯ. ಅಮೆರಿಕ, ಉತ್ತರ ಕೊರಿಯಾದ ಮೇಲೆ ಅಣು ಬಾಂಬ್ ದಾಳಿ ಮಾಡುವ ಬೆದರಿಕೆ ಒಡ್ಡುತ್ತದೆ. ಹೀಗೆ ಬೆದರಿಕೆ ಹಾಕಿದಾಗ ಉತ್ತರ ಕೊರಿಯಾ ನಡುಗಿಹೋಗುತ್ತದೆ. ಅದಕ್ಕೆ ಕಾರಣವನ್ನು ಬಿಡಿಸಿ ಹೇಳಬೇಕಾದ ಅವಶ್ಯಕತೆ ಇಲ್ಲ ಎಂದುಕೊಳ್ಳುವೆ. 1945ರಲ್ಲೇ ಜಪಾನ್ ಮೇಲೆ ಅಣು ಬಾಂಬ್ ದಾಳಿ ಮಾಡಿದ್ದ ಅಮೆರಿಕ, ನಮ್ಮ ಮೇಲೆ ಕೂಡ ಈ ರೀತಿ ದಾಳಿ ಮಾಡಬಹುದು ಎಂಬ ಒಂದಂಶ ಉತ್ತರ ಕೊರಿಯಾದ ಅಧ್ಯಕ್ಷರಾದ ಕಿಮ್ ಸಂಗ್-2 ಅವರ ಮನಸ್ಸಿನಲ್ಲಿ ಹಾದುಹೋಯಿತು. ಅಂದು ಅವರು ತಮ್ಮ 'ವರ್ಕಿಂಗ್ ಪಾರ್ಟಿ ಆಫ್ ಕೊರಿಯಾ' (ಡಬ್ಲ್ಯುಪಿಕೆ) ಮೀಟಿಂಗ್‌ನಲ್ಲಿ ಉತ್ತರ ಕೊರಿಯಾವನ್ನು ಅಣುಶಕ್ತಿ ರಾಷ್ಟ್ರವನ್ನಾಗಿ ಮಾಡುವ ಪ್ರಸ್ತಾಪವನ್ನ ಮುಂದಿಡುತ್ತಾರೆ. ಅಮೆರಿಕ ತನ್ನ ಅಸ್ತಿತ್ವವಿರುವವರೆಗೂ ಉತ್ತರ ಕೊರಿಯಾ ಕಡೆಗೆ ಕಣ್ಣೆತ್ತಿ ನೋಡಬಾರದು ಎಂದು ಅವರು ಪಾರ್ಟಿ ಮೀಟಿಂಗ್‌ನಲ್ಲಿ ಹೇಳಿದ್ದರಂತೆ. ಅಣುಬಾಂಬ್ ಸಿಡಿತಲೆಯನ್ನು ಹೊತ್ತು ಅಮೆರಿಕದ ಪ್ರಮುಖ ನಗರಗಳ ಮೇಲೆ ಹಾರಬಲ್ಲ ಕ್ಷಿಪಣಿಗಳು ಇಂದು ಉತ್ತರ ಕೊರಿಯಾದ ಬಳಿ ಇವೆ.

ಉತ್ತರ ಕೊರಿಯಾ ಬೆಳೆದ ರೀತಿ ಇದೆಯಲ್ಲಾ ಅದು ಎಂಥವರನ್ನೂ ಅಚ್ಚರಿಯ ಕೂಪಕ್ಕೆ ದೂಡುತ್ತದೆ. ಇಡೀ ಜಗತ್ತಿನಿಂದ ಬಹಿಷ್ಕಾರ ಹಾಕಿಸಿಕೊಂಡ ಈ ಪುಟ್ಟರಾಷ್ಟ್ರ ಇಂದು ಅಣುಶಕ್ತಿಯ ರಾಷ್ಟ್ರವಾಗಿದೆ. ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, ಉತ್ತರ ಕೊರಿಯಾದ ಇಕಾನಮಿ ಕಳೆದ 17 ವರ್ಷಕ್ಕಿಂತ ಹೆಚ್ಚಿನ ವೇಗದಲ್ಲಿ ಬೆಳವಣಿಗೆ ಕಂಡಿದೆ, ಅಲ್ಲಿನ ಜಿಡಿಪಿ ಮತ್ತು ಜನರ ಖರೀದಿ ಸಾಮರ್ಥ್ಯ ಹೆಚ್ಚಿವೆ. 'ಹೌದಾ?' ಎನ್ನುವ ಪ್ರಶ್ನೆ ಈಗ ನಿಮ್ಮದು. ಅಮೆರಿಕ ಬಹಿಷ್ಕಾರ ಸಡಿಲಿಸಿತಾ? ಎಂಬ ಇನ್ನೊಂದು ಪ್ರಶ್ನೆಯೂ ನಿಮ್ಮಿಂದ ಬರಬಹುದು. ಉತ್ತರ ಕೊರಿಯಾದ ಇಕಾನಮಿ ಅಭಿವೃದ್ಧಿ ಕಾಣುತ್ತಿರುವುದು ಸತ್ಯ, ಅಮೆರಿಕವು 'ಸ್ಯಾಂಕ್ಷನ್' ಅನ್ನು ಸಡಿಲಿಸದೆ ಇರುವುದು ಕೂಡ ಸತ್ಯ. ಹಾಗಾದರೆ ಅಲ್ಲಿನ ಜನರ ಬವಣೆಗಳು ಕಡಿಮೆಯಾದವೇ? ಉತ್ತರ ಕೊರಿಯಾ ಹಣವನ್ನ ಹೇಗೆ ಸಂಪಾದಿಸುತ್ತದೆ? ಜಗತ್ತಿನಿಂದ ಬಹಿಷ್ಕಾರ ಹಾಕಿಸಿಕೊಂಡ ಪುಟ್ಟದೇಶವೊಂದು ಏನು ಮಾಡಬಹುದೋ ಅದನ್ನೇ ಉತ್ತರ ಕೊರಿಯಾ ಮಾಡುತ್ತಿದೆ. ಅದನ್ನು ಆಳುತ್ತಿರುವವರಿಗೆ ಸರಿ-ತಪ್ಪುಗಳ ಗೆರೆಯನ್ನು ಹಾಕುವ ಚಿಂತೆಯಿಲ್ಲ. ಅವರದೇನಿದ್ದರೂ ದೇಶವನ್ನು ನಡೆಸಲು ದುಡ್ಡು ಸಂಪಾದಿಸುವುದು.

ಗಣಿಗಾರಿಕೆ ಮತ್ತು ಕಲ್ಲಿದ್ದಲು

ಉತ್ತರ ಕೊರಿಯಾ ದೇಶ ಕಲ್ಲಿದ್ದಲನ್ನ ಮಾರಿ ಹಣ ಸಂಪಾದಿಸುತ್ತದೆ. ಉತ್ತರ ಕೊರಿಯಾದ ಅತ್ಯಂತ ದೊಡ್ಡ ಟ್ರೇಡ್ ಪಾರ್ಟ್ನರ್ ಚೀನಾ. ಹಲವು ಖರೀದಿಗಳು ಪುಸ್ತಕದಲ್ಲಿ ದಾಖಲಾಗುವುದಿಲ್ಲ. ಆದರೇನು, ಉತ್ತರ ಕೊರಿಯಾ ದೇಶದ ಬಂಡಿ ಸಾಗಲು ಬೇಕಾಗುವ ಹಣವನ್ನು ಚೀನಾ ಸುರಿಯುತ್ತದೆ. ಚೀನಾ ದೇಶದಲ್ಲಿ ಕೂಡ ಹೆಚ್ಚು ಕಡಿಮೆ ಉತ್ತರ ಕೊರಿಯಾದ ರೀತಿಯಲ್ಲೇ ಆಡಳಿತ ನಡೆಯುವುದರಿಂದ, ಅಮೆರಿಕ ಎಷ್ಟೇ ಬಹಿಷ್ಕಾರ ಎಂದರೂ ಚೀನಾ ತಲೆಯಾಡಿಸಿ, ಇತ್ತ ತನ್ನಿಚ್ಛೆಗೆ ಬಂದದ್ದನ್ನು ಮಾಡುತ್ತಾ ಹೋಗುತ್ತದೆ.

ನಕಲಿ ಹಣದ ಮುದ್ರಣ

ಉತ್ತರ ಕೊರಿಯಾ ದೇಶದಲ್ಲಿನ ಕಪ್ಪು ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿರುವುದು ಅಮೆರಿಕದ ಡಾಲರ್! ಇದನ್ನು ನಂಬಲು ಅಸಾಧ್ಯ ಎನಿಸುತ್ತದೆ, ಆದರೆ ಇದು ಸತ್ಯ. ಇಲ್ಲಿನ ಸಾಮಾನ್ಯ ಪ್ರಜೆ ತನ್ನ ದೈನಂದಿನ ವ್ಯವಹಾರಕ್ಕೆ ಬಳಸುವುದು ಡಾಲರ್ ಅನ್ನು. ಅಮೆರಿಕನ್ ನಕಲಿ ಡಾಲರ್ ಅನ್ನು ಮುದ್ರಿಸಿ ಅಮೆರಿಕ ದೇಶದಲ್ಲಿ ಚಲಾವಣೆಗೆ ಬಿಡುವ ಒಂದು ಸಂಘಟಿತ ಕಚೇರಿಯನ್ನ ಉತ್ತರ ಕೊರಿಯಾ ಹೊಂದಿದೆ. ಇಷ್ಟೇಕೆ, ತನ್ನ ದೊಡ್ಡ ಟ್ರೇಡ್ ಪಾರ್ಟ್ನರ್ ಚೀನಾ ದೇಶದ ಕರೆನ್ಸಿಯನ್ನ ಕೂಡ ನಕಲು ಮಾಡುವುದರಲ್ಲಿ ಉತ್ತರ ಕೊರಿಯಾ ಸಿದ್ಧಹಸ್ತ.

ಸೈಬರ್ ಕ್ರೈಮ್

ಬಾಂಗ್ಲಾದೇಶದ ಸೆಂಟ್ರಲ್ ಬ್ಯಾಂಕ್‌ನಿಂದ 81 ಮಿಲಿಯನ್ ಅಮೆರಿಕನ್ ಡಾಲರ್ ಹಣ ನಾಪತ್ತೆಯಾಗಿದ್ದು ಇಂದಿಗೆ ಇತಿಹಾಸ. ಇದನ್ನ ಮಾಡಿದವರು ಉತ್ತರ ಕೊರಿಯಾದ ಹ್ಯಾಕರ್ಸ್ ಎನ್ನುವುದು ಇಂದಿಗೆ ಎಲ್ಲರಿಗೂ ತಿಳಿದಿರುವ ಸತ್ಯ. ಹೀಗೇ ಸೋನಿ ಕಂಪನಿಯ ಮೇಲೂ ದಾಳಿ ನಡೆದಿತ್ತು. ಉತ್ತರ ಕೊರಿಯಾದ ಹ್ಯಾಕರ್‌ಗಳು ವ್ಯವಸ್ಥೆಯಲ್ಲಿನ ಲೋಪದೋಷಗಳ ಮೇಲೆ ಸದಾ ಹದ್ದಿನ ಕಣ್ಣಿಟ್ಟಿರುತ್ತಾರೆ. ಮುಂದಿನ ಬೇಟೆಗೆ ಅವರು ಸದಾ ಸಿದ್ಧರು. ಇತ್ತೀಚೆಗೆ ಅತಿಹೆಚ್ಚು ಸದ್ದುಮಾಡುತ್ತಿರುವ ಬಿಟ್ ಕಾಯಿನ್ ಮೇಲೆ ಇವರ ಕಣ್ಣು ಬಿದ್ದಿದೆ ಎನ್ನುವ ಸುದ್ದಿ ಕೂಡ ವಿತ್ತ ಜಗತ್ತಿನಲ್ಲಿ ಹರಿದಾಡುತ್ತಿದೆ.

ಜನರ ವಿಲೇವಾರಿ

ನಿಮ್ಮಲ್ಲಿ ಆಶ್ಚರ್ಯ ಹುಟ್ಟಿಸುವ ಇನ್ನೂ ಅನೇಕ ವಿಷಯಗಳಿವೆ. ಆಫ್ರಿಕಾ ಖಂಡದ ಹಲವು ದೇಶಗಳ ಮಿಲಿಟರಿಗೆ ಮತ್ತು ಪ್ರೆಸಿಡೆಂಟ್‌ಗಳ ಅಂಗರಕ್ಷಕರಿಗೆ ಮಾರ್ಷಲ್ ಆರ್ಟ್ ಕಲಿಸುವುದು ಇದೇ ಉತ್ತರ ಕೊರಿಯಾ. ಇವುಗಳಲ್ಲಿ ಅಂಗೋಲ ಪ್ರಮುಖವಾದುದು. ಅಂತೆಯೇ ಚೀನಾ ದೇಶದಲ್ಲಿ ಕೆಲಸ ಮಾಡುತ್ತಿರುವ ಉತ್ತರ ಕೊರಿಯಾದ ಕೆಲಸಗಾರರ ಸಂಖ್ಯೆಯೂ ಬಹಳವಿದೆ. ಉತ್ತರ ಕೊರಿಯಾ ಸರಕಾರ ತನ್ನ ಪ್ರಜೆಗಳಿಂದ ಗುಲಾಮರಂತೆ ಕೆಲಸ ಮಾಡಿಸಲು ವರ್ಷಕ್ಕೆ ಇಷ್ಟು ಹಣ ಎನ್ನುವ ಆಧಾರದ ಮೇಲೆ ಅವರನ್ನು ಗುತ್ತಿಗೆಗೆ ನೀಡುತ್ತದೆ. ಚೀನಾ ಮಾತ್ರವಲ್ಲದೆ 'ರಿಪಬ್ಲಿಕ್ ಆಫ್ ಕಾಂಗೋ' ಎನ್ನುವ ದೇಶದಲ್ಲೂ ಉತ್ತರ ಕೊರಿಯಾದ ಪ್ರಜೆಗಳು ಕೆಲಸಗಾರರಾಗಿ ದುಡಿಯುತ್ತಿದ್ದಾರೆ. ಕುವೈತ್ ದೇಶದ ಕಟ್ಟಡ ಕಾಮಗಾರಿ ಕೆಲಸಕ್ಕೆ ಕೆಲಸಗಾರರ ವ್ಯವಸ್ಥೆಯನ್ನ ಕೂಡ ಉತ್ತರ ಕೊರಿಯಾ ಮಾಡಿದೆ. ಓಮನ್, ಕತಾರ್ ದೇಶಗಳು ಕೂಡ ಕೆಲಸಕ್ಕೆಂದು ಉತ್ತರ ಕೊರಿಯಾದಿಂದ ಜನರನ್ನ ಆಮದು ಮಾಡಿಕೊಂಡಿವೆ. ಇದಕ್ಕೆ ಪ್ರತಿಯಾಗಿ ಉತ್ತರ ಕೊರಿಯಾಕ್ಕೆ ದೊಡ್ಡ ಗಂಟು ಸಂದಾಯವಾಗುತ್ತದೆ.

ಗಮನಿಸಿ, ಹೆಚ್ಚಿನ ವಿದ್ಯಾಭ್ಯಾಸ ಮಾಡಿದ ತನ್ನ ಜನರನ್ನ ಉತ್ತರ ಕೊರಿಯಾ ಬೇರೆ ದೇಶಗಳಿಗೆ ಕೆಲಸಕ್ಕೆಂದು ಗುತ್ತಿಗೆ ಆಧಾರದ ಮೇಲೆ ಕಳಿಸುತ್ತದೆ. ಅವರು ಮಾತನಾಡುವುದು, ಪ್ರವಾಸ ಹೋಗುವುದು ಎಲ್ಲವೂ ಬಹಳವಾಗಿ ನಿಯಂತ್ರಣದಲ್ಲಿರುತ್ತದೆ. ಹೀಗೆ ಹೊರದೇಶದಲ್ಲಿ ಕೆಲಸ ಮಾಡುವವರ ಹಣ ಸಂಗ್ರಹಣೆ ಕೆಲಸವನ್ನ 'ವರ್ಕಿಂಗ್ ಪಾರ್ಟಿ ಆಫ್ ಕೊರಿಯಾ'ದ 'ಆಫೀಸ್ 39' ಮಾಡುತ್ತದೆ. ಹೀಗೆ ಹೊರದೇಶಗಳಿಗೆ ಕೆಲಸಕ್ಕೆ ಕಳಿಸಿದ ತನ್ನ ಎಲ್ಲಾ ತರಹದ ಜನರಿಂದ ಅದು ಗಳಿಸುವ ಆದಾಯ ವರ್ಷಕ್ಕೆ ಒಂದು ಬಿಲಿಯನ್ ಡಾಲರ್ ಎನ್ನುತ್ತದೆ ಒಂದು ಅಂಕಿ-ಅಂಶ.

ಶಸ್ತ್ರಾಸ್ತ್ರ ಮಾರಾಟ

ಹಲವು ಆಫ್ರಿಕನ್ ದೇಶಗಳು ಉತ್ತರ ಕೊರಿಯಾದಿಂದ ಮದ್ದು-ಗುಂಡುಗಳನ್ನು ಖರೀದಿ ಮಾಡುತ್ತಿವೆ. ಹೊರಜಗತ್ತಿಗಿಂತ ಕಡಿಮೆ ಬೆಲೆಯಲ್ಲಿ ಸಿಗುವುದರಿಂದ ಈ ದೇಶಗಳು ಉತ್ತರ ಕೊರಿಯಾ ಬಳಿ ಕೊಳ್ಳುತ್ತಿವೆ. ಜತೆಗೆ ಆಂತರಿಕ ಕಲಹದಲ್ಲಿ ಆಗುವ ಸಾವು-ನೋವುಗಳನ್ನ ಆರೈಕೆ ಮಾಡುವುದಕ್ಕೆಂದು ಉತ್ತರ ಕೊರಿಯಾ ತನ್ನ ವೈದ್ಯರನ್ನ ಪ್ಯಾಕೇಜ್ ಡೀಲ್ ಮೂಲಕ ಇಷ್ಟು ವರ್ಷಕ್ಕೆ ಎಂದು ಆಫ್ರಿಕನ್ ದೇಶಗಳಿಗೆ ಗುತ್ತಿಗೆ ನೀಡುತ್ತಿದೆ.

ಮಾದಕ ವಸ್ತುಗಳ ಮಾರಾಟ

ಇಂದು ಜಗತ್ತಿನಲ್ಲಿ ಅತಿಹೆಚ್ಚು ಲಾಭ ತಂದುಕೊಡುತ್ತಿರುವ ಕೆಲವೇ ಕೆಲವು ಉದ್ದಿಮೆಗಳಲ್ಲಿ ಮಾದಕ ವಸ್ತುಗಳ ಮಾರಾಟ ಕೂಡ ಒಂದು. ಉತ್ತರ ಕೊರಿಯಾ ದೇಶ ತನ್ನ ನೆಲದಲ್ಲಿ ಇಂಥ ಮಾದಕ ವಸ್ತುಗಳ ಬೆಳೆಯನ್ನ ಬೆಳೆಯುತ್ತಿದೆ. ಸರಕಾರದ ಅನುಮತಿ ಇದ್ದ ಮೇಲೆ ಯಾವುದರ ಭಯ?

ಕಿಮ್ ಸಂಗ್-2

ವಹಿವಾಟು ನಿಯಂತ್ರಿಸುವ ಆಫೀಸ್ 39

'ವರ್ಕಿಂಗ್ ಪಾರ್ಟಿ ಆಫ್ ಕೊರಿಯಾ'ದಲ್ಲಿ ಇಂಥ ಹಣದ ವಹಿವಾಟನ್ನು ನಿರ್ವಹಿಸಲು ಇರುವ ವ್ಯವಸ್ಥೆಗೆ 'ಆಫೀಸ್ 39' ಅಥವಾ 'ಬ್ಯೂರೋ 39' ಅಥವಾ 'ಡಿವಿಷನ್ 39' ಎನ್ನುವ ಹೆಸರಿದೆ. ಪಾರ್ಟಿ ಕಾರ್ಯಕರ್ತರು ಮತ್ತು ಉತ್ತರ ಕೊರಿಯಾದ ಜನರ ನಡುವೆ ಇದು 'ಆಫೀಸ್ 39' ಎಂದೇ ಪ್ರಸಿದ್ಧಿ ಪಡೆದಿದೆ. ಹೀಗೆ ವಿದೇಶಗಳಲ್ಲಿ ಮಾಡುವ ಒಪ್ಪಿತವಲ್ಲದ ಹಣವನ್ನ ತನ್ನ ದೇಶಕ್ಕೆ ತರಿಸಿಕೊಳ್ಳುವ ಕೆಲಸ ಮತ್ತು ಅದನ್ನ ಕಿಮ್ ಮನೆತನಕ್ಕೆ ಸರಿಯಾಗಿ ವಿಲೇವಾರಿ ಮಾಡುವ ಕೆಲಸವನ್ನ ಈ 'ಆಫೀಸ್ 39' ಮಾಡುತ್ತದೆ. ವಿದೇಶಗಳಲ್ಲಿ ತನ್ನ ಹೋಟೆಲ್ ಮತ್ತು ಇತರ ಉದ್ದಿಮೆಗಳನ್ನ ತೆರೆಯುವುದನ್ನ, ಆ ಮೂಲಕ ಹಣವನ್ನ ಉತ್ತರ ಕೊರಿಯಾಕ್ಕೆ ವ್ಯವಸ್ಥಿತವಾಗಿ ಕಳಿಸುವುದನ್ನ ಇದು ಮಾಡುತ್ತದೆ. 'ಪಿಯಂಗ್ ಯೋಂಗ್' ಎನ್ನುವ ಸರಣಿ ಹೋಟೆಲ್ ಉದ್ದಿಮೆಯನ್ನ 'ಆಫೀಸ್ 39' ನಿಯಂತ್ರಿಸುತ್ತಿದೆ. ಈ ಹೋಟೆಲ್ ಜಗತ್ತಿನ ಹಲವಾರು ದೇಶಗಳಲ್ಲಿ ಸ್ಥಾಪಿತವಾಗಿದೆ. ಇವುಗಳ ಮೂಲಕ ಅಂತಾರಾಷ್ಟ್ರೀಯ ವಿಮೆಯನ್ನ ಕೊಳ್ಳುವುದರಲ್ಲಿ, ಇಂಥ ವಿಮೆಯಲ್ಲಿ ಅವ್ಯವಹಾರ ನಡೆಸುವುದರಲ್ಲಿ, ಅಲ್ಲೂ ಹಣವನ್ನು ದೋಚುವುದರಲ್ಲಿ ಕೂಡ ಈ 'ಆಫೀಸ್' ಸಿದ್ಧಹಸ್ತ.

ಹೀಗೆ ಉತ್ತರ ಕೊರಿಯಾ ದೇಶದ ಹಣದ ವಹಿವಾಟು ನಿಯಂತ್ರಿಸುವುದು 'ಆಫೀಸ್ 39'. ಈ ದೇಶದ ಹಣಕಾಸು ಮಂತ್ರಿಯಾಗಲೀ ಅಥವಾ ಹಣಕಾಸು ಖಾತೆಯಾಗಲೀ ಅವುಗಳ ಇಲ್ಲಿನ ಹಣದ ವ್ಯವಹಾರದ ಬಗ್ಗೆ ಉಸಿರೆತ್ತುವುದಿಲ್ಲ. ಹಣಕಾಸು ಮಂತ್ರಾಲಯದಲ್ಲಿ ನೇರವಾಗಿ ಬರುವ ಹಣದ ಮೇಲಷ್ಟೇ ಅದಕ್ಕೆ ಅಧಿಕಾರ. ಉಳಿದ ಎಲ್ಲಾ ಹಣವು ಸರ್ವಾಧಿಕಾರಿ ಕಿಮ್ ಮನೆಯನ್ನು ಸೇರುತ್ತದೆ. ಹೀಗೆ ತನ್ನ ಖಜಾನೆಗೆ ಸೇರಿದ ಹಣದ 20 ಅಥವಾ 30 ಭಾಗವನ್ನ ಮಾತ್ರ ಜನರ ಆಹಾರ ಮತ್ತಿತರ ಮೂಲಭೂತ ಬೇಡಿಕೆಗಳನ್ನ ಈಡೇರಿಸಲು ನೀಡಲಾಗುತ್ತದೆ. ಅಣುಬಾಂಬ್ ಖರೀದಿ, ಅದರ ಪರೀಕ್ಷೆ ಅಥವಾ ಯುದ್ಧ ಇನ್ನಿತರ ಖರ್ಚಿಗೂ ಹಣಕಾಸು ಖಾತೆಗೂ ಯಾವುದೇ ಸಂಬಂಧವಿಲ್ಲ. ಅದೇನಿದ್ದರೂ ಕಿಮ್ ತನ್ನ ಜೇಬಿನಿಂದ ತೆಗೆದು ಮಾಡುವ ಖರ್ಚು. ನಿರ್ಧಾರಗಳೂ ಅವನದ್ದೇ ಅಂತಿಮ. ಪಾರ್ಟಿಯಲ್ಲೂ ಅಷ್ಟೇ, ಅವನಿಗೆ 'ಜೀ ಹುಜೂರ್' ಎಂದವರಿಗಷ್ಟೇ ಜಾಗ. ಇಲ್ಲದಿದ್ದರೆ ಚಿಕ್ಕಪ್ಪನಾದರೂ ಸರಿಯೇ ಅವರಿಗೆ ಮರಣದಂಡನೆ ಕಟ್ಟಿಟ್ಟಬುತ್ತಿ. ಹಣಕಾಸು ನಿಯಂತ್ರಿಸುವ 'ಆಫೀಸ್ 39' ಬಹಳ ಪ್ರಸಿದ್ಧ. ಗೂಢಚಾರಿಕೆಗೆ ಕೂಡ ಇಷ್ಟೇ ಪ್ರಸಿದ್ಧವಾದ 'ಆಫೀಸ್ 35' ಇಲ್ಲಿದೆ. ಹೀಗೆ ತಾವು ಮಾಡುವ ಪ್ರತಿ ಕೆಲಸಕ್ಕೂ ಆಫೀಸ್‌ಗಳನ್ನ ತೆರೆಯಲಾಗಿದೆ. ಇವುಗಳ ಬೇರೆ ಬೇರೆ ಕಾರ್ಯಾಂಗಗಳು ತಮಗೆ ಒಪ್ಪಿಸಿದ ಕೆಲಸವನ್ನ ನಿಷ್ಠೆಯಿಂದ ಮಾಡುತ್ತವೆ.

ಈಗಿನ ಉತ್ತರ ಕೊರಿಯಾ ಖಂಡಿತವಾಗಿ 1950ರ ದಶಕದ ಉತ್ತರ ಕೊರಿಯಾ ಅಲ್ಲ. ಅದು ಆರ್ಥಿಕವಾಗಿ ಮತ್ತು ಭದ್ರತೆಯ ವಿಷಯದಲ್ಲಿ ಸಾಕಷ್ಟು ಸದೃಢವಾಗಿದೆ. ಆದರೆ ಅಲ್ಲಿನ ಜನರ ಸಾಮಾಜಿಕ ಮತ್ತು ಆಂತರಿಕ ಜೀವನದಲ್ಲಿ ಅಂಥ ಬದಲಾವಣೆ ಕಂಡುಬಂದಿಲ್ಲ. ಸಮಯದ ಜತೆಗೆ ಒಂದಷ್ಟು ಬದಲಾವಣೆ ಆಗಿದೆ ಎನ್ನುವುದು ಬಿಟ್ಟರೆ ಜನರಿಗೆ ಹೆಚ್ಚಿನ ಸೌಲಭ್ಯ ಸಿಕ್ಕಿಲ್ಲ. ಅವರದೇನಿದ್ದರೂ ದುಡಿತ, ಸರಕಾರದ ಆಜ್ಞೆಯನ್ನ ಪಾಲಿಸುವ ರೋಬಾಟ್ ಜೀವನ. ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆ ಎನ್ನುವುದು ಇದೆಯೇ ಎನ್ನುವ ಪ್ರಶ್ನೆಗೆ ಉತ್ತರ ಹೇಳುವವರಾರು?

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಇದು ಸಹವಾಸದೋಷವೇ?

'ನಿನ್ನ ಸ್ನೇಹಿತರು ಯಾರೆಂದು ನನಗೆ ತೋರಿಸು; ನೀನ್ಯಾರು, ಎಂಥವನು ಎಂದು ನಾನು ನಿನಗೆ ಹೇಳುವೆ' ಎಂಬುದೊಂದು ಮಾತು ನಮ್ಮ ನಡುವೆ ಚಾಲ್ತಿಯಲ್ಲಿದೆ. ವ್ಯಕ್ತಿಯೊಬ್ಬನ ಪರಿಚಯವನ್ನು ಆತ ಬಾಯಿಬಿಡದೆಯೇ ಅವನಿಗಿರುವ ಸಾಂಗತ್ಯವೇ ಹೇಳಿಬಿಡುತ್ತದೆ. ಇದು ರಾಜಕೀಯ ಕ್ಷೇತ್ರಕ್ಕೂ ಅನ್ವಯಿಸುವ ಮಾತು ಮತ್ತು ಇದರ ಕೇಂದ್ರಬಿಂದುವಾಗಿರುವವರು ಸಂಯುಕ್ತ ಜನತಾದಳದ ಅಧ್ಯಕ್ಷ ಹಾಗೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು. ಅದಕ್ಕೊಂದು ಕಾರಣವಿದೆ. ನರೇಂದ್ರ ಮೋದಿ ನೇತೃತ್ವದ ಸರಕಾರವು ಮೂರನೇ ಬಾರಿಗೆ ಕೇಂದ್ರದಲ್ಲಿ ಗದ್ದುಗೆಯೇರಿದಾಗಿನಿಂದ ನೀತಿ-ನಿರೂಪಣೆಗೆ ಸಂಬಂಧಿಸಿದ ಒಂದಷ್ಟು ನಿರ್ಣಯಗಳಲ್ಲಿ 'ಯು-ಟರ್ನ್' ಹೊಡೆಯಲು ಶುರುಮಾಡಿದ್ದು ಕಂಡು ಬಿಜೆಪಿಯ ಬೆಂಬಲಿಗರು ಗಲಿಬಿಲಿಗೊಂಡಿದ್ದಾರಂತೆ. ಸರಕಾರದ ಈ ಪಥಬದಲಾವಣೆಗೆ ಕಾರಣ ಹುಡುಕಿ ಹೊರಟಾಗ, ನಿತೀಶ್ ಕುಮಾರ್ ಜತೆಗೆ ಮೋದಿಯವರು ದೋಸ್ತಿ ಮಾಡಿರುವುದರ ಪ್ರಭಾವವಿದು ಎಂಬುದು ಅವರಿಗೆ ಗೊತ್ತಾಯ್ತಂತೆ. 'ಪಲ್ಟು-ರಾಮ್' ಎಂದೇ (ಕು)ಖ್ಯಾತಿ ಗಳಿಸಿರುವ ನಿತೀಶರು ಹೇಳಿಕೇಳಿ ಸಮಕಾಲೀನ ರಾಜಕಾರಣದಲ್ಲಿ ಯು-ಟರ್ನ್ ಹೊಡೆಯುವುದರಲ್ಲಿ ಫೇಮಸ್ಸು ಮತ್ತು ಈ ವಿಷಯದಲ್ಲಿ ಅವರಿಗ್ಯಾವ ಮುಜುಗರವೂ ಇಲ್ಲ. ಅವರ ಈ ಗುಣ-ವೈಶಿಷ್ಟ್ಯವೇ ಮೋದಿಯವರಿಗೂ ಮೆತ್ತಿಕೊಂಡುಬಿಟ್ಟಿದೆ' ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ತಮ್ಮ ಅನುಯಾಯಿಗಳಿಗೆ ಹೇಳುತ್ತಿದ್ದುದು ಕಲಹಪ್ರಿಯ ನಾರದರ ಕಿವಿಗೆ ಬಿದ್ದಿದೆ.

ಇದು ಇಷ್ಟಕ್ಕೇ ನಿಂತಿಲ್ಲ, ನಿತೀಶರು ಕಾಲಾನುಕಾಲಕ್ಕೆ ಹೀಗೆ ಹೊಡೆಯುವ ಲಾಗವು ಸಾಮಾಜಿಕ ಮಾಧ್ಯಮಗಳಲ್ಲಿ ಅವರನ್ನು ಹಾಸ್ಯದ ಸರಕಾಗಿಸಿಬಿಟ್ಟಿದೆ. ಹೆದ್ದಾರಿ ಗಳಲ್ಲಿ ಬಿಂಬಿಸಲಾಗುವ 'ಯು-ಟರ್ನ್' ಸಂಜ್ಞಾಫಲಕದಲ್ಲಿ ಆ ಚಿಹ್ನೆಯ ಬದಲು ನಿತೀಶರ ಫೋಟೋವನ್ನೇ ಹಾಕೋದು ಬೆಸ್ಟು ಎಂಬುದು ಇಂಥ ಜೋಕುಗಳಲ್ಲೊಂದು. ಅದೇನೇ ಇರಲಿ, ರಾಜ ಕೀಯ ಬಾಂಧವ್ಯದ ನೆಪದಲ್ಲಿ ಮೋದಿಯವರ ಮೇಲೆ ನಿತೀಶರು ಬೀರಿರುವ ಪ್ರಭಾವದಿಂದಾಗುವ ಪರಿಣಾಮವು 'ಇದು ಸಹವಾಸ ದೋಷದ ಫಲಶ್ರುತಿ ಕಣ್ರೀ' ಎಂದು ಅವರಿವರು ಆಡಿಕೊಳ್ಳುವುದಕ್ಕೆ ಕಾರಣ ಆಗದಿರಲಿ ಎಂಬುದು ಸಹೃದಯಿಗಳ ಹಾರೈಕೆ!

ಅನುಕೂಲಸಿಂಧು ರಾಜಕಾರಣ

All roads lead to Rome ಎಂಬ ಇಂಗ್ಲಿಷ್ ಜಾಣನುಡಿ ನಿಮಗೆ ಗೊತ್ತಿರುವಂಥದ್ದೇ. 'ಒಂದೇ ಥರದ ಫಲಿತಾಂಶವನ್ನು ಸಾಧಿಸಲು ನಮ್ಮ ವ್ಯವಸ್ಥೆಯಲ್ಲಿ ವಿಭಿನ್ನ ಮಾರ್ಗಗಳಿವೆ' ಎಂದು ಹೇಳಲು ಈ ಅಲಂಕಾರಿಕ ಮಾತನ್ನು ಅಥವಾ ಭಾಷಾವೈಶಿಷ್ಟ್ಯದ ಅಭಿವ್ಯಕ್ತಿಯನ್ನು ಬಳಸುವುದುಂಟು. ರೋಮನ್ ಸಾಮ್ರಾಜ್ಯವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ರಸ್ತೆಗಳ ವ್ಯಾಪಕ ಜಾಲ (ಸುಮಾರು 4 ಲಕ್ಷ ಕಿ.ಮೀ.) ರೂಪುಗೊಂಡಿದ್ದನ್ನು ಈ ಜಾಣನುಡಿ ಸೂಚ್ಯವಾಗಿ ಹೇಳುತ್ತದೆ. ಈ 'ಸಂಚಾರಮಾರ್ಗ'ಗಳಿಗೂ 'ನಾರದ ಸಂಚಾರ'ಕ್ಕೂ ಏನು ಸಂಬಂಧ? ಎಂದು ನೀವು ಕೇಳಬಹುದು. ಅದಕ್ಕೆ ಕಾರಣವಾಗಿರೋದು ಜೆಡಿಎಸ್‌ನ 'ಯುವಸಾಮ್ರಾಟ' ನಿಖಿಲ್ ಕುಮಾರಸ್ವಾಮಿಯವರು. 'ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಟಿಕೆಟ್ ವಿಚಾರವನ್ನು ದೆಹಲಿಯ ಬಿಜೆಪಿ ಹೈಕಮಾಂಡ್ ತೀರ್ಮಾನಿಸಲಿದೆ' ಎಂದು ನಿಖಿಲ್ ಮೊನ್ನೆ ಹೇಳಿದ್ದಾರೆ. ಲೋಕಸಭಾ ಚುನಾವಣೆ ವೇಳೆ ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ಡಾ. ಸಿ.ಎನ್. ಮಂಜುನಾಥ್ ಅವರನ್ನು ಬಿಜೆಪಿ ವತಿಯಿಂದ ಕಣಕ್ಕಿಳಿಸಿದಾಗ, ಕಾಂಗ್ರೆಸ್‌ನ ಕೆಲ ನಾಯಕರು, 'ಜೆಡಿಎಸ್ ಪಕ್ಷಕ್ಕೆ ಅಸ್ತಿತ್ವವಿರುವಾಗಲೂ ಡಾಕ್ಟರನ್ನು ಬಿಜೆಪಿಯಿಂದ ಕಣಕ್ಕಿಳಿಸಿದ್ದು ಜೆಡಿಎಸ್‌ನವರ ಅವಕಾಶವಾದಿ ರಾಜಕಾರಣವನ್ನು ತೋರಿಸುತ್ತದೆ' ಎಂದು ಆ ನಡೆಯನ್ನು ಗೇಲಿಮಾಡಿದ್ದರು. ಈಗ ನಿಖಿಲ್ ಕೂಡ, ಬಿಜೆಪಿಯ ದೆಹಲಿ ಹೈಕಮಾಂಡ್ ಕಡೆಗೆ ಬೆರಳು ಮಾಡಿದ್ದಾರೆ. ಇದು ಸದ್ಯೋಭವಿಷ್ಯದಲ್ಲಿ ಯಾವ ಬೆಳವಣಿಗೆಯ ಸೂಚಕವಾಗಬಹುದು ಎಂಬ ಗೆಸ್‌ವರ್ಕ್ ನಿಮಗೇ ಬಿಟ್ಟಿದ್ದು!

ನಾರಾಯಣ ನಾರಾಯಣ!

ದೆಹಲಿಯ ಶಾಲೆಯೊಂದರ 4ನೇ ತರಗತಿಯ ಬಾಲಕನ ಶಾಲಾ ಬ್ಯಾಗ್‌ನಲ್ಲಿ ಪಿಸ್ತೂಲ್ ಪತ್ತೆಯಾಯಿತಂತೆ. ಅವನು ತಾನೇ ಏನು ಮಾಡ್ತಾನೆ? ಪಾಟೀಚೀಲದಲ್ಲಿ 'ಲಾಂಗ್' ಹಿಡಿಸೋದಿಲ್ವಲ್ಲಾ?!!

ತಂತ್ರಜ್ಞಾನ ಲೋಕವನ್ನು ಆಳುತ್ತಿರುವ ಟ್ರೋಲ್ ಎಂಬ ಬಕಾಸುರ!

ಒಬ್ಬರಿಗೊಬ್ಬರು ಹೊಂದಿಕೊಂಡು ಹೇಗೆ ಬದುಕಬೇಕು ಎಂಬುದನ್ನು ಕಲಿಯಲು ನಮಗೆ ಸಾವಿರಾರು ವರ್ಷಗಳು ಬೇಕಾದವು. ನಮ್ಮ ವಿಕೃತ ಮನಸ್ಥಿತಿಯನ್ನು ತಡೆದು ನಿಲ್ಲಿಸಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ನಿಯಮಗಳನ್ನು ರೂಪಿಸಿಕೊಂಡೆವು. ತಾನೊಬ್ಬ ಪ್ರಗತಿಪರ ಎಂದು ಗುರುತಿಸಿಕೊಳ್ಳುವ ಧಾವಂತದಲ್ಲಿ ಹೊಸ ಹೊಸ ತಂತ್ರಜ್ಞಾನಗಳನ್ನು ಸೃಷ್ಟಿಸಿದ ಮಾನವ, ಕೊನೆಗೆ ತಾನು ತೋಡಿದ ಹಳ್ಳದಲ್ಲೇ ಬೀಳುವಂಥ ಪರಿಸ್ಥಿತಿಯನ್ನೂ ಹುಟ್ಟುಹಾಕಿದ್ದಾನೆ. ಈ ಹಳ್ಳದಲ್ಲಿ ಅಮಾಯಕರೂ ಬೀಳುತ್ತಿರುವುದು ವಿಷಾದನೀಯ.

ಕಳಕಳಿ
ಸುರೇಂದ್ರ ಪೈ
vveditoped@gmail.com

'ರಾಮೇಶ್ವರಕ್ಕೆ ಹೋದ್ರೂ ಶನೈಶ್ಚರನ ಕಾಟ ತಪ್ಪಲಿಲ್ಲ' ಎನ್ನುವ ಹಾಗೆ ಇಂದಿನ ತಂತ್ರಜ್ಞಾನ ಯುಗದಲ್ಲೂ ನಮ್ಮನ್ನೆಲ್ಲಾ ಬೆಂಬಿಡದೆ ಕಾಡುವ ಸಂಗತಿಯೆಂದರೆ ಟ್ರೋಲ್. ಕಳೆದ ಒಂದು ದಶಕದಿಂದ ಇದರ ಹಾವಳಿ ಜೋರಾಗಿದ್ದು, ಇದರ ಬಲೆಗೆ ಬೀಳುವವರ ಸಂಖ್ಯೆಯೂ ಹೆಚ್ಚುತ್ತಿದೆ. ಎಳೆಯರಿಂದ ಹಿಡಿದು ಹಿರಿಯರ ತನಕ ಈ ಟ್ರೋಲ್ ಮಹಾಶಯ ಯಾರನ್ನೂ ಬಿಟ್ಟಿಲ್ಲ. ನದಿಮೂಲ, ಋಷಿಮೂಲವನ್ನು ಹುಡುಕುವುದು ಹೇಗೆ ದುಸ್ತರವೋ, ಹಾಗೆಯೇ ಈ ಟ್ರೋಲ್ ಮೂಲವನ್ನು ಹುಡುಕುವುದೂ ಕಷ್ಟ.

'ಟ್ರೋಲ್' ಎಂದರೆ ಇನ್ನೊಬ್ಬರ ಮಾತು, ಹಾವ-ಭಾವದ ಮೂಲ ವಿಡಿಯೋಗಳಿಗೆ ಇನ್ಯಾವುದೋ ವ್ಯಕ್ತಿಯ ಹಾಸ್ಯದೃಶ್ಯದ ತುಣುಕು/ಚಿತ್ರಗಳನ್ನು ಸೇರಿಸಿ ತಿರುಚಿ ಅದನ್ನು ತಮಾಷೆ/ಗೇಲಿಯ ವಸ್ತುವನ್ನಾಗಿ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಎಂದು ಹೇಳಬಹುದು. ಇನ್ನೂ ಸರಳವಾಗಿ ಹೇಳುವುದಾದರೆ- ಇನ್ನೊಬ್ಬರನ್ನು ಆಡಿಕೊಂಡು ನಗುವುದು. ಈ ಅಭ್ಯಾಸ ಕೆಲವರಿಗೆ ಹೊಸದೇನೂ ಅಲ್ಲ ಬಿಡಿ. ತಮಗೆ ಸಂಬಂಧವಿರಲಿ ಇಲ್ಲದಿರಲಿ, ಬೇರೆಯವರ ವಿಷಯದಲ್ಲಿ ಮೂಗು ತೂರಿಸುವುದನ್ನು ಮಾತ್ರ ಇಂಥವರು ಎಂದಿಗೂ ಬಿಡುವುದಿಲ್ಲ. ಬಹುಶಃ ಈ ಸ್ವಭಾವವೇ ಟ್ರೋಲ್ ಹುಟ್ಟಿಕೊಳ್ಳಲು ಪ್ರೇರಣೆಯಾಗಿದ್ದರೂ ಆಗಿರಬಹುದು. ಆದರೆ ಆನ್‌ಲೈನ್ ಟ್ರೋಲ್ ಮಾತ್ರ ತುಸು ಭಿನ್ನವಾಗಿದ್ದು, ತಂತ್ರಜ್ಞಾನ ಸಾಮಗ್ರಿಗಳ ಮೂಲಕ ರಂಜನೀಯವಾಗಿ ಕಾಣುವಂತೆ ಅದನ್ನು ಮಾರ್ಪಡಿಸಬಹುದಾಗಿದೆ. ಈ ಕಾರಣದಿಂದಲೇ ಟ್ರೋಲ್ ಇಂದು ಜಗತ್ತಿನ ಎಲ್ಲೆಡೆಯೂ ಎಲ್ಲರನ್ನೂ ಬಹುಬೇಗ ಆಕರ್ಷಿಸುವ ಸಾಧನವಾಗಿದೆ.

ಟ್ರೋಲ್‌ನಲ್ಲಿ ಧನಾತ್ಮಕ ಮತ್ತು ಋಣಾತ್ಮಕ ಎಂಬ ಎರಡು ಪ್ರಕಾರಗಳನ್ನು ಕಾಣಬಹುದು. ತಮಗೆ ಬೇಕಾದವರನ್ನು ಬೆಂಬಲಿಸಲು ಬಳಕೆಯಾಗುವಂಥದ್ದು ಧನಾತ್ಮಕ ಟ್ರೋಲ್; ಉದಾಹರಣೆಗೆ, ತಮಗೆ ಬೇಕಾದ ವ್ಯಕ್ತಿಯೊಬ್ಬ ಸಮಾಜದಲ್ಲಿ ನಡೆದ ಯಾವುದೋ ವಿಚಾರಕ್ಕೆ ಸಂಬಂಧಿಸಿ ಖಡಕ್ ಆಗಿ ಪ್ರತಿಕ್ರಿಯಿಸಿದಾಗ ಆತನ ತಲೆಗೆ ಟೋಪಿ, ತುಟಿಗೆ ಸಿಗರೇಟು, ಕುತ್ತಿಗೆಗೆ ಬಂಗಾರದ ಸರಗಳನ್ನು ಎಡಿಟ್ ಮಾಡಿ ಸೇರಿಸಿ, ಅದಕ್ಕೊಂದು ಸ್ಟ್ರಾಂಗ್ ಹಿನ್ನೆಲೆ ಸಂಗೀತ ಕೊಡುವುದು. ಇನ್ನು, ವಿರೋಧಿಗಳನ್ನು ವ್ಯಂಗ್ಯ ಮಾಡಲು ಬಳಸುವ ಅಸ್ತ್ರವೇ ಋಣಾತ್ಮಕ ಟ್ರೋಲ್. ಇಲ್ಲಿ ಮೂಲ ವಿಡಿಯೋ ದೃಶ್ಯಕ್ಕೆ ಸರಿಹೊಂದುವಂತೆ ಯಾವುದೋ ಸಿನಿಮಾದ, ಕೇಕೆ ಹಾಕಿ ನಗುವ ತುಣುಕಿನ ದೃಶ್ಯವನ್ನು ಸೇರಿಸುವ ಮೂಲಕ ಎದುರಾಳಿಗಳನ್ನು ಅಪಹಾಸ್ಯಕ್ಕೆ ಗುರಿಮಾಡಲಾಗುತ್ತದೆ.

ಇಂದು ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್ ಮೊದಲಾದ ಸಾಮಾಜಿಕ ಜಾಲತಾಣಗಳನ್ನು ತೆರೆದರೆ ಸಾಕು, ಸಾವಿರಾರು ಟ್ರೋಲ್ ಪೇಜ್‌ಗಳು ವೀಕ್ಷಣೆಗೆ ಸಿಗುತ್ತವೆ. ಅಲ್ಲಿ ದಿನದಿನಕ್ಕೂ ನೂರಾರು ಹೊಚ್ಚ ಹೊಸ ಪ್ರಚೋದನಕಾರಿ ಮೀಮ್ ವಿಡಿಯೋಗಳನ್ನು ಹರಿಬಿಡಲಾಗುತ್ತದೆ. ಒಮ್ಮೆ ಟ್ರೋಲ್ ವಿಡಿಯೋ ನೋಡಿದರೆ ಸಾಕು, ನಿಮಗೇ ಗೊತ್ತಿಲ್ಲದ ಹಾಗೆ ಅದರ ಬಲೆಯೊಳಗೆ ಬೀಳುತ್ತೀರಿ. ದಿನಕ್ಕೊಮ್ಮೆಯಾದರೂ ಟ್ರೋಲ್ ವಿಡಿಯೋ ನೋಡಿ ಎಂಜಾಯ್ ಮಾಡದಿದ್ದರೆ ಏನೋ ಕಳೆದುಕೊಂಡ ಭಾವ. ಈ ಟ್ರೋಲ್ ಲೋಕದಲ್ಲಿ ವಿಶೇಷವಾಗಿ ರಾಜಕಾರಣಿಗಳು, ಸಿನಿಮಾ ತಾರೆಯರು, ಪತ್ರಕರ್ತರು, ಟಿವಿ ಆ್ಯಂಕರ್‌ಗಳು, ಕ್ರೀಡಾಪಟುಗಳು ಟ್ರೋಲಿಗರ ಫೇವರಿಟ್ ಆಗಿರುತ್ತಾರೆ. ಕನ್ನಡದ 'ಯುಐ' ಚಿತ್ರದ 'ಟ್ರೋಲಾಗುತ್ತೆ ಇದು ಟ್ರೋಲಾಗುತ್ತೆ' ಎಂಬ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಯಿತು; ಟ್ರೋಲ್ ಎಂಬುದು ಸಾಮಾಜಿಕ ಜಾಲತಾಣದಲ್ಲಿ ಎಷ್ಟರಮಟ್ಟಿಗೆ ಸಾರ್ವಭೌಮತೆಯನ್ನು ಸ್ಥಾಪಿಸುತ್ತಿದೆ ಎಂಬುದನ್ನು ಈ ಹಾಡು ತೋರಿಸಿಕೊಟ್ಟಿದೆ. ಟ್ರೋಲ್ ಆಗಲು ಕಾರಣ ಬೇಕಿಲ್ಲ, ಅದು ಟ್ರೋಲಿಗರ ವಿಕೃತ ಮನಸ್ಥಿತಿಯ ಮೇಲೆ ನಿಂತಿರುತ್ತದೆ. 'ಸದಾಶಿವನಿಗೆ ಅದೇ ಧ್ಯಾನ' ಎಂಬಂತೆ ಟ್ರೋಲಿಗರಿಗೆ ಅದೇ ಒಂದು ಪಾರ್ಟ್‌ಟೈಮ್ ಕೆಲಸವಾಗಿಬಿಟ್ಟಿದೆ.

ಟ್ರೋಲ್ ಜಗತ್ತಿನಲ್ಲಿ 'ಫೇವರಿಟ್' ಎನಿಸಿಕೊಂಡ ರಾಜಕಾರಣಿಗಳ ಟ್ರೋಲ್ ವಿಡಿಯೋಗಳು ಬಹುಬೇಗನೆ ಹಿಟ್ ಆಗಿಬಿಡುತ್ತವೆ; ಅವರಿಗೆ ಸಾಮಾಜಿಕ/ಸಾರ್ವಜನಿಕ ಜೀವನದಲ್ಲಿ ನಿತ್ಯವೂ ಕಾಣಿಸಿಕೊಳ್ಳುವ ಹೊಣೆಗಾರಿಕೆ ಇರುವುದರಿಂದಲೇ ಅವರ ಕುರಿತಾದ ಟ್ರೋಲ್‌ಗಳು ಹೆಚ್ಚು ಜನಪ್ರಿಯವಾಗುತ್ತವೆ. ಹಾಗೇ ಒಂದೆರಡು ಝಲಕ್ ನೋಡುವುದಾದರೆ- ಎಚ್.ಡಿ.ಕುಮಾರಸ್ವಾಮಿಯವರ 'ನಿಖಿಲ್ ಎಲ್ಲಿದ್ದೀಯಪ್ಪಾ?', ಸಿದ್ದರಾಮಯ್ಯನವರ ಕುರಿತಾದ 'ಹೌದು ಹುಲಿಯಾ', ಚಾಮರಾಜಪೇಟೆಯ ಶಾಸಕ ಜಮೀರ್ ಅಹ್ಮದ್ ಅವರ 'ಕಂಜಾಜುಲೇಷನ್ ಬ್ರದರ್, ಅಬ್ಬಬ್ಬಾ ಲಾಟರಿ', ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಕುರಿತ 'ಅವನ ಕೈಗೆ ಕಬ್ಬಿಣ ಕೊಡ್ರೀ' ಹಾಗೂ ರೇಣುಕಾಸ್ವಾಮಿ ಕೊಲೆಗೆ ಸಂಬಂಧಿಸಿದಂತೆ ಜಯಪ್ರಕಾಶ್ ಶೆಟ್ರ 'ಶೆಡ್ಡಿಗೆ ಹೋಗಣ ಬಾ, ಕುಂಟೆಬಿಲ್ಲೆ ಆಡೋಣ ಬಾ' ವಿಡಿಯೋಗಳು ಸಿಕ್ಕಾಪಟ್ಟೆ ವೈರಲ್ ಆಗಿದ್ದು ನಿಮಗೆ ನೆನಪಿರಬಹುದು.

ರಾಜ್ಯ ವಿಧಾನಸಭೆಯಲ್ಲಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಮಾತನಾಡಲು ನಿಂತಾಗ ಸ್ಪೀಕರ್ ಯು.ಟಿ.ಖಾದರ್ ಮಧ್ಯಪ್ರವೇಶಿಸಿ, 'ಟ್ರೋಲ್ ಮಾಡುವವರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ, ನಾನು ಈ ಕುರ್ಚಿಯಲ್ಲಿ ಕುಳಿತುಕೊಳ್ಳಲು ಅವರೇ ಕಾರಣ. ಹೊಸದಾಗಿ ಆಯ್ಕೆಯಾದ ಶಾಸಕರು ಆತ್ಮವಿಶ್ವಾಸದಿಂದಲೇ ಮಾತನಾಡಿ, ಹೆಚ್ಚು ಕಮ್ಮಿಯಾದರೆ ಏನೂ ತೊಂದರೆ ಇಲ್ಲ, ಇದು ಪರೀಕ್ಷಾ ಕೊಠಡಿ ಅಥವಾ ನ್ಯಾಯಾಲಯ ಅಲ್ಲ' ಎಂದಿದ್ದುಂಟು. ಸಾರ್ವಜನಿಕ ಜೀವನದ ಮೇಲೆ ಟ್ರೋಲ್‌ಗಳು ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತವೆ ಎಂಬುದು ಇದರಿಂದ ಅರ್ಥವಾಗುತ್ತದೆ.

ಇನ್ನು ರಾಷ್ಟ್ರ ರಾಜಕಾರಣದ ಟ್ರೋಲ್ ಲೋಕದಲ್ಲಿ, ಕಳೆದ ಒಂದು ದಶಕದಿಂದಲೂ ಟ್ರೋಲಿಗರ ನೆಚ್ಚಿನ ವ್ಯಕ್ತಿಗಳಲ್ಲಿ ಅಗ್ರಸ್ಥಾನ ಪಡೆದವರು ರಾಹುಲ್ ಗಾಂಧಿ. ಅವರನ್ನು ಆ ಹೆಸರಿನಿಂದ ಸಂಬೋಧಿಸುವುದಕ್ಕಿಂತ ಹೆಚ್ಚಾಗಿ ಟ್ರೋಲಿಗರು 'ಪಪ್ಪು' ಎಂದೇ ಕರೆಯುತ್ತಿದ್ದರು. ರಾಹುಲರು ಏನು ಮಾತನಾಡಿದರೂ ಅದು ಟ್ರೋಲ್ ಆಗುತ್ತಿತ್ತು. ಇತ್ತೀಚೆಗೆ ಲೋಕಸಭಾ ಚುನಾವಣಾ ಪ್ರಚಾರದ ವೇಳೆ ರಾಹುಲರ 'ಖಟಾಖಟ್ ಖಟಾಖಟ್ ಖಟಾಖಟ್' ಸಾಲು ಟ್ರೋಲ್ ಆಗಿ ಎಲ್ಲೆಡೆ ಹರಿದಾಡತೊಡಗಿತು. ಅದರ ತೀವ್ರತೆ ಎಷ್ಟಿತ್ತೆಂದರೆ, ಸ್ವತಃ ಪ್ರಧಾನಿ ಮೋದಿಯವರಿಂದ ಹಿಡಿದು ಬಹುತೇಕರು ತಮ್ಮ ಭಾಷಣದಲ್ಲಿ 'ಖಟಾಖಟ್ ಖಟಾಖಟ್' ಸಾಲು ಸೇರಿಸಿ ರಾಹುಲರನ್ನು ಟ್ರೋಲ್ ಮಾಡಲು ಶುರುಮಾಡಿದರು. ಆದರೆ ಚುನಾವಣಾ ಫಲಿತಾಂಶ ಬಂದ ನಂತರ ಹಾಗೂ ಸಂಸತ್ತಿನಲ್ಲಿ ಪ್ರತಿಪಕ್ಷ ನಾಯಕರಾಗಿ ಅವರ ಮಾತುಗಳನ್ನು ಆಲಿಸಿದ ನಂತರ ರಾಹುಲರ ಕುರಿತಾದ ಟ್ರೋಲ್ ನಿಂತುಹೋಯಿತು.

ಇವನ್ನೆಲ್ಲಾ ನೋಡಿದಾಗ, 'ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ' ಎಂಬ ಗಾದೆಮಾತು ನೆನಪಾಗುತ್ತದೆ.

ಮೊದಲೇ ಹೇಳಿದಂತೆ 'ಟ್ರೋಲ್' ಎಂಬುದು ವ್ಯಕ್ತಿಯೊಬ್ಬನ ವಿಕೃತ ಮನಸ್ಥಿತಿಯ ಪ್ರತಿರೂಪ. ಮನುಷ್ಯರಾದ ನಾವು ಮಾನವೀಯ ಮೌಲ್ಯಗಳಿಗೆ ಧಕ್ಕೆಯಾಗುವ ಹಾಗೆ ನಡೆದುಕೊಳ್ಳುತ್ತಿರುವುದನ್ನು ನೋಡಿದಾಗ, ನಾವಿನ್ನೂ ಪೂರ್ಣಪ್ರಮಾಣದಲ್ಲಿ ವಿಕಸನಗೊಂಡಿಲ್ಲ ಎನಿಸುತ್ತದೆ. ಟ್ರೋಲ್ ಎಂಬುದು ತಂತ್ರಜ್ಞಾನ ಜಗತ್ತಿನಲ್ಲಿ ಒಂದು ಫ್ಯಾಷನ್ ಆಗಿಬಿಟ್ಟಿದೆ. ಟ್ರೋಲ್ ಮಾಡುವವರು ತಮ್ಮ ಪೇಜ್ ಲೈಕ್ಸ್ ಮತ್ತು ಅನುಯಾಯಿಗಳ ಸಂಖ್ಯೆ ಹೆಚ್ಚಿಸಿಕೊಳ್ಳಲು ಮನಸೋಇಚ್ಛೆ ವಿಡಿಯೋಗಳನ್ನು ಎಡಿಟ್ ಮಾಡಿ, ಒಂದು ಹೊಸ ವಿಡಿಯೋವನ್ನು ಸೃಷ್ಟಿಸುತ್ತಾರೆ. ಒಂದು ವೇಳೆ ಅದು ನಿರೀಕ್ಷಿತ ಮಟ್ಟದಲ್ಲಿ 'ಹಿಟ್' ಆಗದಿದ್ದರೆ, ಇನ್ನೊಂದು ಟ್ರೋಲ್ ವಿಡಿಯೋಗಾಗಿ ಮಿಕವನ್ನು ಹುಡುಕಲು ಶುರುಹಚ್ಚಿಕೊಳ್ಳುತ್ತಾರೆ.

ಗಣ್ಯಾತಿಗಣ್ಯರನ್ನೂ ಟ್ರೋಲ್‌ಗೆ ಗುರಿಪಡಿಸಿ ಅವರ ವೈಯಕ್ತಿಕ ಘನತೆಗೆ ಕುಂದುತರುವ ಮತ್ತು ಅವರ ಹುದ್ದೆಗೆ ಅಗೌರವ ಸೂಚಿಸುವ ಮನಸ್ಥಿತಿ ಸರಿಯಲ್ಲ. ರಾಜಕಾರಣಿಗಳು ಮತ್ತು ಇತರ ಸೆಲೆಬ್ರಿಟಿಗಳು ಸಾರ್ವಜನಿಕ ಜೀವನದಲ್ಲಿ ನಿತ್ಯವೂ ಪರ-ವಿರೋಧ ಪ್ರತಿಕ್ರಿಯೆಗಳನ್ನು ಸ್ವೀಕರಿಸುವುದರಿಂದ ಇಂಥ ಟ್ರೋಲ್‌ಗಳು ಅವರ ಪಾಲಿಗೆ ಒಂದು ಪ್ರಚಾರಸಾಮಗ್ರಿ, ಅಷ್ಟೇ. ಅವರು ಇದಕ್ಕೆಲ್ಲಾ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಜನಸಾಮಾನ್ಯರ, ಯುವಕರ, ವಿದ್ಯಾರ್ಥಿಗಳ ಪಾಲಿಗೆ ಇದೊಂದು ಮಾನಸಿಕ ಹಿಂಸೆಯಾಗಿ ಕಾಡುತ್ತಿದೆ, ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟುಮಾಡುತ್ತಿದೆ. ಬಹಳಷ್ಟು ಜನರಿಗೆ ಏನು ಮಾತನಾಡಬೇಕು, ಎಷ್ಟು ಮಾತನಾಡಬೇಕು, ಯಾವ ರೀತಿ ಬದುಕಬೇಕು ಎಂಬುದೇ ಸವಾಲಾಗಿದೆ. ಸ್ವಲ್ಪ ಎಡವಿದರೂ ಟ್ರೋಲ್ ಆಗುತ್ತೇವೆಂಬ ಹೆದರಿಕೆ ಜನರನ್ನು ಕಾಡುತ್ತಿದೆ. ಸ್ವಲ್ಪ ಸಮಯ ಇದರ ಬಗ್ಗೆ ತಲೆ ಕೆಡಿಸಿಕೊಳ್ಳದಿರುವ ಜನ ಕ್ರಮೇಣ ಮಾನಸಿಕವಾಗಿ ಕುಗ್ಗುತ್ತಿದ್ದಾರೆ. ಇದು ನಿಜಕ್ಕೂ ದುರದೃಷ್ಟಕರ. ಎಷ್ಟೋ ಬಾರಿ ಬೇನಾಮಿ ಹೆಸರಿನಿಂದ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿಖಾತೆ ತೆರೆದು ಇಂಥ ತೀಟೆಯನ್ನು ತೀರಿಸಿಕೊಳ್ಳುವವರೂ ಇದ್ದಾರೆ. ಟ್ರೋಲ್ ಜನರಲ್ಲಿ ಪ್ರಚೋದನೆ ಉಂಟುಮಾಡುತ್ತಿದ್ದು, ಇದನ್ನು ಉದ್ದೇಶಪೂರ್ವಕವಾಗಿ ಬೆಳೆಸುವ ಒಂದು ಪ್ರತ್ಯೇಕ ವರ್ಗವೇ ಇದೆ.

ಟ್ರೋಲ್ ಮೂಲಕ ಜನರ ಗಮನವನ್ನು ವಾಸ್ತವಿಕತೆಯಿಂದ ಬೇರೆಡೆಗೆ ತಿರುಗಿಸುವ ಪ್ರಯತ್ನಗಳು ಕೂಡ ನಡೆಯುತ್ತಿವೆ.

ಟ್ರೋಲ್ ಮತ್ತು ಸೈಬರ್ ಬುಲ್ಲಿಂಗ್‌ನಿಂದಾಗಿ 68 ಪ್ರತಿಶತ ಮಕ್ಕಳು ಮಾನಸಿಕ ಖಿನ್ನತೆ ಮತ್ತು ದೈಹಿಕ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ. ಇದರಿಂದ ಹೊರಬರಲು ದಾರಿಕಾಣದೆ ಹದಿಹರೆಯದವರು ಮಾದಕ ದ್ರವ್ಯಗಳ ದಾಸರಾಗುತ್ತಿದ್ದಾರೆ. ಇನ್ನೂ ಕೆಲವರು ಅದರ ಕಾಟ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇವರಲ್ಲಿ 10ರಿಂದ 16 ವರ್ಷದ ಹುಡುಗಿಯರ ಪ್ರಮಾಣ ಹೆಚ್ಚಿದೆ ಮತ್ತು ಲಕ್ಷಾಂತರ ಮಕ್ಕಳು ಪ್ರತಿದಿನ ಶಾಲೆಗೆ ಹೋಗದೆ ಮನೆಯಲ್ಲೇ ಇರುತ್ತಿದ್ದಾರೆ ಎಂದು ವರದಿಯೊಂದು ತಿಳಿಸಿದೆ. ಹದಿಹರೆಯದ ಆರು ಮಂದಿಯ ಪೈಕಿ ಒಬ್ಬರು ಸೈಬರ್ ಬುಲ್ಲಿಂಗ್‌ಗೆ ಒಳಗಾಗಿರುತ್ತಾರೆ ಎಂದು ಅಂತಾರಾಷ್ಟ್ರೀಯ ಮಟ್ಟದ ಅಧ್ಯಯನ ಸಂಸ್ಥೆಯೊಂದು ತಿಳಿಸಿದ್ದರೆ, 'ಹೆಚ್ಚಿನ ಶಾಲಾ ಮಕ್ಕಳು ಸಾಂಕ್ರಾಮಿಕ ರೋಗಕ್ಕಿಂತ ಸೈಬರ್ ಬುಲ್ಲಿಂಗ್‌ನಿಂದಾಗಿ ಬಳಲುತ್ತಿದ್ದಾರೆ' ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿದೆ.

ಟ್ರೋಲಿಂಗ್ ಜಾಗತಿಕ ವ್ಯಾಪಾರವಾಗಿ ವಿಕಸನಗೊಂಡಿದೆ. ಟ್ರೋಲ್ ಮಾಡುವುದರ ಬಗೆಗೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಸೈಬರ್ ಬುಲ್ಲಿಂಗ್‌ನ ಸ್ವರೂಪಗಳು ಮತ್ತು ಅದರ ಪರಿಣಾಮಗಳ ಬಗ್ಗೆ ಹಾಗೂ ಕಾನೂನಿನಲ್ಲಿ ಇರುವ ಶಿಕ್ಷೆಯ ಬಗ್ಗೆ ಯುವಜನರಿಗೆ, ಕುಟುಂಬಿಕರಿಗೆ ಮತ್ತು ಶಾಲೆಗಳಿಗೆ ಅರಿವು ನೀಡುವ ತುರ್ತು ಅಗತ್ಯವಿದೆ. ಆನ್‌ಲೈನ್ ಅಪರಾಧ ಕುರಿತಂತೆ ಭಾರತದಲ್ಲಿ ಹಲವಾರು ಕಾನೂನುಗಳಿವೆ. 'ಮಾಹಿತಿ ತಂತ್ರಜ್ಞಾನ ಕಾಯ್ದೆ, 2000'ರ ಸೆಕ್ಷನ್ 66ಎ, 67, 69ಎ, 79ರ ಪ್ರಕಾರ, ಆಕ್ಷೇಪಾರ್ಹ ಸಂದೇಶಗಳನ್ನು ಕಳಿಸಿದರೆ, ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಮುದ್ರಣ ಅಥವಾ ವಿಡಿಯೋ ರೂಪದಲ್ಲಿ ಆತನ ಚಿತ್ರ/ದೃಶ್ಯವನ್ನು ಪ್ರಕಟಿಸಿದರೆ ಮೂರು ವರ್ಷಗಳ ಜೈಲುಶಿಕ್ಷೆ ಅಥವಾ 2 ಲಕ್ಷದಿಂದ 10 ಲಕ್ಷ ರು.ವರೆಗೆ ದಂಡವನ್ನು ವಿಧಿಸಲಾಗುತ್ತದೆ. ಇಷ್ಟೆಲ್ಲಾ ಅವಕಾಶಗಳಿದ್ದರೂ ಅಪರಾಧಗಳ ಸಂಖ್ಯೆ ಮಾತ್ರ ಹೆಚ್ಚುತ್ತಲೇ ಇರುವುದು ದುರದೃಷ್ಟಕರ.

ಒಬ್ಬರಿಗೊಬ್ಬರು ಹೊಂದಿಕೊಂಡು ಹೇಗೆ ಬದುಕಬೇಕು ಎಂಬುದನ್ನು ಕಲಿಯಲು ನಮಗೆ ಸಾವಿರಾರು ವರ್ಷಗಳು ಬೇಕಾದವು. ನಮ್ಮ ವಿಕೃತ ಮನಸ್ಥಿತಿಯನ್ನು ತಡೆದು ನಿಲ್ಲಿಸಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ನಿಯಮಗಳನ್ನು ರೂಪಿಸಿ ಕೊಂಡೆವು. ತಾನೊಬ್ಬ ಪ್ರಗತಿಪರ ಎಂದು ಗುರುತಿಸಿ ಕೊಳ್ಳುವ ಧಾವಂತದಲ್ಲಿ ಹೊಸ ಹೊಸ ತಂತ್ರಜ್ಞಾನಗಳನ್ನು ಸೃಷ್ಟಿಸಿದ ಮಾನವ, ಕೊನೆಕೊನೆಗೆ ತಾನು ತೋಡಿದ ಹಳ್ಳದಲ್ಲೇ ಬೀಳುವಂಥ ಪರಿಸ್ಥಿತಿಯನ್ನೂ ಹುಟ್ಟುಹಾಕಿದ್ದಾನೆ. ಈ ಹಳ್ಳದಲ್ಲಿ ಅಮಾಯಕರೂ ಬೀಳುತ್ತಿರುವುದು ವಿಷಾದನೀಯ. ಆದ್ದರಿಂದ, ಜೀವನದಲ್ಲಿ ಯಾವುದಕ್ಕೆ ಎಷ್ಟು ಆದ್ಯತೆ ನೀಡಬೇಕೆಂಬುದನ್ನು ಮೊದಲು ನಾವು ನಿರ್ಧರಿಸಬೇಕು. ಯಾರೋ ಮಾಡುವ ಋಣಾತ್ಮಕ ಟ್ರೋಲ್‌ಗಳಿಗೆ ಒಡ್ಡಿಕೊಂಡು, ಅದಕ್ಕೆ ನಮ್ಮ ಸಮಯವನ್ನೂ ವಿನಿಯೋಗಿಸುತ್ತಾ ಮತ್ತು ಅವನ್ನು ಉತ್ತೇಜಿಸುತ್ತಾ ಹೋದರೆ ಹಾಳಾಗುವುದು ನಮ್ಮ ಭವಿಷ್ಯವೇ ಎಂಬ ಎಚ್ಚರ ನಮ್ಮಲ್ಲಿರಬೇಕು.

(ಲೇಖಕರು ಶಿಕ್ಷಕರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 111

ಸಮಾಚಾರ ಸಣ್ಣದಲ್ಲ

ಅವಾಮಿ ಲೀಗ್ ವಿದ್ಯಾರ್ಥಿ ನಾಯಕ ಹಠಾತ್ ಸಾವು

ದೆಹಲಿ: ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪಕ್ಷ ಅವಾಮಿ ಲೀಗ್‌ನ ವಿದ್ಯಾರ್ಥಿ ಘಟಕದ ಮಾಜಿ ನಾಯಕ ಇಶಾಕ್ ಅಲಿ ಖಾನ್ ಪನ್ನಾ ಭಾರತಕ್ಕೆ ಬರುವಾಗ ದಿಢೀರ್ ಸಾವಿಗೀಡಾಗಿದ್ದಾರೆ. ಸಾವಿಗೆ ಹೃದಯಾಘಾತ ಕಾರಣವಾಗಿರಬಹುದು ಎಂದು ಢಾಕಾ ಟ್ರಿಬ್ಯೂನ್ ವರದಿ ಮಾಡಿದೆ. ಸಿಲ್ಹೆಟ್‌ನಲ್ಲಿನ ತಮಾಬಿಲ್ ಗಡಿ ಮೂಲಕ ಪನ್ನಾ ಭಾರತ ಪ್ರವೇಶಿಸಿದ್ದರು. ಅಲ್ಲಿ ಸಾವನ್ನಪ್ಪಿದರು ಎಂದು ಸಂಬಂಧಿಕರು ತಿಳಿಸಿದ್ದಾರೆ. ಅವಾಮಿ ಲೀಗ್ ಪಕ್ಷದ ಬಹಳಷ್ಟು ನಾಯಕರು ಜೀವಭಯದಿಂದ ತಲೆಮರೆಸಿಕೊಂಡಿದ್ದಾರೆ.

ಕಾಂಗ್ರೆಸ್‌ನ ನಾಂದೇಡ್ ಸಂಸದ ವಸಂತ್ ನಿಧನ

ಮುಂಬೈ: ಮಹಾರಾಷ್ಟ್ರದ ನಾಂದೇಡ್ ಲೋಕಸಭಾ ಕ್ಷೇತ್ರದ ಸದಸ್ಯ, ಕಾಂಗ್ರೆಸ್ ನಾಯಕ ವಸಂತ

ಚವ್ಹಾಣ್(70) ಅನಾರೋಗ್ಯದಿಂದ ಸೋಮವಾರ ಹೈದರಾಬಾದ್‌ನಲ್ಲಿ ನಿಧನರಾದರು. ವಸಂತ್ ಅವರ ಅಂತ್ಯಕ್ರಿಯೆ ನಾಂದೇಡ್‌ನಲ್ಲಿ ನಡೆಯಲಿದೆ ಎಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ತಿಳಿಸಿದೆ. ವಂಸತ್ ಅವರ ನಿಧನದಿಂದಾಗಿ ಲೋಕಸಭೆಯಲ್ಲಿನ ಕಾಂಗ್ರೆಸ್ ಸದಸ್ಯ ಬಲ 98ಕ್ಕೆ ಇಳಿಕೆಯಾಗಿದೆ.

ಉತ್ತರ ಕೊರಿಯದಿಂದ ಆತ್ಮಾಹುತಿ ದಾಳಿ ಡ್ರೋನ್

ಸೋಲ್: ವಿಕ್ಷಿಪ್ತ ಚಿಂತನೆ, ಕ್ರಮಗಳಿಂದಲೇ ಗಮನ ಸೆಳೆಯುವ ಉತ್ತರ ಕೊರಿಯದ ಅಧ್ಯಕ್ಷ ಕಿಮ್ ಜಾಂಗ್ ಉನ್, ಇದೀಗ ಹೊಸ ವಿನಾಶಕಾರಿ ಅಸ್ತ್ರ

ವಾಗಿ 'ಆತ್ಮಾಹುತಿ ದಾಳಿ ಡ್ರೋನ್' ಪರಿಚಯಿಸಿದ್ದಾರೆ. ಈ ಡ್ರೋನ್ ಅಭಿವೃದ್ಧಿಗೆ ಅಗತ್ಯವಾದ ತಂತ್ರ ಜ್ಞಾನವನ್ನು ರಷ್ಯಾದಿಂದ ಪಡೆದಿರಬಹುದು ಎಂದು ಅಂದಾಜು ಮಾಡ ಲಾಗಿದೆ. ಕ್ಷಿಪಣಿಗಳು, ರಾಕೆಟ್‌ಗಳನ್ನು ಹೊತ್ತೊಯ್ದು ನಿಗದಿತ ಗುರಿ ತಲುಪಿ ಶತ್ರು ನೆಲೆ ಮೇಲೆ ನಿಖರವಾಗಿ ದಾಳಿ ನಡೆಸಬಲ್ಲ ವಿನಾಶಕಾರಿ ಡ್ರೋನ್‌ನ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿದ್ದನ್ನು ಕಂಡು ಸಂತಸ ವ್ಯಕ್ತಪಡಿಸಿದ ಕಿಮ್, ಈ ಬಗೆಯ ವಿನಾಶಕ ಡ್ರೋನ್‌ಗಳು ಸೇನೆಗೆ ಅವಶ್ಯಕ. ಕೃತಕ ಬುದ್ಧಿ ಅಳವಡಿಸಿಕೊಂಡಿರುವ ಈ ಬಗೆಯ ಡ್ರೋನ್‌ಗಳು ಹೆಚ್ಚು ಹೆಚ್ಚು ಬೇಕಿದೆ. ಹಾಗಾಗಿ ಇಂಥದೇ ಇನ್ನಷ್ಟು ಡ್ರೋನ್‌ಗಳನ್ನು ತಯಾರಿಸುವಂತೆ ರಕ್ಷಣಾ ಪಡೆ ಮುಖ್ಯಸ್ಥರಿಗೆ ಆದೇಶಿಸಿದ್ದಾರೆ ಎಂದು ವರದಿಯಾಗಿದೆ.

25,000 ಅಂಕ ದಾಟಿದ ಎನ್‌ಎಸ್‌ಇ 'ನಿಫ್ಟಿ 50'

ಮುಂಬೈ; ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ(ಎನ್‌ಎಸ್‌ಇ) ನಿಫ್ಟಿ-50 ಸೂಚ್ಯಂಕ ಸೋಮವಾರದ ವಹಿವಾಟಿನಲ್ಲಿ 25 ಸಾವಿರ ಅಂಕಗಳನ್ನು ಮೀರಿ ಮುನ್ನಡೆಯಿತು. ದಿನದ ವಹಿವಾಟಿನಲ್ಲಿ 187.45 ಅಂಕಗಳನ್ನು ಗಳಿಸಿಕೊಂಡ 'ನಿಫ್ಟಿ 50' ದಿನದ ಕೊನೆಗೆ 25,010.60 ಅಂಕಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. 24,906 ಅಂಕಗಳಲ್ಲಿ ವಹಿವಾಟು ಆರಂಭಿಸಿದ ನಿಫ್ಟಿ, ಒಂದು ಹಂತದಲ್ಲಿ ಗರಿಷ್ಠ 25,043 ಅಂಕಗಳವರೆಗೂ ಏರಿಕೆ ಕಂಡಿತ್ತು.

ಭಾರತೀಯ ವೈದ್ಯ ಅಮೆರಿಕದಲ್ಲಿ ಹತ್ಯೆ

ಟಸ್ಕಲೂಸಾ: ಅಮೆರಿಕದ ಟಸ್ಕಲೂಸಾ ನಗರದಲ್ಲಿ ಭಾರತೀಯ ಮೂಲದ ಖ್ಯಾತ ವೈದ್ಯರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಅಮೆರಿಕದ ಹಲವು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ಡಾ.ರಮೇಶ

ಪೆರಮಶೆಟ್ಟಿ ಮೃತರು. ಕೊಲೆಗೆ ಕಾರಣವೇನು ಎಂಬುದು ಪೊಲೀಸ್ ತನಿಖೆಯಿಂದಷ್ಟೇ ತಿಳಿಯಬೇಕಿದೆ ಎಂದು ಆಪ್ತರು ತಿಳಿಸಿದ್ದಾರೆ. ಆಂಧ್ರಪ್ರದೇಶದ ತಿರುಪತಿ ಜಿಲ್ಲೆಯ ಪೆರಮಶೆಟ್ಟಿ ಹಲವು ವರ್ಷಗಳಿಂದ ಅಮೆರಿಕದಲ್ಲಿ ನೆಲೆಸಿದ್ದರು. ಅಲ್ಲಿನ 'ಕ್ರಿಮ್ಸನ್ ಕೇರ್ ನೆಟ್‌ವರ್ಕ್'ನ ಸಂಸ್ಥಾಪಕ ಮತ್ತು ವೈದ್ಯಕೀಯ ನಿರ್ದೇಶಕರಾಗಿದ್ದರು. ಪೆರಮಶೆಟ್ಟಿ ತಾವು ಬಾಲ್ಯದಲ್ಲಿ ವ್ಯಾಸಂಗ ಮಾಡಿದ ಆಂಧ್ರಪ್ರದೇಶದ ಮೆಣಕೂರು ಪ್ರೌಢಶಾಲೆಗೆ 14 ಲಕ್ಷ ರು. ದೇಣಿಗೆ ನೀಡಿದ್ದರು ಎಂದು ತಿಳಿದುಬಂದಿದೆ.

{ **ಕಂಗನಾ ರಣಾವತ್** } ನಟಿ-ಬಿಜೆಪಿ ಸಂಸದೆ

ಒಂದೊಮ್ಮೆ ಕೇಂದ್ರದ ಮೋದಿ ಸರಕಾರ ಬಲಿಷ್ಠವಾಗಿರದೇ ಇದ್ದರೆ ಭಾರತದಲ್ಲೂ ಬಾಂಗ್ಲಾದೇಶದಲ್ಲಿನದೇ ಪರಿಸ್ಥಿತಿ ಉಂಟಾಗುತ್ತಿತ್ತು. ರೈತರ ಚಳವಳಿ ನಿಯಂತ್ರಿಸಲು ಕೇಂದ್ರ ಸರಕಾರ ಕಠಿಣ ಕ್ರಮಗಳನ್ನು ತೆಗೆದುಕೊಂಡಿದೆ. ಇಲ್ಲದೇ ಹೋಗಿದ್ದರೆ ಇಂದು ಚಳವಳಿ ದೇಶದಲ್ಲಿ ಬಾಂಗ್ಲಾದೇಶದ ಪರಿಸ್ಥಿತಿ ಸೃಷ್ಟಿಸುತ್ತಿತ್ತು. ರೈತರ ಪ್ರತಿಭಟನೆಗೆ ವಿದೇಶಿ ಶಕ್ತಿಗಳೇ ಕಾರಣ.

ಜ.ಕಾಶ್ಮೀರ ಚುನಾವಣೆ ಕಾವು

15 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟಿಸಿದ ಕಮಲ ಪಾಳಯ

ಶ್ರೀನಗರ: ಭಯೋತ್ಪಾದನೆ ಚಟುವಟಿಕೆಗಳು ತಗ್ಗಿರುವ, ಅಭಿವೃದ್ಧಿ ಮಂತ್ರ ಕೇಳಿಬರುತ್ತಿರುವ ಜಮ್ಮು-ಕಾಶ್ಮೀರದಲ್ಲಿ 10 ವರ್ಷಗಳ ಬಳಿಕ, ಕೇಂದ್ರಾಡಳಿತ ಪ್ರದೇಶವಾಗಿ ಬದಲಾದ 5 ವರ್ಷಗಳ ನಂತರ ಕಡೆಗೂ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ವರ್ಷದ ಬಹುತೇಕ ಸಮಯ ಹಿಮಪಾತ, ಶೀತ ವಾತಾವರಣವನ್ನೇ ಕಾಣುವ ಹಿಮಾಲಯದ ತಪ್ಪಲಿನ ಕಣಿವೆ ರಾಜ್ಯದಲ್ಲೀಗ ಚುನಾವಣೆ ಕಾವು ಶುರುವಾಗಿದೆ.

- **ಒಟ್ಟು 16 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಬಿಜೆಪಿ**
- **10 ವರ್ಷಗಳ ಬಳಿಕ ವಿಧಾನಸಭೆ ಚುನಾವಣೆ**
- **3 ಹಂತಗಳಲ್ಲಿ ಮತದಾನ-ಅ.4ಕ್ಕೆ ಫಲಿತಾಂಶ**

ಜಮ್ಮು-ಕಾಶ್ಮೀರ ವಿಧಾನಸಭೆಯ 90 ಕ್ಷೇತ್ರಗಳಿಗೆ 3 ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಚುನಾವಣಾ ಸಮಿತಿ ಸಭೆ ನಡೆಸಿದ ಬಿಜೆಪಿ 15 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಮಧ್ಯಾಹ್ನ ಪ್ರಕಟಿಸಿದೆ.

ಈ ಪಟ್ಟಿಯಲ್ಲಿ ಕಾಶ್ಮೀರದ ಪಾಂಪೋರ್, ಶೋಪಿಯಾನ್, ಅನಂತನಾಗ್ ಮತ್ತು ಅನಂತನಾಗ್ ಪಶ್ಚಿಮ ಕ್ಷೇತ್ರಗಳು ಸೇರಿದಂತೆ ಮೊದಲ ಹಂತದ

ಚುನಾವಣೆ ನಡೆಯುವ ಕ್ಷೇತ್ರ ಗಳಲ್ಲಿ 15 ಕ್ಷೇತ್ರ ಗಳಿಗಷ್ಟೇ ಅಭ್ಯರ್ಥಿಗಳನ್ನು ಆಖೈರು ಗೊಳಿಸಲಾಗಿದೆ. ಬಿಜೆಪಿ ಕೇಂದ್ರೀಯ ಚುನಾವಣಾ ಸಮಿತಿ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಭಾನುವಾರ ಸಂಜೆ ಸಭೆ ನಡೆಸಿ ಅಭ್ಯರ್ಥಿ ಪಟ್ಟಿ ಸಿದ್ಧಪಡಿಸಿದೆ. ಸಭೆಯಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಹಿರಿಯ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ ಮತ್ತಿತರರಿದ್ದರು. ಈ ಮೊದಲು 2ನೇ ಹಂತದ ಚುನಾವಣೆ ನಡೆಯುವ 10 ಮತ್ತು 3ನೇ ಹಂತದಲ್ಲಿನ 19 ಕ್ಷೇತ್ರಗಳ(ಒಟ್ಟು 44) ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಬೆಳಗ್ಗೆ ಬಿಡುಗಡೆ ಮಾಡಿತ್ತು. ಅಚ್ಚರಿ ಎಂಬಂತೆ ಮರುಕ್ಷಣವೇ ಹಿಂಪಡೆದಿತ್ತು.

ರದ್ದಾದ ಪಟ್ಟಿಯಲ್ಲಿ: ಜಾಲತಾಣದಲ್ಲಿ ಅಭ್ಯರ್ಥಿ ಪಟ್ಟಿ ಹಂಚಿಕೊಂಡಿದ್ದ ಬಿಜೆಪಿ, ಬಳಿಕ ಡಿಲಿಟ್ ಮಾಡಿದೆ. ಬೆಳಗ್ಗೆ ಪ್ರಕಟಿಸಿದ್ದ ಅಭ್ಯರ್ಥಿ ಪಟ್ಟಿಯಲ್ಲಿ 3 ಪ್ರಮುಖ ಹೆಸರುಗಳು ಇರಲಿಲ್ಲ. ಜಮ್ಮು-ಕಾಶ್ಮೀರ ಬಿಜೆಪಿ ಅಧ್ಯಕ್ಷ ರವೀಂದರ್ ರೈನಾ, ಮಾಜಿ ಡಿಸಿಎಂ ನಿರ್ಮಲ್ ಸಿಂಗ್ ಮತ್ತು ಕವಿಂದರ್ ಗುಪ್ತಾ ಹೆಸರು ಪಟ್ಟಿಯಲ್ಲಿರಲಿಲ್ಲ.

ಬದಲಾಗಿ ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರ ಸೋದರ ದೇವೇಂದ್ರ ರಾಣಾ ಹೆಸರಿತ್ತು. ನ್ಯಾಷನಲ್ ಕಾನ್ಫರೆನ್ ಪಕ್ಷದಲ್ಲಿದ್ದ ಅವರು ಬಳಿಕ ಬಿಜೆಪಿ ಸೇರಿದ್ದರು. ಇಬ್ಬರು ಕಾಶ್ಮೀರಿ ಪಂಡಿತರು ಮತ್ತು 14 ಮುಸ್ಲಿಂ ಅಭ್ಯರ್ಥಿಗಳ ಹೆಸರಿತ್ತು. ಬಿಜೆಪಿಗೆ ಸೇರ್ಪಡೆಗೊಂಡಿದ್ದ ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ ಮತ್ತು ಪ್ಯಾಂಥರ್ಸ್ ಪಾರ್ಟಿ ಮಾಜಿ ನಾಯಕರ ಹೆಸರುಗಳೂ ಇದ್ದವು.

ಸೆ.19-25 ಮತ್ತು ಅ.1ರಂದು ಮೂರು ಹಂತಗಳಲ್ಲಿ ಮತದಾನ ನಡೆಯಲಿದ್ದು, ಅ.4ರಂದು ಫಲಿತಾಂಶ ಪ್ರಕಟವಾಗಲಿದೆ. 2019ರಲ್ಲಿ ವಿಧಿ 370 ರದ್ದುಗೊಂಡು ರಾಜ್ಯದ ಬದಲಾಗಿ ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತನೆ ಆಗಿತ್ತು. ಆ ಬಳಿಕ ಈಗಷ್ಟೇ ಚುನಾವಣೆ ನಡೆಯುತ್ತಿದೆ. ವಿಧಾನಸಭಾ ಚುನಾವಣೆ ಈ ಮೊದಲು 2014ರಲ್ಲಿ ನಡೆದಿತ್ತು. ಆಗ ಬಿಜೆಪಿ 25, ಪಿಡಿಪಿ 28, ಎನ್‌ಸಿ 15, ಕಾಂಗ್ರೆಸ್ 12 ಸ್ಥಾನಗಳನ್ನು ಗೆದ್ದಿದ್ದವು.

ಕಾಂಗ್ರೆಸ್-ಎನ್‌ಸಿ ಮೈತ್ರಿ ಪ್ರಕ್ರಿಯೆ

10 ವರ್ಷಗಳ ಬಳಿಕ ನಡೆಯುತ್ತಿರುವ ಜಮ್ಮು-ಕಾಶ್ಮೀರ ಚುನಾವಣೆಗೆ ಎಲ್ಲಾ ರಾಜಕೀಯ ಪಕ್ಷಗಳೂ ಭರದಿಂದ ಸಿದ್ಧತೆ ಮಾಡಿಕೊಳ್ಳುತ್ತಿವೆ. ದೇಶದ ಅತಿ ಹಳೆಯ ಪಕ್ಷ ಕಾಂಗ್ರೆಸ್, ಅಪ್ಪ-ಮಗನ ಪಕ್ಷವಾದ ಫಾರೂಖ್ ಅಬ್ದುಲ್ಲಾ -ಓಮರ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್(ಎನ್‌ಸಿ) ಪಕ್ಷದ ಜತೆ ಸೀಟು ಹಂಚಿಕೆ ಚರ್ಚೆ ನಡೆಸುತ್ತಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರೇ ಮುಂದಾಗಿ ಎನ್‌ಸಿ ಪಕ್ಷದ ನಾಯಕರ ಜತೆ ಚರ್ಚೆ ನಡೆಸಿದ್ದಾರೆ. ಸೀಟು ಹಂಚಿಕೆ ಪ್ರಕ್ರಿಯೆ ಇನ್ನೂ ಚರ್ಚೆಯಲ್ಲಿದೆ. ಇನ್ನೊಂದೆಡೆ, ಪಿಡಿಪಿ ಪಕ್ಷ ಏಕಾಂಗಿಯಾಗಿದೆ. ಪಕ್ಷದ ನಾಯಕಿ ಮೆಹಬೂಬಾ ಮುಫ್ತಿ ಭಾನುವಾರ ಪಕ್ಷದ ಚುನಾವಣಾ ಪ್ರಣಾಳಿಕೆ ಪ್ರಕಟಿಸಿದ್ದಾರೆ. ಅದನ್ನು 'ಎನ್‌ಸಿ' ಪ್ರಣಾಳಿಕೆಯ ನಕಲು ಎಂದು ಓಮರ್ ಅಬ್ದುಲ್ಲಾ ಟೀಕಿಸಿದ್ದಾರೆ.

2014ರ ಚುನಾವಣೆ	
ಬಿಜೆಪಿ	25
ಪಿಡಿಪಿ	28
ಎನ್‌ಸಿ	15
ಕಾಂಗ್ರೆಸ್	12
ಜೆಕೆಪಿಸಿ	02
ಸಿಪಿಐಎಂ	01
ಪಿಡಿಎಫ್	01
ಪಕ್ಷೇತರ	03
ಒಟ್ಟು	87

ಮುಖ್ಯಾಂಶಗಳು

- 44 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿ ಹಿಂಪಡೆದ ಬಿಜೆಪಿ
- ಗಂಟೆಗಳ ಬಳಿಕ 15 ಅಭ್ಯರ್ಥಿಗಳ ಮೊದಲ ಪಟ್ಟಿ
- ಮತ್ತೊಮ್ಮೆ ಒಬ್ಬರ ಹೆಸರಷ್ಟೇ ಇರುವ 2ನೇ ಪಟ್ಟಿ
- ವರಿಷ್ಠರ ಕ್ರಮ ಖಂಡಿಸಿ ರಾಜ್ಯ ಘಟಕ ಪ್ರತಿಭಟನೆ
- ಕಾಂಗ್ರೆಸ್-ನ್ಯಾಷನಲ್ ಕಾನ್ಫರೆನ್ಸ್ ಸೀಟು ಹಂಚಿಕೆ?
- ಮೆಹಬೂಬಾ ಮುಫ್ತಿ ಪಿಡಿಪಿ ಏಕಾಂಗಿ ಹೋರಾಟ
- ಸಿಖ್ ಸಮುದಾಯದಿಂದ 3 ಕ್ಷೇತ್ರಗಳಲ್ಲಿ ಸ್ಪರ್ಧೆ

ಸೋಮವಾರ ಬೆಳಗ್ಗೆ ಒಟ್ಟು 44 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿ ಮರುಕ್ಷಣವೇ ವಾಪಸ್ ತೆಗೆದುಕೊಂಡ ವರಿಷ್ಠರ ಕ್ರಮ ಖಂಡಿಸಿ ಬಿಜೆಪಿ ಜಮ್ಮು-ಕಾಶ್ಮೀರ ಘಟಕದ ನಾಯಕರು ಮತ್ತು ಕಾರ್ಯಕರ್ತರು ರಾಜ್ಯ ಘಟಕ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು. ಇದು ಜಮ್ಮು-ಕಾಶ್ಮೀರ ಚುನಾವಣೆಗೂ ಮೊದಲೇ ಬಿಜೆಪಿಗೆ ತಲೆ ಬಿಸಿ ತಂದಿದೆ.

ಒಬ್ಬರದೇ ಹೆಸರು!

ಕಾಶ್ಮೀರ ಚುನಾವಣೆಗೆ ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಬಿಜೆಪಿ ಸೋಮವಾರ ಮಧ್ಯಾಹ್ನದ ವೇಳೆಗೆ ಪ್ರಕಟಿಸಿದೆ. ಅಚ್ಚರಿ ಎಂದರೆ ಅದರಲ್ಲಿ ಒಬ್ಬ ಅಭ್ಯರ್ಥಿಯ ಹೆಸರಷ್ಟೇ ಇದೆ! ಕೋಂಕೆರ್‌ನಾಗ್ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಚೌಧರಿ ರೋಷನ್ ಹುಸೇನ್ ಗುಜ್ಜಾರ್ ಹೆಸರನ್ನು ಬಿಜೆಪಿ 2ನೇ ಪಟ್ಟಿಯಲ್ಲಿ ಪ್ರಕಟಿಸಿದೆ.

ಕಾಶ್ಮೀರಕ್ಕೆ ಬಿಜೆಪಿ ಸ್ಟಾರ್ ಪ್ರಚಾರಕರು

ಜಮ್ಮು-ಕಾಶ್ಮೀರ ಚುನಾವಣೆಗೆ ಬಿಜೆಪಿ ಸ್ಟಾರ್ ಪ್ರಚಾರಕರ ಪಟ್ಟಿ ಪ್ರಕಟಿಸಿದೆ. ಪ್ರಧಾನ ಪ್ರಚಾರಕರಾಗಿ ಪ್ರಧಾನಿ ನರೇಂದ್ರ ಮೋದಿ ಹೆಸರಿದೆ. ನಂತರ ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ ಮತ್ತು ಜೆ.ಪಿ.ನಡ್ಡಾ ಹಾಗೂ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ಮುಖ್ಯಮಂತ್ರಿಗಳಾದ ಯೋಗಿ ಆದಿತ್ಯನಾಥ್, ಭಜನ್‌ಲಾಲ್ ಶರ್ಮಾ ಮತ್ತು ಜೈರಾಮ್ ಠಾಕೂರ್ ಹೆಸರುಗಳಿವೆ. ಅಲ್ಲದೇ, ಇತ್ತೀಚೆಗೆ ಜಮ್ಮು-ಕಾಶ್ಮೀರ ಚುನಾವಣಾ ಉಸ್ತುವಾರಿಯಾಗಿ ನೇಮಕವಾದ ರಾಮ್ ಮಾಧವ್, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಕಾಶ್ಮೀರ ಉಸ್ತುವಾರಿ ತರುಣ್ ಚುಗ್, ಬಿಜೆಪಿ ಜಮ್ಮು-ಕಾಶ್ಮೀರ ಘಟಕ ಮುಖ್ಯಸ್ಥ ರವೀಂದರ್ ರೈನಾ, ಜುಗಲ್ ಕಿಶೋರ್ ಶರ್ಮಾ, ರಾಜ್ಯಸಭಾ ಸದಸ್ಯ ಗುಲಾಮ್ ಅಲಿ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಅಶೋಕ್ ಕೌಲ್ ಮತ್ತು ಜಮ್ಮು-ಕಾಶ್ಮೀರ ಬಿಜೆಪಿ ಉಪಾಧ್ಯಕ್ಷ ಸೋಫಿ ಯೂಸುಫ್ ಹೆಸರುಗಳೂ ಇವೆ.

ಪ್ರಯಾಣಿಕರ ಜೇಬಿಗೆ ಏರ್‌ಲೈನ್ಸ್ ಕತ್ತರಿ!

ದೆಹಲಿ: ಹಬ್ಬಗಳ ಸಾಲು ಬರುತ್ತಿದ್ದಂತೆಯೇ ವಿಮಾನಯಾನ ಸಂಸ್ಥೆಗಳು ಟಿಕೆಟ್ ದರ ಏರಿಸಿವೆ. ಹಬ್ಬಕ್ಕೆ ಊರಿಗೆ ಹೋಗಬೇಕೆಂದರೆ ಭಾರಿ ಮೊತ್ತ ನೀಡಿ ವಿಮಾನ ಟಿಕೆಟ್ ಖರೀದಿಸಬೇಕಿದೆ. ಬೇಡಿಕೆ ಹೆಚ್ಚಿದರೆ ವಿಮಾನ ಟಿಕೆಟ್ ದರ ಮತ್ತು ಶುಲ್ಕ ಹೆಚ್ಚಲಿವೆ. ಹಬ್ಬದ ಸಂಭ್ರಮಕ್ಕಾಗಿ ಊರಿಗೆ ಹೊರಟರೆ ಜೇಬಿಗೆ ಏರ್‌ಲೈನ್ಸ್‌ನಿಂದ ದೊಡ್ಡ ಕತ್ತರಿ ಬೀಳುತ್ತಿದೆ.

ಕಳೆದ ಹಬ್ಬದ ಸೀಸನ್‌ಗೆ ಹೋಲಿಸಿದರೆ ವಿಮಾನ ಟಿಕೆಟ್ ದರ ಈ ಬಾರಿ ಶೇ.20-30 ರಷ್ಟು ಹೆಚ್ಚಿದೆ. ಪ್ರಯಾಣಿಕರು ಕಡಿಮೆ ಇರುವ ಮಾರ್ಗ 'ಡಿಸ್ಕೌಂಟ್ ಆಫರ್' ಇವೆ. ಈಗಾಗಲೇ ದೇಶೀ ವಿಮಾನ ಟಿಕೆಟ್ ದರ ಏರಿಕೆಯಾಗಿದೆ. ದೀಪಾವಳಿಗೆ ಶೇ.10-15, ಓಣಂ ವೇಳೆ ಶೇ.20-25ರಷ್ಟು ಏರಿಕೆ ಖಚಿತ. ವಿಮಾನ ಟಿಕೆಟ್‌ನ ಮೂಲ ದರದ ಜತೆಗೇ ಹೆಚ್ಚುವರಿ ಶುಲ್ಕ ಎಂಬ ಬರೆಯೂ ಬೀಳುತ್ತದೆ.

ಕ್ಯೂಟ್ ಶುಲ್ಕ: ವಿಮಾನ ನಿಲ್ದಾಣದ ಟರ್ಮಿನಲ್‌ನಲ್ಲಿ ಬಳಸಲಾಗುವ ಮೆಟಲ್ ಡಿಟೆಕ್ಟರ್, ಎಸ್ಕಲೇಟರ್ಸ್ ಸೇರಿ ಹಲವು ಉಪಕರಣಗಳನ್ನು ಬಳಸಿದ್ದಕ್ಕೆ ಪ್ರಯಾಣಿಕರಿಗೆ 'ಕ್ಯೂಟ್ ಶುಲ್ಕ' (ಕಾಮನ್ ಯೂಸರ್ ಟರ್ಮಿನಲ್ ಇಕ್ವಿಪ್‌ಮೆಂಟ್) ವಿಧಿಸಲಾಗುತ್ತದೆ. ಪ್ರತಿ ಪ್ರಯಾಣಿಕರು 50-100 ರು. ರವರೆಗೂ ಪಾವತಿಸಬೇಕಾಗುತ್ತದೆ. ಇಂಧನ ಶುಲ್ಕವೂ ಟಿಕೆಟ್‌ಗೆ ಸೇರುತ್ತದೆ.

ವಿಮಾನ ನಿಲ್ದಾಣಕ್ಕೆ ಭದ್ರತೆ ಒದಗಿಸುವ ಕೇಂದ್ರೀಯ ಕೈಗಾರಿಕಾ ಭದ್ರತಾ ದಳ (ಸಿಐಎಸ್‌ಎಫ್)ಕ್ಕೆ ಪಾವತಿಸುವ ಮೊತ್ತವನ್ನು ಪ್ರಯಾಣಿಕರಿಂದಲೇ ವಸೂಲಿ ಮಾಡಲಾಗುತ್ತದೆ. ಇದಕ್ಕೆ ಪ್ರತಿ ಪ್ರಯಾಣಿಕರಿಗೆ 236 ರು. ತಗಲುತ್ತದೆ. ಈ ಎಲ್ಲಾ ಹೆಚ್ಚುವರಿ ಶುಲ್ಕಗಳು ಟಿಕೆಟ್ ದರದ ಮೂಲ ಮೊತ್ತದ ಜತೆ ಸೇರುತ್ತವೆ. ಹೀಗಾಗಿ ವಿಮಾನ ಟಿಕೆಟ್ ದರ ಉದಾ: 8 ಸಾವಿರ ರು. ಇದ್ದರೆ ಅದಕ್ಕೆ ಹೆಚ್ಚುವರಿ ಶುಲ್ಕಗಳೆಯದ 2 ಸಾವಿರ ರು. ಸೇರಿ ಒಟ್ಟಾರೆ ಟಿಕೆಟ್ ಮೊತ್ತ ರು. 10 ಸಾವಿರಕ್ಕೇರುತ್ತದೆ.

ಅ.30-ನ.5ರ ನಡುವಿನ ಅವಧಿ ದರ ಏರಿಕೆ

ಪ್ರಮುಖ ಮಾರ್ಗ	ಟಿಕೆಟ್ ದರ (ರು.)	ಹೆಚ್ಚಳ ಪ್ರಮಾಣ
ದೆಹಲಿ- ಚೆನ್ನೈ	7,618	25%
ಮುಂಬೈ-ಹೈದರಾಬಾದ್	5,162	21%
ದೆಹಲಿ-ಗೋವಾ	5,999	19%
ದೆಹಲಿ-ಅಹಮದಾಬಾದ್	4,930	19%

ವಿಮಾನ ಟಿಕೆಟ್ ದರ ಇಳಿಕೆ!

ಮುಂಬೈ-ಅಹಮದಾಬಾದ್	2,508	27%
ಮುಂಬೈ-ಉದಯಪುರ	4,890	25%
ಬೆಂಗಳೂರು-ಹೈದರಾಬಾದ್	3,383	23%
ಮುಂಬೈ-ಜಮ್ಮು	7,826	21%

ಹೆಚ್ಚುವರಿ ಶುಲ್ಕ ಎಂಬ ಬರೆ!

ವಿಮಾನ ಟಿಕೆಟ್ ದರದಲ್ಲಿ ಸರಕಾರಕ್ಕೆ ನೀಡುವ ಹಣ, ಏರ್‌ಪೋರ್ಟ್ ನಿರ್ವಾಹಕರ ಶುಲ್ಕ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ನೀಡುವ ಶುಲ್ಕ, ಏರ್‌ಲೈನ್ ಕಂಪೋನೆಂಟ್ ಶುಲ್ಕಗಳೆಲ್ಲಾ ಇರುತ್ತವೆ. ವಿಮಾನ ನಿಲ್ದಾಣ ಅಭಿವೃದ್ಧಿ ಹೆಸರಲ್ಲಿ ಶುಲ್ಕ ವಿಧಿಸಲಾಗುತ್ತದೆ. ದೆಹಲಿ ವಿಮಾನ ನಿಲ್ದಾಣಕ್ಕೆ 63 ರು., ಮುಂಬೈ ಏರ್‌ಪೋರ್ಟ್‌ಗೆ 142 ರು. ಶುಲ್ಕವಿದೆ. ನಿಲ್ದಾಣದ ಗಾತ್ರದ ಮೇಲೆ ಈ ಶುಲ್ಕ ನಿರ್ಧಾರ. ಕೆಲ ವಿಮಾನ ನಿಲ್ದಾಣಗಳು ಸೇವಾ ಶುಲ್ಕವನ್ನೂ ಸಂಗ್ರಹಿಸುತ್ತವೆ. ಕೊಚ್ಚಿ, ದೆಹಲಿ, ಬೆಂಗ ಳೂರು ವಿಮಾನ ನಿಲ್ದಾಣದಲ್ಲಿ ಈ ಶುಲ್ಕ ಕನಿಷ್ಠ 83 ರು.ನಿಂದ ಗರಿಷ್ಠ 236 ರು.ವರೆಗೆ ಇದೆ.

ಓಣಂ ವೇಳೆ ಹೆಚ್ಚಿದ ಬೇಡಿಕೆ

ಈ ಬಾರಿ ಓಣಂ ಹಬ್ಬಕ್ಕೆ ಕೇರಳಕ್ಕೆ ತೆರಳುವವರ ಸಂಖ್ಯೆ ಹೆಚ್ಚಾಗಿದ್ದು ವಿಮಾನ ಟಿಕೆಟ್ ದರವೂ ಬೇಡಿಕೆಗೆ ತಕ್ಕಂತೆ ಏರಿದೆ. ಸೆ.6ರಿಂದ 15ರ ನಡುವೆ ಹೈದರಾಬಾದ್ -ತಿರುವನಂತಪುರಂ (ತಡೆರಹಿತ) ವಿಮಾನ ಪ್ರಯಾಣ ಟಿಕೆಟ್ ದರ ಶೇ.30 ಏರಿದೆ. ಟಿಕೆಟ್ ದರ 4102 ರು.ಗಳಷ್ಟಿದೆ. ದುರ್ಗಾ ಪೂಜೆಗೆ ಪಶ್ಚಿಮ ಬಂಗಾಳಕ್ಕೆ ತೆರಳುವವರಿಗೂ ಬರೆ ಬೀಳುತ್ತಿದೆ. ಮುಂಬೈ-ಕೋಲ್ಕತ್ತ ಮಾರ್ಗದ ವಿಮಾನ ಟಿಕೆಟ್ ದರ 4448 ರು. ಗಳಷ್ಟಿದೆ. ಕೊಚ್ಚಿ, ತಿರುವನಂತ ಪುರಂ, ಕೋಲ್ಕತ್ತ ಮತ್ತಿತರ ಪ್ರಮುಖ ಮಾರ್ಗಗಳ ವಿಮಾನ ಟಿಕೆಟ್ ದರ ಶೇ.20-25ರಷ್ಟು ಹೆಚ್ಚಿದೆ ಎಂದು 'ಐಕ್ಸಿಗೊ ಗ್ರೂ' ಸಿಇಒ ರಜನೀಶ್ ಕುಮಾರ್ ಮಾಹಿತಿ ನೀಡಿದ್ದಾರೆ.

ಬಲೂಚಿಸ್ತಾನದಲ್ಲಿ ಉಗ್ರ ದಾಳಿಗೆ 33 ಜೀವಹರಣ

ಒಂದೇ ದಿನ 2 ಜಿಲ್ಲೆಗಳಲ್ಲಿ ಬಿಎಲ್‌ಎ ಉಗ್ರರ ದಾಳಿ

ಬಲೂಚಿಸ್ತಾನ: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಭಯೋತ್ಪಾದನೆ ಹೆಚ್ಚುತ್ತಲೇ ಇದೆ. ಬಲೂಚಿಸ್ತಾನದ ಮುಸಾಖೇಲ್ ಜಿಲ್ಲೆಯಲ್ಲಿ ಸೋಮವಾರ ಬಸ್ ತಡೆದು ನಿಲ್ಲಿಸಿದ ಉಗ್ರರು, ಗುರುತಿನ ಚೀಟಿ ತಪಾಸಣೆಗೆ ಪ್ರಯಾಣಿಕರನ್ನು ಬಸ್ಸಿನಿಂದ ಕೆಳಗಿಳಿಸಿ 23 ಪ್ರಯಾಣಿಕರಿಗೆ ಗುಂಡಿಕ್ಕಿದ್ದಾರೆ. ಮತ್ತೊಂದೆಡೆ, ನಡೆದ ದಾಳಿಯಲ್ಲಿ 16 ನಾಗರಿಕರು ಹತರಾಗಿದ್ದಾರೆ. ಒಂದೇ ದಿನದಲ್ಲಿ ಬಲೂಚಿಸ್ತಾನದ 2 ಕಡೆ ನಡೆದ ಉಗ್ರ ದಾಳಿಗಳಲ್ಲಿ ಒಟ್ಟು 33 ಜನರ ಹತ್ಯೆಯಾಗಿದೆ.

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಿಂದ ಯಾತ್ರೆ ಹೊರಟಿದ್ದವರ ಬಸ್ ತಡೆದ ಉಗ್ರರು, ಎಲ್ಲರ ಗುರುತಿನ ಚೀಟಿ ಪರಿಶೀಲಿಸಿ ಬಳಿಕ ಪಂಜಾಬ್ ಪ್ರಾಂತ್ಯದ 23 ಜನರನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿದ್ದಾರೆ. ಸಾಮೂಹಿಕ ಹತ್ಯೆಯ ನಂತರ, ಉಗ್ರರು ಸ್ಥಳದಿಂದ ಹೊರಡುವ ಮೊದಲು ರಸ್ತೆಯಲ್ಲಿ ತಾವೇ ತಡೆದು ನಿಲ್ಲಿಸಿದ್ದ ಹತ್ತು ವಾಹನಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾರೆ.

ಬಲೂಚಿಸ್ತಾನದ ಮತ್ತೊಂದೆಡೆ ಕಲಾತ್ ಜಿಲ್ಲೆಯಲ್ಲಿ ಬಂದೂಕುದಾರಿ ಉಗ್ರರು 10 ಜನರಿಗೆ ಗುಂಡಿಕ್ಕಿದ್ದಾರೆ. ಎರಡೂ ದಾಳಿಯನ್ನು ತಾನೇ ನಡೆಸಿದ್ದಾಗಿ ಬಲೂಚ್ ಲಿಬರೇಷನ್ ಆರ್ಮಿ (ಬಿಎಲ್‌ಎ) ಹೇಳಿಕೊಂಡಿದೆ. ಇದೊಂದು ಭಯೋತ್ಪಾದಕ ಕೃತ್ಯ ಎಂದು ಖಂಡಿಸಿರುವ ಬಲೂಚಿಸ್ತಾನ ಸಿಎಂ ಸರ್ಫರಾಜ್ ಬುಗ್ತಿ, ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇಂದು ಜನಾಂಗೀಯ ನಾಶ ಯತ್ನದ ಭಾಗವಾಗಿದೆ. ಪಂಜಾಬ್ ಪ್ರಾಂತ್ಯ ದವರನ್ನೇ ಗುರುತಿಸಿ ಕೊಲ್ಲಲಾಗಿದೆ. ಮೃತರಲ್ಲಿ ಕೆಲವರು ಖೈಬರ್ ಫಖ್ತುಂಖ್ವಾ ಪ್ರಾಂತ್ಯದವರೂ ಇದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಳಿಮಾತೆ ವಿಗ್ರಹ ವಿರೂಪ: ಜನಾಕ್ರೋಶ ಹನ್ನೆರಡು ಮನೆಗೆ ಬೆಂಕಿ

ಜಿರಾನಿಯ: ತ್ರಿಪುರಾ ರಾಜ್ಯದ ಜಿರಾನಿಯ ಉಪವಿಭಾಗದಲ್ಲಿ ಭಾನುವಾರ ರಾತ್ರಿ ದೇವಸ್ಥಾನದ ವಿಗ್ರಹ ವಿರೂಪಗೊಳಿಸಿದ್ದು, ಸೋಮವಾರ ಬೆಳಗ್ಗೆ ವಿಚಾರ ತಿಳಿಯುತ್ತಿದ್ದಂತೆಯೇ ಜನಾಕ್ರೋಶ ವ್ಯಕ್ತವಾಗಿದೆ.

ಭುಗಿಲೆದ್ದ ಹಿಂಸೆ; 12 ಮನೆ, ಹಲವು ವಾಹನಗಳಿಗೆ ಬೆಂಕಿ

ಹಿಂಸಾಚಾರ ಆರಂಭಗೊಂಡು, 12 ಮನೆ-ಅಂಗಡಿಗಳು, ಕೆಲವು ವಾಹನಗಳಿಗೆ ಕಿಚ್ಚಿಡಲಾಗಿದೆ. ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ನಿಷೇಧಾಜ್ಞೆ ಘೋಷಿಸಲಾಗಿದೆ. ಭಾರೀ ಭದ್ರತೆ ಕೈಗೊಳ್ಳಲಾಗಿದೆ.

ಕೈತೂರ್‌ಬಾರಿಯಲ್ಲಿ ಕಾಳಿದೇವಿ ವಿಗ್ರಹ ವಿರೂಪಗೊಂಡಿರುವುದು ಭಾನುವಾರ ತಡರಾತ್ರಿ ಕಂಡುಬಂದಿದೆ. ಉದ್ವಿಗ್ನತೆ ಶಮನಕ್ಕೆ ಹೆಚ್ಚಿನ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ. ಸದ್ಯ ಹಿಂಸಾಚಾರದಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ. ಸ್ವಯಂಪ್ರೇರಿತ ಪ್ರಕರಣ ದಾಖಲಿಸಲಾಗುವುದು ಸಹಾಯಕ ಇನ್‌ಸ್ಪೆಕ್ಟರ್ ಜನರಲ್ ಅನಂತ ದಾಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಉದ್ರಿಕ್ತ ಜನರ ಗುಂಪು ನೋಡಿದ ಆ ಭಾಗದ ಮನೆಗಳಲ್ಲಿದ್ದ ಜನರ ಓಡಿಹೋಗಿ ಜೀವ ಉಳಿಸಿಕೊಂಡರು ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ.

ಡಿಸಿ ವಿಶಾಲ್ ಕುಮಾರ್ ಪಶ್ಚಿಮ ತ್ರಿಪುರಾ ಜಿಲ್ಲೆಯ ಜಿರಾನಿಯಾ ಉಪವಿಭಾಗದಲ್ಲಿ ಸೋಮವಾರದಿಂದ ಬುಧವಾರದವರೆಗೆ ನಿಷೇಧಾಜ್ಞೆ ವಿಧಿಸಿದ್ದಾರೆ. ಪೊಲೀಸ್ ಮಹಾನಿರ್ದೇಶಕ ಅನುರಾಗ್ ಧಂಕರ್ ಮತ್ತು ಪಶ್ಚಿಮ ತ್ರಿಪುರಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ನಿದ್ರಿಸುತ್ತಿದ್ದವರ ಮೇಲೆ ಹರಿದ ಟ್ರಕ್: 3 ಬಲಿ

ದೆಹಲಿ: ಶಂಕರ್‌ನಾಗ್ ನಟಿಸಿ ನಿರ್ದೇಶಿಸಿದ್ದ ಕನ್ನಡದ 'ಆಕ್ಸಿಡೆಂಟ್' ಸಿನಿಮಾ ಮಾದರಿಯಲ್ಲೇ ದೆಹಲಿಯಲ್ಲೊಂದು ಅಪಘಾತವಾಗಿದೆ.

ದೆಹಲಿಯ ಶಾಸ್ತ್ರಿ ಪಾರ್ಕ್ ಮೆಟ್ರೊ ನಿಲ್ದಾಣ ಬಳಿಯ ಪಾದಚಾರಿ ಮಾರ್ಗದಲ್ಲಿ ಮಲಗಿದ್ದವರ ಮೇಲೆ ಅತಿವೇಗದಲ್ಲಿದ್ದ ಟ್ರಕ್ ಹರಿದ ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿ, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸೋಮವಾರ ನಸುಕಿನ 4.30ರಲ್ಲಿ ಅಪಘಾತವಾಗಿದೆ. ಅತಿವೇಗದಲ್ಲಿದ್ದ ಟ್ರಕ್, ಚಾಲಕನ ನಿಯಂತ್ರಣ ತಪ್ಪಿ ನೇರ ಫುಟ್ಪಾತ್ ಮೇಲೆ ಹತ್ತಿ ಅಲ್ಲಿ ಮಲಗಿದ್ದ ಐವರ ಮೇಲೆ ಹರಿದಿದೆ.

ಇಬ್ಬರು ಗಾಯಾಳುಗಳನ್ನು ಸಮೀಪದ ಜಿಟಿಬಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ರಕ್ ಚಾಲಕ ಸ್ಥಳದಲ್ಲೇ ವಾಹನ ಬಿಟ್ಟು ಓಡಿಹೋಗಿದ್ದಾನೆ. ಮೃತರ ಗುರುತು ಪತ್ತೆಯಾಗಿಲ್ಲ. ಗಾಯಾಳುಗಳನ್ನು ಶಾಸ್ತ್ರಿ ಪಾರ್ಕ್ ಕೊಳೆಗೇರಿ ನಿವಾಸಿ ಮುಸ್ತಾಕ್ (35), ಗಾಂಧಿನಗರ ನಿವಾಸಿ ಕಮಲೇಶ್ (36) ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಚಾಲಕ ನಿದ್ರಿಸಿದ್ದರಿಂದ ಅಪಘಾತವಾಗಿರಬಹುದು ಎಂದು ಶಂಕಿಸಿರುವ ಪೊಲೀಸರು, ಅತಿವೇಗ-ನಿರ್ಲಕ್ಷ್ಯದ ಚಾಲನೆ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಟ್ರಕ್ ವಶಕ್ಕೆ ಪಡೆದು ಅದರ ದಾಖಲೆಗಳ ಆಧಾರ ಮಾಲೀಕರನ್ನು ಸಂಪರ್ಕಿಸಲು ಯತ್ನಿಸುತ್ತಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ಕಟ್ಟಡಗಳ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದಾರೆ.

ಲಡಾಖ್‌ನಲ್ಲಿ ಐದು ಹೊಸ ಜಿಲ್ಲೆ: ಸಚಿವ ಅಮಿತ್ ಶಾ

ದೆಹಲಿ: ಕೇಂದ್ರಾಡಳಿತ ಪ್ರದೇಶ ಲಡಾಖ್ 5 ಹೊಸ ಜಿಲ್ಲೆಗಳನ್ನು ಹೊಂದಲಿದೆ. ಝನ್‌ಸ್ಕಾರ್, ದ್ರಾಸ್, ಶಾಮ್, ನುಬ್ರಾ ಮತ್ತು ಚಾಂಗ್ತಾಂಗ್ ಹೊಸ ಜಿಲ್ಲೆಗಳಾಗಲಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಮಾಹಿತಿ



ನೀಡಿದ್ದಾರೆ. ಅಭಿವೃದ್ಧಿ ಹೊಂದಿದ -ಸಮೃದ್ಧ ಲಡಾಖ್ ನಿರ್ಮಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಚಿಂತನೆಗೆ ತಕ್ಕಂತೆ 5 ಹೊಸ ಜಿಲ್ಲೆಗಳನ್ನು ರಚಿಸಲಾಗುತ್ತಿದೆ. ಆ ಮೂಲಕ 5 ಜಿಲ್ಲೆಗಳ ಜನರಿಗೆ ಆಡಳಿತಾತ್ಮಕ ಪ್ರಯೋಜನಗಳು ಮನೆ ಬಾಗಿಲಿಗೆ ತಲುಪುವಂತೆ ಮಾಡಲಾಗುವುದು. ಲಡಾಖ್ ಜನರಿಗೆ ಹೇರಳ ಅವಕಾಶ ಸೃಷ್ಟಿಸಲು ಮೋದಿ ಸರಕಾರ ಬದ್ಧವಾಗಿದೆ ಎಂದು ಶಾ 'ಎಕ್ಸ್' ಸಂದೇಶದಲ್ಲಿ ಭರವಸೆ ನೀಡಿದ್ದಾರೆ. ಸದ್ಯ ಲಡಾಕ್‌ನಲ್ಲಿ ಕಾರ್ಗಿಲ್ ಮತ್ತು ಲೇಹ್ ಮಾತ್ರ ಜಿಲ್ಲೆಗಳಾಗಿವೆ. ಹೊಸ ಜಿಲ್ಲೆಗಳ ಘೋಷಣೆಯಿಂದ ಕೇಂದ್ರಾಡಳಿತ ಪ್ರದೇಶದ ಜಿಲ್ಲೆಗಳ ಸಂಖ್ಯೆ 7ಕ್ಕೆ ಏರಿಕೆಯಾಗಲಿದೆ. ಲಡಾಖ್‌ಗೆ 5 ಹೊಸ ಜಿಲ್ಲೆಗಳ ಸೇರ್ಪಡೆಯಿಂದ ಉತ್ತಮ ಆಡಳಿತ ಮತ್ತು ಪ್ರದೇಶದ ಅಭಿವೃದ್ಧಿಗೆ ಅನುಕೂಲವಾಗಲಿದೆ. ಜಿಲ್ಲೆಗಳ ರಚನೆ ಕಾರಣ ಜನರಿಗೆ ಸೇವೆಗಳು, ಸೌಲಭ್ಯಗಳನ್ನು ಪಡೆಯುವುದು ಸುಲಭವಾಗಲಿದೆ. ಮನೆ ಬಾಗಿಲಿಗೇ ಸೇವೆ ಸಿಕ್ಕಂತಾಗಲಿದೆ ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಘೋಷ್ ವಿರುದ್ಧ ಭ್ರಷ್ಟಾಚಾರ ಪ್ರಕರಣ

ಎಫ್‌ಐಆರ್‌ನಲ್ಲಿ ಜಾಮೀನುರಹಿತ ಕಲಂಗಳನ್ನು ಉಲ್ಲೇಖಿಸಿದ ಸಿಬಿಐ

ಕೋಲ್ಕತ್ತ: ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆಯನ್ನು ಮೊದಲಿಗೇ 'ಆತ್ಮಹತ್ಯೆ' ಎಂದು ಬಿಂಬಿಸಿ ಇಡೀ ಪ್ರಕರಣವನ್ನೇ ಮುಚ್ಚಿಹಾಕಲೆತ್ನಿಸಿ ಬಳಿಕ ಕರ್ತವ್ಯ ಲೋಪದ ಹೊಣೆ ಹೊತ್ತು ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಪ್ರಾಂಶುಪಾಲ ಹುದ್ದೆಗೆ ರಾಜೀನಾಮೆ ನೀಡಿದ್ದ ಡಾ. ಸಂದೀಪ್ ಘೋಷ್ ವಿರುದ್ಧ ಕಾನೂನಿನ ಕುಣಿಕೆಯನ್ನು ಕೇಂದ್ರ ತನಿಖಾ ದಳ(ಸಿಬಿಐ) ಬಿಗಿಗೊಳಿಸುತ್ತಿದೆ.

ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕ ಅಲಿ ಅವರು ಡಾ.ಘೋಷ್ ವಿರುದ್ಧ ಹೊರಿಸಿದ್ದ ಸರಣಿ ಅವ್ಯವಹಾರಗಳು, ಭ್ರಷ್ಟಾಚಾರ, ಅನಾಥ ಶವಗಳ ಮಾರಾಟ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿದ ಸಿಬಿಐ, ಡಾ.ಘೋಷ್ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಿದೆ. ಎಫ್‌ಐಆರ್‌ನಲ್ಲಿ ಜಾಮೀನು ರಹಿತ ಕಲಂಗಳನ್ನು ಉಲ್ಲೇಖಿಸಿದೆ. ಇನ್ನೊಂದೆಡೆ, ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆಯ ಭಾಗವಾಗಿ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ಮತ್ತು ನಾಲ್ವರು ತರಬೇತಿ ನಿರತ ವೈದ್ಯರು(ಅಪರಾಧ ಕೃತ್ಯ ನಡೆದ ರಾತ್ರಿ ಕಿರಿಯ ವೈದ್ಯೆ ಜತೆ ಪಾಳಿಯಲ್ಲಿದ್ದವರು) ಹಾಗೂ ಮತ್ತೊಬ್ಬ ನಾಗರಿಕ ಪೊಲೀಸ್ ಸಹಾಯಕನನ್ನು ಸಿಬಿಐ 2ನೇ ಸುತ್ತಿನ ಪಾಲಿಗ್ರಾಫ್ ಪರೀಕ್ಷೆಗೆ ಸೋಮವಾರ ಒಳಪಡಿಸಿದೆ.

ಕಳೆದ 10 ದಿನಗಳಲ್ಲಿ, ಘೋಷ್ ವಿಚಾರಣೆ ವೇಳೆ ಅಸಮಂಜಸ ಉತ್ತರಗಳನ್ನು ನೀಡಿದ್ದಾರೆ. ಹೀಗಾಗಿ ಅವರನ್ನು ಮತ್ತೊಂದು ಸುತ್ತಿನ ಪಾಲಿಗ್ರಾಫ್ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಸಿಬಿಐ ತನಿಖಾಧಿಕಾರಿ ಹೇಳಿದ್ದಾರೆ.

ಸಿಬಿಐ ಮೊದಲಿಗೆ ಡಾ.ಘೋಷ್ ಮತ್ತು ಇತರೆ ಐವರನ್ನು ಕಳೆದ ಶನಿವಾರ, ನಂತರ ಪ್ರಕರಣದ ಮುಖ್ಯ ಆರೋಪಿ ಸಂಜಯ್ ರೇನನ್ನು ಭಾನುವಾರ ಪ್ರೆಸಿಡೆನ್ಸಿ ಕರೆಕ್ಷನಲ್ ಹೋಮ್‌ನಲ್ಲಿ ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಿತ್ತು.

ದುರ್ಗಾ ಪೂಜೆಗೆ ದುಡ್ಡೇ ಬೇಡ!

ಕಿರಿಯ ವೈದ್ಯೆಯ ಅತ್ಯಾಚಾರ-ಹತ್ಯೆ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡಿಸದೇ ಪ್ರಕರಣ ಮುಚ್ಚಿ ಹಾಕಲು ಮಮತಾ ಬ್ಯಾನರ್ಜಿ ಸರಕಾರ ಯತ್ನಿಸಿದೆ. ದುರ್ಗಾ ಮಾತೆಯ ಪೂಜೆಗೆ ಇಂಥ ಅಮಾನವೀಯ ಸರಕಾರದ ಅನುದಾನ ಬೇಡ ಎಂದು ಪಶ್ಚಿಮ ಬಂಗಾಳ ರಾಜ್ಯದ ಹಲವು ದುರ್ಗಾ ಪೂಜಾ ಮಂಡಳಿಗಳು ಹೇಳಲಾರಂಭಿಸಿವೆ. ವಾರ್ಷಿಕ ದುರ್ಗಾ ಪೂಜೆ ಸಂದರ್ಭ ರಾಜ್ಯ ಸರಕಾರದಿಂದ ಪೂಜಾ ಮಂಡಳಿಗಳಿಗೆ ತಲಾ 85 ಸಾವಿರ ರು. ಅನುದಾನ ನೀಡಲಾಗುತ್ತದೆ. ಈ ಬಾರಿ ಬಹಳಷ್ಟು ಪೂಜಾ ಮಂಡಳಿಗಳು ಸರಕಾರದ ಹಣ ಬೇಡವೇಬೇಡ ಎನ್ನುತ್ತಿವೆ. ಇದು ಮಮತಾ ಅವರ ಸರಕಾರಕ್ಕೆ ಇರಿಸು ಮುರಿಸು ಉಂಟು ಮಾಡುತ್ತಿದೆ.

ಉಕ್ರೇನ್ ಡ್ರೋಣ್‌ಗೆ ರಷ್ಯಾ ಕ್ಷಿಪಣಿ ಸುರಿಮಳೆ

ಸರಣಿ ಕ್ಷಿಪಣಿ ದಾಳಿಗೆ ಬೆಚ್ಚಿದ ಕೀವ್ ಜನತೆ

ಕೀವ್: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಬಿಸಿ ಕರಗುವ ಬದಲಾಗಿ ದಿನೇ ದಿನೇ ಹೆಚ್ಚುತ್ತಲೇ ಇದೆ. ಪ್ರಧಾನಿ ನರೇಂದ್ರ ಮೋದಿ ಅವರು ಎರಡೂ ದೇಶಗಳಿಗೆ ಕೆಲ ವಾರಗಳ ಅಂತರದಲ್ಲಿ ಭೇಟಿ ನೀಡಿ ಶಾಂತಿಮಂತ್ರ ಪಠಿಸಿದ್ದರೂ ವ್ಲಾದಿಮಿರ್ ಪುಟಿನ್ ಮತ್ತು ವ್ಲಾದಿಮಿರ್ ಝೆಲೆನ್‌ಸ್ಕಿ ನಡುವಿನ ಆಕ್ರೋಶ, ಯುದ್ಧಪಿಪಾಸೆ ತಗ್ಗಲಿಲ್ಲ.

ರಷ್ಯಾದ ಬಹು ಮಹಡಿ ಕಟ್ಟಡವೊಂದರ ಮೇಲೆ ಉಕ್ರೇನ್ ಡ್ರೋಣ್ ದಾಳಿ ನಡೆಸಿದ್ದಕ್ಕೆ ಪ್ರತಿಕಾರವಾಗಿ ರಷ್ಯಾ ಕ್ಷಿಪಣಿಗಳ ದಾಳಿ ಮೂಲಕ ತಿರುಗೇಟು ನೀಡಿದೆ. ರಷ್ಯಾದ ಸರಣಿ ಕ್ಷಿಪಣಿ ದಾಳಿಯಿಂದ ಉಕ್ರೇನ್ ರಾಜಧಾನಿ ಕೀವ್ ಮಹಾನಗರ ಅಕ್ಷರಶಃ ನಡುಗಿ ಹೋಗಿದೆ, ಕ್ಷಿಪಣಿಗಳ ದಾಳಿಯ ನಿರೀಕ್ಷೆಯೇ ಇಲ್ಲದ ಕೀವ್ ನಗರದ ಜನತೆ ಬೆಚ್ಚಿ ಬಿದ್ದಿದ್ದಾರೆ.

ಉಕ್ರೇನ್‌ನ ವಾಯುಸೇನೆಯನ್ನು ಗುರಿಯಾಗಿಸಿ ರಷ್ಯಾ ಸೇನೆ ಕ್ಷಿಪಣಿಗಳ ದಾಳಿ ನಡೆಸಿದೆ. ಸೋಮವಾರ ಬೆಳಿಗ್ಗೆ ಕೇಂದ್ರ ಕೀವ್ ನಗರದ ಮೇಲೆ ರಷ್ಯಾ ಕ್ಷಿಪಣಿಗಳು ಒಂದಾದ ಮೇಲೊಂದರಂತೆ ಅಪ್ಪಳಿಸಿವೆ. 11 ಸ್ಥಳಗಳಲ್ಲಿ 95 ಕ್ಷಿಪಣಿಗಳ ದಾಳಿ ನಡೆದಿದೆ. ರಷ್ಯಾ ಸೇನೆಯ 11 ಟಿಯು-95 ಕ್ಷಿಪಣಿಗಳನ್ನು ಏಕಕಾಲದಲ್ಲಿ ಕೀವ್‌ನತ್ತ ಹಾರಿಸಿದೆ. ಪರಿಣಾಮ ಅಪಾರ ಸಂಖ್ಯೆಯ ಬಹುಮಹಡಿ ವಸತಿ ಸಂಕೀರ್ಣಗಳು ಹಾನಿಗೀಡಾಗಿವೆ. ಅಪಾರ ಪ್ರಮಾಣದ ಆಸ್ತಿ ನಷ್ಟವಾಗಿದೆ.

ಸಮಾಚಾರ ಸಣ್ಣದಲ್ಲ

ಪಡಿತರ ಚೀಟಿ ಇ-ಕೈವೈಸಿ ಕಡ್ಡಾಯ

ರಾಯಚೂರು: ಜಿಲ್ಲೆಯ ಪಡಿತರ ಚೀಟಿಯಲ್ಲಿನ ಕುಟುಂಬದ ಎಲ್ಲಾ ಸದಸ್ಯರು ಇ-ಕೈವೈಸಿ ಮಾಡಿಸುವುದು ಕಡ್ಡಾಯವಾಗಿದ್ದು, ಇ-ಕೈವೈಸಿ ಮಾಡಿಸದ ಪಡಿತರ ಚೀಟಿಗಳಲ್ಲಿನ ಸದಸ್ಯರು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ಅಥವಾ ನ್ಯಾಯಬೆಲೆ ಅಂಗಡಿಗಳಿಂದ ಆಹಾರ ಧಾನ್ಯಗಳನ್ನು ಪಡೆಯುವ ಅಂಗಡಿಯಲ್ಲಿ ಇದೇ ತಿಂಗಳ ಅಂತ್ಯದವರೆಗೆ ಇ-ಕೈವೈಸಿಯನ್ನು ಕಡ್ಡಾಯವಾಗಿ ಮಾಡಿಸಬೇಕೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇ-ಕೈವೈಸಿ ಮಾಡಿಸುವ ಸಮಯದಲ್ಲಿ ಎಸ್.ಸಿ/ಎಸ್.ಟಿ/ಇತರೆ ಆಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಸಂಖ್ಯೆಯನ್ನು ನಮೂದಿಸುವಂತೆ, ಅನಿಲ ಸಂಪರ್ಕ ಹೊಂದಿದ್ದಲ್ಲಿ ಗ್ರಾಹಕರ ಸಂಖ್ಯೆಯನ್ನು ನಮೂದಿಸುವಂತೆ ಮತ್ತು ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವಂತೆ ತಿಳಿಸಲಾಗಿದೆ. ಪಡಿತರ ಚೀಟಿದಾರರ ನ್ಯಾಯಬೆಲೆ ಅಂಗಡಿಗಳಲ್ಲಿ ಇ-ಕೈವೈಸಿ ಮಾಡಿಸುವುದಕ್ಕೆ ಪಡಿತರ ಚೀಟಿಯಲ್ಲಿನ ಸದಸ್ಯರು ಯಾವುದೇ ಹಣ ನೀಡುವಂತಿಲ್ಲ. ಇದು ಸಂಪೂರ್ಣ ಉಚಿತವಾಗಿದ್ದು, ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಹಣ ಕೇಳಿದ್ದಲ್ಲಿ ಉಪ ನಿರ್ದೇಶಕರ ಕಚೇರಿಯ ದೂರವಾಣಿ ಸಂಖ್ಯೆ:1967ಗೆ ಮತ್ತು ತಾಲೂಕು ಕಚೇರಿಯ ಆಹಾರ ಶಾಖೆಗೆ ದೂರು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೂವಿಜ್ಞಾನ: ಮರಳು ಖರೀದಿಗೆ ಅವಕಾಶ

ರಾಯಚೂರು: ಇಲ್ಲಿಯ ಹಿರಿಯ ಭೂವಿಜ್ಞಾನಿಗಣಿ ಮತ್ತು ಭೂವಿಜ್ಞಾನ ಇಲಾಖೆಯ ವತಿಯಿಂದ ಜಿಲ್ಲೆ ದೇವದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ದಾಖಲಿಸಿರುವ ಪ್ರಕರಣಗಳಡಿಯಲ್ಲಿ ವಶಕ್ಕೆ ಪಡೆದಿರುವ ಮರಳನ್ನು ಇದೇ 2024ರ ಆ.19, 20ರಂದು ತಾಲ್ಲೂಕು ಮರಳು ಸಮಿತಿ ಸದಸ್ಯ ಇಲಾಖೆಗಳು ಸ್ಥಳ ಪರಿಶೀಲನೆ ನಡೆಸಲಾಗಿದ್ದು, ನಿಗದಿಪಡಿಸಿರುವ ಮರಳಿನ ಬೆಲೆಯನ್ನು ಸರ್ಕಾರಕ್ಕೆ ಪಾವತಿಸಿ ಮರಳನ್ನು ಸಾಗಾಣಿಕೆ ಮಾಡಬಹುದಾಗಿದೆ ಎಂದು ಹಿರಿಯ ಭೂವಿಜ್ಞಾನಿಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಏಕಲವ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ರಾಯಚೂರು: ಇಲ್ಲಿಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2023ನೇ ಸಾಲಿನ ಏಕಲವ್ಯ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ ಅವರು ತಿಳಿಸಿದ್ದಾರೆ. ಆಸಕ್ತ ಜಿಲ್ಲೆಯ ಕ್ರೀಡಾಪಟುಗಳು ಅರ್ಜಿಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಯಚೂರಿನಲ್ಲಿ ಪಡೆದು, ಭರ್ತಿ ಮಾಡಿ ಇದೇ 2024ರ ಸೆ.10ರ ಸಂಜೆ 5.30ರೊಳಗಾಗಿ ದ್ವಿ-ಪ್ರತಿಗಳಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿವರ್ತಕ ಅಳವಡಿಕೆಗೆ ರೈತ ಸಂಘ ಒತ್ತಾಯ

ರಾಯಚೂರು: ದೇವದುರ್ಗ ತಾಲೂಕಿನ ಶ್ಯಾಣೇರದೊಡ್ಡಿ ವಿದ್ಯುತ್ ಸರಬ ರಾಜ ಪರಿವರ್ತಕ ಅಳವಡಿಸು ವಂತೆ ದೇವದುರ್ಗ ವಿಭಾಗದ ಸಹಾ ಯಕ ಕಾರ್ಯನಿರ್ವಾಹಕ ಅಭಿಯಂ ತರಲನ್ನು ಕರ್ನಾಟಕ ಪ್ರಾಂತ ರೈತ ಸಂಘ ಗ್ರಾಮ ಸಮಿತಿ ಒತ್ತಾಯಿಸಿದೆ. ಗಲಗ್ ವ್ಯಾಪ್ತಿಯ ಶ್ಯಾಣೇರ ದೊಡ್ಡಿ ಗ್ರಾಮದಲ್ಲಿ ಕಳೆದ ಎರಡು ಕ್ಕೆ ತಿಂಗಳಿನಿಂದ ನಿರಂತರ ಜ್ಯೋತಿ ವಿದ್ಯುತ್ ಪರಿವರ್ತಕ ಸುಟ್ಟು ಹೋಗಿರುತ್ತದೆ. ಇದರಿಂದ ಗ್ರಾಮದ ಜನರು ಎರಡು ತಿಂಗಳಿನಿಂದ ವಿದ್ಯು ತ್ ಸಮಸ್ಯೆ ಎದುರಿಸುವಂತ ಸ್ಥಿತಿ ನಿರ್ಮಾಣವಾಗಿದೆ. ಸಂಭಂದಿಸಿದ ಗಲಗ್ ಕೆಇಬಿ ಜೆಇ, ಹಾಗೂ ಎಇಇ, ಅವರಿಗೆ ಸಾಕಷ್ಟು ಭಾರಿ ದೂರವಾಣಿ ಮೂಲಕ ಮನವಿ ಮಾಡಿಕೊಂಡರು ನಿರ್ಲಕ್ಷ್ಯ ವಹಿಸಿಲಾಗಿದೆ. ಈ ಸಂದರ್ಭದಲ್ಲಿ ಅಧ್ಯಕ್ಷರದ ಬುಡ್ಡ ಸಬ್ ಶ್ಯಾನಿ ಕಾರ್ಯ ದರ್ಶಿಗಳು ಭಾಷಾ ಶ್ಯಾನರ, ಗ್ರಾಮ ಸಮಿತಿ ಮುಖಂಡರಾದ ಶಿವರಾಜ್ ಪಕೀರಣ್ಣ ಹನುಮಂತ ಗಲಗ, ವಿದ್ಯಾರ್ಥಿ ಸಂಘಟನೆ ಮುಖಂಡ ರಾದ ನರಸಣ್ಣ ತಿರುಪತಿ, ಶಿವರಾಜ್, ಶಿವನಗೌಡ, ಕಾಸಿಂ ಮುಂತಾದವರು ಭಾಗವಹಿಸಿದ್ದರು.

ವಿ+
ಸೋಮವಾರ

{ನಿಖಿಲ್ ಕುಮಾರಸ್ವಾಮಿ} ಜೆಡಿಎಸ್ ಯುವ ಘಟಕದ ಅಧ್ಯಕ್ಷ
ಕುಮಾರಸ್ವಾಮಿ ಅವರನ್ನು ಯಾವ ರೀತಿ ಕಟ್ಟಿ ಹಾಕಬೇಕು ಎಂದು ಕಾಂಗ್ರೆಸ್ ನಾಯಕರು ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆಸಿದ್ದಾರೆ. ಆದರೆ ಇವರು ಯಾರೂ ಸಹ ಕುಮಾರಸ್ವಾಮಿ ಅವರನ್ನು ಕೇಂದ್ರ ಸಚಿವ ಸ್ಥಾನದಿಂದ ಇಳಿಸಲು ಸಾಧ್ಯವಿಲ್ಲ. ಗಣಿಗಾರಿಕೆ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ.

ಕಮಲ ಪಡೆಗೆ ವಲಸೆ ಬಂದ ಕಾಂಗ್ರೆಸ್ಸಿಗರಿಗೆ ಪಟ್ಟ। ಆಸಕ್ತಿ ಕಳೆದುಕೊಂಡ ಕಾಂಗ್ರೆಸ್ ಪಡೆ

ಗಂಗಾವತಿ ನಗರಸಭೆ: ಹಸ್ತೇ ಕಮಲೋತ್ಪತ್ತಿ!

ಚುನಾವಣೆಯಲ್ಲಿ ಮೌಲಾಸಾಬ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಪಾರ್ವತಮ್ಮ ದೊಡ್ಡಮನಿ ಆಯ್ಕೆ ಆಗಿದ್ದಾರೆ.

ಗಂಗಾವತಿ: ಭಾರಿ ಕುತೂಹಲ ಮೂಡಿಸಿದ್ದ ಗಂಗಾವತಿ ನಗರಸಭೆ ಅಧ್ಯಕ್ಷ- ಉಪಾಧ್ಯಕ್ಷರ ಚುನಾವಣೆ 'ಹಸ್ತೇ ಕಮಲೋತ್ಪತ್ತಿ' ಎನ್ನುವಂತಾಗಿದೆ. ಸೋಮವಾರ ನಡೆದ ಚುನಾವಣೆಯಲ್ಲಿ ಮೌಲಾಸಾಬ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಪಾರ್ವತಮ್ಮ ದೊಡ್ಡಮನಿ ಆಯ್ಕೆ ಆಗಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದರು.

ಈ ಇಬ್ಬರೂ ಕಾಂಗ್ರೆಸ್ ನಿಂದ ಆಯ್ಕೆ ಆಗಿ, ಬಿಜೆಪಿಗೆ ವಲಸೆ ಬಂದವರಾಗಿದ್ದಾರೆ. ಅಧಿಕಾರ ಹಿಡಿಯಲು ಭಾರಿ ಖಸರತ್ತು ಮಾಡಿದ್ದ ಬಿಜೆಪಿ, ಕೊನೆಗಳಿಗೆಯಲ್ಲಿ 'ಅಧಿಕೃತವಾಗಿ ಕಾಂಗ್ರೆಸ್ ನಿಂದ ಆಯ್ಕೆ ಆಗಿ, ವಲಸೆ ಬಂದವರಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನ ಬಿಟ್ಟುಕೊಟ್ಟಿದೆ. ಸುಮಾರು 20 ವರ್ಷಗಳ ನಂತರ ಅಧಿಕಾರ ಹಿಡಿದಿದ್ದೇವೆ ಎಂದು ಬೀಗುವ ಬಿಜೆಪಿ ಪಾಳೆಯದ ಘೋಷಣೆಗೆ ಯಾವ ಅರ್ಥವೂ ಇಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಬಿಜೆಪಿ ಕಡೆ ಗುರುತಿಸಿಕೊಂಡು, ಅಧ್ಯಕ್ಷ ಸ್ಥಾನಕ್ಕೆ ಮೌಲಸಾಬ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ವತಮ್ಮ ದೊಡ್ಡಮನಿ ನಾಮಪತ್ರ ಸಲ್ಲಿಸಿದರು. ಇನ್ನು ಕಾಂಗ್ರೆಸ್ ನಿಂದ ಅಧ್ಯಕ್ಷ ಸ್ಥಾನಕ್ಕೆ ಕಾಸೀಂಸಾಬ ಗದ್ವಾಲ್, ಉಪಾಧ್ಯಕ್ಷ ಸ್ಥಾನಕ್ಕೆ ಹುಲಿಗೆಮ್ಮ ನಾಮಪತ್ರ ಸಲ್ಲಿಸಿದ್ದರು. ಬಿಜೆಪಿ ಅಭ್ಯರ್ಥಿಗಳು ತಲಾ 28 ಮತ ಪಡೆದರೆ ಕಾಂಗ್ರೆಸ್ ಅಭ್ಯರ್ಥಿಗಳು ಕೇವಲ 8 ಮತ ಪಡೆದು ಪರಾಭವಗೊಂಡರು. ಈ ಮೂಲಕ ಕಳೆದ 2 ದಶಕಗಳಿಂದ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಬೆಂಬಲಿಗರ ವಶದಲ್ಲಿದ್ದ ಇಲ್ಲಿನ ನಗರಸಭೆ ಮೊದಲ ಬಾರಿಗೆ ಹೆಸರಿಗೆ ಮಾತ್ರ ಬಿಜೆಪಿ ಪಾಲಾಗಿದೆ.

ಅಧಿಕಾರಕ್ಕೇರಬೇಕೆಂಬ ಕಾರಣಕ್ಕೆ ಬಿಜೆಪಿ ನಾಯಕರು ಕಳೆದ ಒಂದು ವಾರದಿಂದ ಹೆಣೆದ ಯೋಜನೆಗಳು ತಲೆ ಕೆಳಗಾಗಿ ಕೊನೆಯ ಹಂತದಲ್ಲಿ ವಲಸಿಗ ಕಾಂಗ್ರೆಸ್ಸಿಗರಿಗೆ ಬಿಜೆಪಿ ನಾಯಕರು ಪಟ್ಟ ಕಟ್ಟಬೇಕಾದ ಅನಿವಾರ್ಯ ಪರಿಸ್ಥಿತಿ ಮಾಡಿಕೊಂಡಿದ್ದಾರೆ. ನಗರಸಭೆಯಲ್ಲಿ ಆಡಳಿತ ಹಿಡಿಯಬೇಕು ಎಂಬ ಕಾರಣಕ್ಕೆ ಬಿಜೆಪಿ ಕಳೆದ ಒಂದು ವಾರದಿಂದ ಮೇಲಿಂದ ಮೇಲೆ ನಿರಂತರ ಸದಸ್ಯರ ಸಭೆ ನಡೆಸಿದ್ದಲ್ಲದೇ ಸದಸ್ಯರನ್ನು ರಹಸ್ಯ ಸ್ಥಳಕ್ಕೆ ಕರೆದೊಯ್ದು ಇಡಲಾಗಿತ್ತು. ಸೋಮವಾರ ಬೆಳಗ್ಗೆ ನೇರವಾಗಿ ನಗರಸಭೆಗೆ ಸದಸ್ಯರು ಆಗಮಿಸಿ ಚುನಾವಣೆಯಲ್ಲಿ ಭಾಗಿಯಾದರು. ಶಾಸಕ ಗಾಲಿ ಜನಾರ್ದರೆಡ್ಡಿ, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಸಂಸದ ಎಸ್. ಶಿವರಾಮಗೌಡ, ಕಾಡಾದ ಮಾಜಿ ಅಧ್ಯಕ್ಷ ಎಚ್. ಗಿರೇಗೌಡ, ಬಿಜೆಪಿ ಪ್ರಮುಖರಾದ ಸೈಯದ ಅಲಿ, ಚನ್ನಪ್ಪ ಮಳಗಿ, ಶ್ರೀಧರ್ ಕೇಸರಹಟ್ಟಿ, ರಾಘವೇಂದ್ರ ಶೆಟ್ಟಿ, ಕಾಶಿನಾಥ ಚಿತ್ರಗಾರ, ಸಿಂಗನಾಳ ಪಂಪಾಪತಿ ಸೇರಿದಂತೆ ನಗರಸಭೆಯ ಸದಸ್ಯರು ಇದ್ದರು.

ನಗರಸಭೆಯ ಆಡಳಿತ ಉಳಿಸಿಕೊಳ್ಳಬೇಕು ಎಂಬ ಯಾವ ಆಸಕ್ತಿಯನ್ನು ತೋರದ ಕಾಂಗ್ರೆಸ್ ನಾಯಕರು, ಯುದ್ಧಕ್ಕೂ ಮುನ್ನ ಶಸ್ತ್ರತ್ಯಾಗ ಮಾಡಿ ಸೋಲೋಪ್ಪಿಕೊಂಡಂತೆ ಕಂಡು ಬಂತು. ಸ್ವತಃ ಮಾಜಿಸಚಿವ ಇಕ್ಬಾಲ್ ಅನ್ಸಾರಿ, ತಮ್ಮಿಂದ ದೂರವಾಗಿರುವ ನಗರಸಭೆ ಸದಸ್ಯರ ಬಗ್ಗೆ ಅಸಮಧಾನಗೊಂಡಿದ್ದರು. ಈ ಹಿನ್ನೆಲೆ ಚುನಾವಣೆಯಿಂದ ಸಂಪೂರ್ಣ ಆಸಕ್ತಿ ಹಿಂತೆಗೆದುಕೊಂಡ ಪರಿಣಾಮ ಕಾಂಗ್ರೆಸ್ ಗೆ ನಗರಸಭೆಯಲ್ಲಿ ಹೀನಾಯ ಸೋಲಾಗಿದೆ. ಅಲ್ಲದೇ ನಗರಸಭೆಗೆ ಚುನಾವಣೆ ಘೋಷಣೆಯಾದರೂ ಯಾವೊಬ್ಬ ಕೈ ನಾಯಕರು ಆಸಕ್ತಿ ವಹಿಸಿ ಸದಸ್ಯರ ಮಧ್ಯೆ ಸಮನ್ವಯ ಸಾಧಿಸುವುದಾಗಲಿ, ಸಭೆ ನಡೆಸುವ ಕೆಲಸ ಮಾಡಿಲ್ಲ. ಇದು ಸೋಲಿಗೆ ಪ್ರಮುಖ ಕಾರಣ ಎನ್ನಲಾಗಿದೆ. ಅಲ್ಲದೇ ನಗರಸಭೆಯ ಎರಡನೇ ಮಹಡಿಯ ಸಭಾಂಗಣದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಗೆ ಕೇವಲ ಮತದಾನದ ಹಕ್ಕು ಹೊಂದಿದ ಸದಸ್ಯರನ್ನು ಹೊರತು ಪಡಿಸಿದರೆ ಬೇರೆ ಯಾರಿಗೂ ಪ್ರವೇಶ ಅವಕಾಶ ಕಲ್ಪಿಸಿರಲಿಲ್ಲ. ಕೊಠಡಿಯ ಬಾಗಿಲು ಹಾಕಿ ಚುನಾವಣೆ ಪ್ರಕ್ರಿಯೆ ಮಾಡಿ ಮುಗಿಸಲಾಯಿತು. ಶಾಸಕ ರೆಡ್ಡಿ ಬಣದಲ್ಲಿ ಗುರುತಿಸಿಕೊಂಡಿದ್ದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಪಕ್ಷೇತತರ ಸದಸ್ಯರು ಸಣಾಪುರದ ಖಾಸಗಿ ರೆಸಾಟರ್ ಒಂದರಲ್ಲಿ ತಂಗಿದ್ದರು. ಸೋಮವಾರ ಐಷಾರಾಮಿ ವಾಹನದಲ್ಲಿ ನೇರವಾಗಿ ನಗರಸಭೆಯ ಕಚೇರಿಗೆ ಆಗಮಿಸಿ ಚುನಾವಣೆಯಲ್ಲಿ ಭಾಗವಹಿಸಿದರು.

ಚುನಾವಣೆಯ ಬಳಿಕ ಚುನಾವಣಾಧಿಕಾರಿಯಾಗಿದ್ದ ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ನಗರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯ ಬಗ್ಗೆ ಅಧಿಕೃತ ಘೋಷಣೆ ಮಾಡಿದರು. ಅಧ್ಯಕ್ಷ ಸ್ಥಾನಕ್ಕೆ ಮೌಲಸಾಬ, ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ವತಮ್ಮ ದೊಡ್ಡಮನಿ ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡಿದರು.

ಬಿಗಿ ಭದ್ರತೆ

ನಗರಸಭೆ ಚುನಾವಣೆ ಹಿನ್ನೆಲೆ ಬಿಜೆಪಿ-ಕಾಂಗ್ರೆಸ್ ಸದಸ್ಯರ ಮಧ್ಯೆ ವಾಗ್ವಾದ ನಡೆದು ಗಲಭೆಯಾಗಬಹುದು ಎಂಬ ಮುನ್ನಚ್ಚರಿಕೆ ಕ್ರಮವಾಗಿ ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು. ಸದಸ್ಯರು, ಸಿಬ್ಬಂದಿ, ಮಾಧ್ಯಮದವರನ್ನು ಹೊರತು ಪಡಿಸಿದರೆ ನಗರಸಭೆಯ ಆವರಣ ಪ್ರವೇಶವನ್ನು ಸಾರ್ವಜನಿಕರಿಗೆ ನಿಷೇಧಿಸಲಾಗಿತ್ತು.

350 ಕಲಾವಿದರಿಂದ ರಾಮಾಯಣ ನೃತ್ಯ ಪ್ರದರ್ಶನ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳವರ ರಾಜ ಬೀದಿಯಲ್ಲಿ ದೇಶ, ವಿದೇಶದ 350 ನೃತ್ಯ ಕಲಾವಿದರಿಂದ ಏಕಕಾಲಕ್ಕೆ ನಾಮ ರಾಮಾಯಣಂ ನೃತ್ಯ ಪ್ರದರ್ಶಿಸಿ ದಾಖಲೆ ಬರೆದರು.

ಭಾನುವಾರ ಸಂಜೆ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳವರ ಮಠ ಹಾಗೂ ಚನ್ನರಾಯಪಟ್ಟಣದ ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ದಾಖಲೆಗಾಗಿ ಹಮ್ಮಿಕೊಂಡಿದ್ದ ನಾಮ ರಾಮಾಯಣಂ ನೃತ್ಯ ಪ್ರದರ್ಶನ ಮಠದ ಪೀಠಾಧಿಪತಿಗಳಾದ ಸುಬುಧೇಂದ್ರ ತೀರ್ಥರು ಉದ್ಘಾಟಿಸಿದರು.

ಮಠದ ಮುಂಭಾಗದಲ್ಲಿರುವ ರಾಜ ಬೀದಿಯಲ್ಲಿ ವಿಶ್ವದಾದ್ಯಂತ ಕಡೆಯಿಂದ ಆಗಮಿಸಿದ ನೃತ್ಯ ಗುರುಗಳು ಮತ್ತು ಮಹಿಳಾ ಕಲಾವಿದರು ಸೇರಿ 350ಕ್ಕೂ ಹೆಚ್ಚು ನೃತ್ಯಪಟುಗಳು ಒಂದೇ ವೇದಿಕೆಯಲ್ಲಿ ಸೇರಿಸಿ 15 ನಿಮಿಷಗಳ ಕಾಲ ಶ್ರೀ ನಾಮ ರಾಮಾಯಣಂ ಗೀತಾಗೆ ಪಕ್ಕ ವಾದ್ಯದೊಂದಿಗೆ ಏಕಕಾಲದಲ್ಲಿ ನೃತ್ಯ ಮಾಡುವ ಮೂಲಕ ನೆರೆದ ಪೂಜ್ಯಾಯ ಭಜತಾಂ ರಾಘವೇಂ, ಭಕ್ತ ಸಮೂಹದ ಗಮನ ಕಲ ವ್ಯಕ್ತಾಂ ಸೆಳೆದರು.

ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ನಲ್ಲಿ ಅಕಾಡೆಮಿ ಮತ್ತು ಮಕಳು ಹಾಗೂ ಮಠದ ಹೆಸರನ್ನು ಸೇರಿಸುವ ಹಿನ್ನೆಲೆಯಲ್ಲಿ ಜಪಾನ್ ಜರ್ಮನಿ ಇಂಡೋನೇಷಿಯಾ ದೇಶ ಸೇರಿದಂತೆ ಭಾರತ ದೇಶದ ಹಲವಾರು ರಾಜ್ಯದ ಭಾಗಗಳಿಂದ ಆಗಮಿಸುತ್ತಿರುವ ಕಲಾವಿದರಿಗೆ ರಾಯರ ದರ್ಶನ ಮಾಡಿಸುವ ಮೂಲಕ ಈ ನೃತ್ಯೋತ್ಸವ ಸಂಭ್ರಮ ರಾಯರ ಪಾದದಲ್ಲಿ ಸಮರ್ಪಣೆ ಮಾಡಲಿದ್ದೇವೆ ಎಂದು ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿಯ ಮುಖ್ಯಸ್ಥ ಅರವಿಂದ ಸಿಂಗ್, ಪ್ರದಾನ ಕಾರ್ಯದರ್ಶಿ ಡಾ. ಸ್ವಾತಿ ಪಿ ಭಾರದ್ವಾಜ್ ತಿಳಿಸಿದರು.

ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿಯ ಮುಖ್ಯಸ್ಥ ಅರವಿಂದ ಸಿಂಗ್, ಪ್ರದಾನ ಕಾರ್ಯದರ್ಶಿ ಡಾ. ಸ್ವಾತಿ ಪಿ ಭಾರದ್ವಾಜ್ ಭಾಗವಹಿಸಿದರು.

ಏಕಕಾಲದಲ್ಲಿನ ಭರತನಾಟ್ಯದ ನೃತ್ಯ

ನೋಡಲು ವಿವಿಧ ಕಡೆಯಿಂದ ಆಗಮಿಸಿದ್ದ ಸಾರ್ವಜನಿಕರು, ಕಾರಿಡಾರ್‌ನ ಎರಡೂ ಕಡೆ ನಿಂತ ನೃತ್ಯ ಆಸಕ್ತರು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು ಕೆಲವರು ನೃತ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿಯುವಲ್ಲಿ ನಿರತರಾಗಿದ್ದರು. 15 ನಿಮಿಷಕ್ಕೂ ಅಧಿಕ ಸಮಯ ನಡೆದ ನೃತ್ಯವನ್ನು ಪೀಠಾಧಿಪತಿಗಳು ಆಸೀನರಾಗಿ ವೀಕ್ಷಿಸಿ ಶುಭ ಹಾರೈಸಿದರು.

ಬಾಲಕೃಷ್ಣನ ವೇಷದಲ್ಲಿ ಚಿಣ್ಣರ ಸಂಭ್ರಮ

ಕುಷ್ಟಗಿ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ವಿಪಕ್ಷ ಮುಖ್ಯ ಸಚೇತಕ ಶಾಸಕ ದೊಡ್ಡನಗೌಡ ಎಚ್. ಪಾಟೀಲ್ ಅವರೊಂದಿಗೆ ತಹಸೀಲ್ದಾರ್ ಅಶೋಕ ಶಿಗ್ಗಾವಿ ಅವರು ಶ್ರೀ ಕೃಷ್ಣನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಕುಷ್ಟಗಿ: ಪಟ್ಟಣ ಸೇರಿ ತಾಲೂಕಾದ್ಯಂತ ಶಾಲೆ-ಕಾಲೇಜು ಹಾಗೂ ವಿವಿಧ ಸರಕಾರಿ ಕಚೇರಿಯಲ್ಲಿ ಶ್ರದ್ಧೆ ಭಕ್ತಿಯಿಂದ ಶ್ರೀ ಕೃಷ್ಣನ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಶ್ರೀಕೃಷ್ಣ ಜನ್ಮಾಷ್ಟಮಿ ಸರಳವಾಗಿ ಸೋಮವಾರ ಆಚರಿಸಲಾಯಿತು.

ತಾಲೂಕಾದ್ಯಂತ ಮಕ್ಕಳು ಶ್ರೀಕೃಷ್ಣನ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಮನೆ ಮನೆಯಲ್ಲಿ ಪೂಜೆ ಸಲ್ಲಿಸಿ ಭಕ್ತಿ-ಭಾವ ಮೆರೆದರು. ಮಕ್ಕಳಿಗೆ ರಾಧಾ-ಕೃಷ್ಣನ ವೇಷಭೂಷಣ ತೊಡಿಸಿ ಪೋಷಕರು ಸಂಭ್ರಮಿಸುತ್ತಿರುವುದು ಕಂಡುಬಂತು. ಪಟ್ಟಣದ ತಾಲೂಕಾಡಳಿತ ಸೌಧದ ಸಭಾಂಗಣದಲ್ಲಿ ವಿಧಾನಸಭೆ ವಿಪಕ್ಷ ಮುಖ್ಯ ಸಚೇತಕ ಶಾಸಕ ದೊಡ್ಡನಗೌಡ ಪಾಟೀಲ್ ಅವರೊಂದಿಗೆ ತಹಸೀಲ್ದಾರ್ ಅಶೋಕ ಶಿಗ್ಗಾವಿ ಅವರು ಶ್ರೀ ಕೃಷ್ಣನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ನಂತರ ಮಾತನಾಡಿ, ಶಾಸಕ ದೊಡ್ಡನಗೌಡ ಪಾಟೀಲ್, ಶ್ರೀ ಕೃಷ್ಣ ಬೋಧಿಸಿದ ಭಗವದ್ಗೀತೆ ಜಗತ್ತಿಗೆ ಅತ್ಯಮೂಲ್ಯವಾದ ಕೊಡುಗೆ. ನಾವೆಲ್ಲರೂ ಗೀತೆಯ ಸಾರ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಯಾದವ ಸಮುದಾಯದ ಮುಖಂಡರು ಇದ್ದರು. ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀ ಕೃಷ್ಣನ ಭಾವಚಿತ್ರಕ್ಕೆ ಶ್ರದ್ಧೆ, ಭಕ್ತಿಯಿಂದ ಪೂಜೆ ನೆರವೇರಿಸಲಾಯಿತು. ಪ್ರಾಚಾರ್ಯ ಡಾ.ಎಸ್.ವಿ. ಡಾಣಿ ಮತ್ತು ಉಪನ್ಯಾಸಕರು ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪುಷ್ಪ ಸಮರ್ಪಿಸಿ ಗೌರವ ಸಲ್ಲಿಸಿದರು.

ಬೀದಿ ಬದಿ ವ್ಯಾಪಾರಿಗಳ ಸಾಲ ಸೌಲಭ್ಯಕ್ಕೆ ಕ್ರಮ

ರಾಯಚೂರು: ನಗರ ಸೇರಿದಂತೆ ರಾಯಚೂರು ಜಿಲ್ಲೆಯ ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಇವುಗಳ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕರ್ನಾ ಟಕ ಪ್ರದೇಶ ಕಾಂಗ್ರೆಸ್ ಬೀದಿ ಬದಿ ವ್ಯಾಪಾರಿ ವಿಭಾಗದ ರಾಜ್ಯ ಮುಖಂಡರಾದ ಚನ್ನವೀರ ಅವರು ಹೇಳಿದರು.

ಅವರು ನಗರದ ಪತ್ರಿಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ವ್ಯಾಪಕವಾ ಗಿದ್ದು, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಲೈಸೆನ್ಸ್ ನೀಡುವುದು ಸೇರಿದಂತೆ ಈ ಬೀದಿ ಬದಿ ವ್ಯಾಪಾರಿಗಳಿಗೆ ಸುಗಮ ವಾಗಿ ವ್ಯಾಪಾರ ವಹಿವಾಟು ನಿರ್ವ ಹಣೆ ಮತ್ತು ಸಾಲ ಸೌಲಭ್ಯಗಳ ಬಗ್ಗೆ ಅನೇಕ ಸಮಸ್ಯೆಗಳಿವೆ.

ಕೇಂದ್ರ ಸರಕಾರದಿಂದ ಬೀದಿಬದಿ ವ್ಯಾಪಾ ರಗಳಿಗೆ 10 ಸಾವಿರದಿಂದ 2.5 ಲಕ್ಷ ರುಪಾಯಿ ಸಾಲ ಸೌಲಭ್ಯ ಇದೆ. ಆದರೆ ಈ ಸಾಲುಸ್ಕರು ಬೀದಿಬದಿ ವ್ಯಾಪಾರಿಗಳಿಗೆ ಸಮರ್ಪಕವಾಗಿ ದೊರೆಯುತ್ತಿಲ್ಲ ಎನ್ನುವ ದೂರುಗಳು ವ್ಯಾಪಕವಾಗಿದೆ.

ಎಲ್ಲ ಸಮಸ್ಯೆಗಳ ಬಗ್ಗೆ ಕುಲಂ ಕುಶವಾಗಿ ಚರ್ಚಿಸಿ ಬೀದಿ ಬದಿ ವ್ಯಾಪಾರಿಗಳಿಗೆ ಸರಳ ಮತ್ತು ಸುಗಮ ರೀತಿಯಲ್ಲಿ ತಮ್ಮ ವ್ಯಾಪಾರ ವಹಿವಾಟು ನಿರ್ವಹಿಸಲು ಅನುಕೂಲಕರ ವಾದಂತಹ ಸೌಕರ್ಯಗಳೊಂದಿಗೆ ಸಾಲ ಸೌಲಭ್ಯ ಸುಲಭವಾಗಿ ದೊರೆ ಯುವಂತೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ ಮಾತನಾ ಡಿದ ಯೇಸು ಮಿತ್ರ ಜಿಲ್ಲೆಯಲ್ಲಿ 1650 ಬೀದಿ ವ್ಯಾಪಾರಿಗಳಿದ್ದಾರೆ ಇವರಲ್ಲಿ ಅನೇಕರಿಗೆ ಕೆಲ ತಾಂತ್ರಿಕ ಸಮಸ್ಯೆಗಳಿವೆ ಬೀದಿ ವ್ಯಾಪಾರಿಗಳಿಗೆ ಸುಗಮ ವ್ಯಾಪಾರ ವಹಿವಾಟು ನಿರ್ವಹಣೆಯೊಂದಿಗೆ ಸಾಲ ಸೌಲಭ್ಯವು ಸಮರ್ಪಕವಾಗಿ ದೊರೆಯಬೇಕು ಎಂದು ಆಗ್ರಹಿಸಿದರು.

ನಗರದ ಪತ್ರಿಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಚನ್ನವೀರ ಮಾತನಾಡಿದರು.

ಬೀದಿ ವ್ಯಾಪಾರಿಗಳ ಸಮಸ್ಯೆ ಗಳ ಬಗ್ಗೆ ಅವರೊಂದಿಗೆ ಚರ್ಚಿಸಿ ಈ ಕುರಿತು ಎಲ್ಲಾ ಸಮಗ್ರ ಮಾಹಿತಿ ಸಂಗ್ರಹಿಸಿ ರಾಜ್ಯ ಮುಖಂಡರ ಗಮನಕ್ಕೆ ತರಲಾಗುತ್ತದೆ.
- ಚನ್ನವೀರ, ಮುಖಂಡ

ಶ್ರೀ ಕೃಷ್ಣ ಜನ್ಮಾಷ್ಟಮಿ ರಥ ಮೆರವಣಿಗೆ

ರಾಯಚೂರು: ಶ್ರೀ ಕೃಷ್ಣ ಜನ್ಮಾಷ್ಟಮಿ ನಿಮಿತ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ನಗರಸಭೆ ಹಾಗೂ ಜಿಲ್ಲಾ ಯಾದವ ಸಮಾಜದ ಸಂಯುಕ್ತ ಆಶ್ರಯದಲ್ಲಿ ಶ್ರೀ ಕೃಷ್ಣ ಜಯಂತ್ಯೋತ್ಸವ ರಥ ಮೆರವಣಿಗೆ ಮಾಡಲಾಯಿತು.

ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆಯ ಸಚಿವ ಎನ್‌ಎಸ್ ಬೋಸರಾಜು ಅವರು ಶ್ರೀ ಕೃಷ್ಣನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಮೆರವಣಿಗೆ ಚಾಲನೆ ನೀಡಿದರು.

ಮೆರವಣಿಗೆಯು ನಗರದ ವಿವಿಧ ರಸ್ತೆಯಲ್ಲಿ ಸಂಚರಿಸಿ ಕೃಷ್ಣ ದೇವ ಸ್ಥಾನದವರೆಗೆ ನಡೆಯಿತು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು, ಮಕ್ಕಳು ಕೃಷ್ಣ ರಾಧೆಯ ವೇಷ ಧರಿಸಿದ್ದು ಎಲ್ಲರ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ನಗರ ಸಭೆ ಸದಸ್ಯ ಜಯಣ್ಣ, ಕೆ ಶಾಂತಪ್ಪ, ಮಾಜಿ ಅಧ್ಯಕ್ಷರಾದ ತಿಮ್ಮಪ್ಪ ನಾಡ ಗೌಡ, ಜಿ ಶಿವ ಮೂರ್ತಿ, ರುದ್ರಪ್ಪ ಅಂಗಡಿ, ರಮೇಶ ಯಾದವ್ ಸೇರಿ ಅನೇಕರು ಉಪಸ್ಥಿತರಿದ್ದರು.



ಶ್ರೀ ಕೃಷ್ಣ ಜನ್ಮಾಷ್ಟಮಿ ನಿಮಿತ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ನಗರಸಭೆ ಹಾಗೂ ಜಿಲ್ಲಾ ಯಾದವ ಸಮಾಜದ ಸಂಯುಕ್ತ ಆಶ್ರಯದಲ್ಲಿ ಶ್ರೀ ಕೃಷ್ಣ ಜಯಂತ್ಯೋತ್ಸವ ರಥ ಮೆರವಣಿಗೆ ಮಾಡಲಾಯಿತು.

ಅವಧೂತ ಶ್ರೀಸಿದ್ದಾರೂಢರ ರಥೋತ್ಸವ

ಗಂಗಾವತಿ: ತಾಲೂಕಿನ ಹೇರೂರು ಗ್ರಾಮದ ಅವಧೂತ ಶ್ರೀಗುರು ಸಿದ್ದಾರೂಢ ತಾತನ ಮಠದ 25ನೇ ಜಾತ್ರಾ, ಮಹೋತ್ಸವದ ಅಂಗವಾಗಿ ರಥೋತ್ಸವ ಶ್ರಾವಣ ಮಾಸದ ಕಡೆಯ ಸೋಮವಾರ ಸಂಜೆ ಅಪಾರ ಸಂಖ್ಯೆಯ ಭಕ್ತರ ನಡುವೆ ಶ್ರದ್ಧಾಭಕ್ತಿಯಿಂದ ನಡೆಯಿತು.

ಬೆಳಗ್ಗೆ ಸಿದ್ದಾರೂಢ ತಾತನ ಮೂರ್ತಿಗೆ ಅಭಿಷೇಕ, ಪೂಜೆ, ಬಿಲ್ವಾರ್ಚನೆ, ವಿಶೇಷ ಅಲಂಕಾರ ಸೇರಿದಂತೆ ವಿಶೇಷ ಪೂಜೆಗಳು ಜರುಗಿದವು. ಬಳಿಕ ನೂತನ ರಥಕ್ಕೆ ರಥಾಂಗ ಹೋಮ ನಡೆಯಿತು. ನಂತರ ಜಾತ್ರಾಮಹೋತ್ಸವ ನಿಮಿತ್ತ ಕಳೆದ 11 ದಿನಗಳಿಂದ ಸುಜ್ಞಾನ ದೇವ ಪ್ರಶಸ್ತಿ ಪುರಸ್ಕೃತ ಖ್ಯಾತ ಪ್ರವಚನಕಾರ ಬಾಬುಸಾಬ ಪುರಾಣಿಕರಿಂದ ನಡೆದ ಅವಧೂತ ಶ್ರೀಸಿದ್ಧಾರೂಢ ತಾತನ ಪುರಾಣ ಮಂಗಲೋತ್ಸವ ನಡೆಯಿತು. ಬಳಿಕ ಮಧ್ಯಾಹ್ನ ಭಕ್ತರಿಗೆ ವಿಶೇಷ ಪ್ರಸಾದ ಕಲ್ಪಿಸಲಾಗಿತ್ತು.



ಸಂಜೆ 5.30ರ ಸುಮಾರಿಗೆ ಹೆಬ್ಬಾಳ ಮಠದ ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ, ಹಗರಿಬೊಮ್ಮನಹಳ್ಳಿಯ ಹಾಲಶಂಕರ ಶ್ರೀಮಠದ ಸ್ವಾಮೀಜಿ ಸಾನ್ನಿಧ್ಯ ಹೇರೂರು ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ಶ್ರೀ ಸಿದ್ದಾರೂಢಉತ್ಸವ ಮೂರ್ತಿಯನ್ನು ರಥದಲ್ಲಿರಿಸಿ ವಿಶೇಷ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ

10ನೇ ಅವಧಿಗೆ ಮುದಗಲ್ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷರ, ಸ್ಥಾನಕ್ಕೆ ಚುನಾವಣೆ ನಡೆಯಿತು.

ಮುದಗಲ್: 10ನೇ ಅವಧಿಗೆ ಮುದಗಲ್ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷರ, ಸ್ಥಾನಕ್ಕೆ ಚುನಾವಣೆ ಸೋಮವಾರ ನಡೆಯಿತು. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಒಂದು ನಾಮಪತ್ರ ಸಲ್ಲಿಸಿದ ಹಿನ್ನಲೆಯಲ್ಲಿ ಅಧ್ಯಕ್ಷರಾಗಿ ಮಾಹಾದೇವಮ್ಮ ನರಸಯ್ಯ ಗುತ್ತೇದಾರ, ಉಪಾಧ್ಯಕ್ಷರಾಗಿ ಅಜ್ಮೀರ್ ಬೆಳ್ಳಿಕಟ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿ ಹಾಗೂ ಲಿಂಗಸುಗೂರ ತಹಶೀಲ್ದಾರ ಶಂಶಾಲಂ ಘೋಷಣೆ ಮಾಡಿದರು.

ನಂತರ ನೂತನ ಅಧ್ಯಕ್ಷರಿಗೆ ಉಪಾಧ್ಯಕ್ಷರಿಗೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಸನ್ಮಾನ ಮಾಡಿ ಅಭಿನಂದಿಸಿ ಪಟಾಕಿ ಸಿಡಿಸಿ ಪರಸ್ಪರ ಬಣ್ಣ ಎರಚಿ ಸಂಭ್ರಮಾಚರಣೆ ಮಾಡಿದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ನಬಿ, ಎಂ, ಕಂದಗಲ್, ಸದಸ್ಯರಾದ ಮೈಬುಬಸಾಬ ಕಡ್ಡಿಪುಡಿ, ತಸ್ಲಿಂ ಮಲ್ಲಾ, ಶಿವನಾಗಪ್ಪ ಬಡಕುರಿ, ಸೈಯದಸಾಬ, ಹನುಮಂತ ವಾಲ್ಮೀಕಿ ಎಸ್ ಆರ್ ರಸೂಲ್, ಲಿಂಗಸುಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ ಮುದಗಲ್ ಬ್ಲಾಕ್ ಅಧ್ಯಕ್ಷ ಶಿವಶಂಕರಗೌಡ, ಹಿರಿಯ ಮುಖಂಡ ದಾವುದಸಾಬ, ತಮ್ಮಣ್ಣ ಗುತ್ತೇದಾರ, ಮುನ್ನಾಬಾಯಿ, ಮೈಬುಬಸಾಬ ಬಾರಿಗಿಡ, ಹಸನಅಲಿ ರಾಘವೇಂದ್ರ ಕುದರಿ,ಸೇರಿದಂತೆ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ವಾರಸುದಾರರ ಪತ್ತೆಗೆ ಪೊಲೀಸರ ಮನವಿ

ರಾಯಚೂರು: ರಾಯಚೂರು ಮಡಿವಾಳ ಮಾಚಿದೇವ ವೃತ್ತದ ರಾಯಲ್ ಓಕ್ ಕಂಪೌಡ್ ಗೋಡೆಯ ಪಕ್ಕದ ಫುಟ್‌ಪಾತ್ ಮೇಲೆ ಸುಮಾರು 60 ರಿಂದ 65 ವರ್ಷದ ಅಪರಿಚಿತ ಮೃತದೇಹ ಪತ್ತೆಯಾಗಿದ್ದು. ಯಾವುದೋ ಖಾಯಿಲೆಯಿಂದ ಮೃತ್ತಪಟ್ಟಿದಾನೆ ಎಂದು ಪೊಲೀಸರು ಅಂದಾಜಿಸಿದ್ದಾರೆ. ಈ ಕುರಿತು ನೇತಾಜಿ ನಗರ ಪೊಲೀಸ್ ಠಾಣೆಯಲ್ಲಿ ಯುಡಿಆರ್ .ನಂ02/2024 ಕಲಂ174 ಸಿಆರ್.ಪಿಸಿ ಪ್ರಕಾರ ಪ್ರಕರಣ ದಾಖಲಿಸಿ ತನಿಖೆ ನಡೆಯುತ್ತಿದೆ. ಮೃತನ ಚಹರೆ ಪಟ್ಟಿ: 5.4 ಫೀಟ್ ಎತ್ತರ ಇರುವ, ಸಾಧಾರಣ ತೆಳ್ಳನೆಯ ಮೈಕಟ್ಟು, ದುಂಡು ಮುಖ, ಸಾದಾ ಕಪ್ಪು ಬಣ್ಣ, ತಲೆಯಲ್ಲಿ ಬಿಳಿ ಕೂದಲು, ಬಿಳಿ ಗಡ್ಡ, ಸಣ್ಣ ಮೂಗನ್ನು ಹೊಂದಿರುತ್ತಾನೆ. ಪಿಂಕ್ ಬಣ್ಣದ ಫುಲ್ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಈ ಚಹರೆ ಪಟ್ಟಿಯನ್ನು ಹೋಲುವ ವ್ಯಕ್ತಿಯ ವಾರಸುದಾರರು ಸಂಬಂಧಿಕರು ಸಿಕ್ಕಲ್ಲಿ ನೇತಾಜಿನಗರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08532 24022 ಅಥಾವ 08532 235100 ಅಥಾವ ರಾಯಚೂರು ನಗರ ಪೊಲೀಸ್ ಕಂಟ್ರೋಲ್ ರೂಂ 08532 235635, 9480803800, ಪಿ.ಎಸ್.ಐ 9480803846 ಹಾಗೂ ಸಿಪಿಐ 9480803831 ಪಶ್ಚಿಮ ವೃತ್ತ ರಾಯಚೂರು ಇಲ್ಲಿಗೆ ತಿಳಿಸುವಂತೆ ನೇತಾಜಿ ನಗರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ವೈದ್ಯೆ ಅತ್ಯಾಚಾರ ಖಂಡಿಸಿ ಪ್ರತಿಭಟನೆ



ಸರಕಾರದ ವಿರುದ್ಧ ಕುಷ್ಟಗಿ ಪಟ್ಟಣದಲ್ಲಿ ಸೋಮವಾರ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿತು.

ಕುಷ್ಟಗಿ: ಕೋಲ್ಕತ್ತಾದ ಆರ್ ಜಿ ಕಾರ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಿ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಸರಕಾರದ ವಿರುದ್ಧ ಪಟ್ಟಣದಲ್ಲಿ ಸೋಮವಾರ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಪ್ರತಿಭಟನೆ ನಡೆಯಿತು.

ಪಟ್ಟಣದ ಕಾರ್ಗಿಲ್ ಹುತಾತ್ಮ ವೀರಯೋಧ ಮಲ್ಲಯ್ಯ ವೃತ್ತದಲ್ಲಿ ಎಬಿವಿಪಿ ನೇತೃತ್ವದಲ್ಲಿ ಬಿ.ಜಿ. ಎಸ್ ಪ್ಯಾರ ಮೆಡಿಕಲ್ ಕಾಲೇಜ್, ಅನ್ನದಾನೇಶ್ವರ ಪಿಯು ಕಾಲೇಜು, ಎಸ್.ವಿ.ಎಂ. ಕಾಲೇಜಿನ ನೂರಾರು ವಿದ್ಯಾರ್ಥಿಗಳು ಸಮಾವೇಶಗೊಂಡರು. ಬಳಿಕ ಮಾರುತಿ ವೃತ್ತ, ಬಸವೇಶ್ವರ ವೃತ್ತ, ವಾಲ್ಮೀಕಿ ವೃತ್ತ, ಕಾಲೇಜು ರಸ್ತೆ ಮಾರ್ಗವಾಗಿ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿದರು. ಇತ್ತೀಚೆಗೆ ಕೊಲ್ಕತ್ತಾದ ಆರ್.ಜಿ. ಕಾರ್ ವೈದ್ಯಕೀಯ ಕಾಲೇಜಿನ ಸೆಮಿನಾರ್ ಹಾಲನಲ್ಲಿ ಸ್ನಾತಕೋತ್ತರ ತರಬೇತಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಖಂಡಿಸಿದರು. ಆರೋಪಿಗಳಿಗೆ ಗಲ್ಲು ಶಿಕ್ಷೆ ಆಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳದಲ್ಲಿ ಮೊದಲಿನಿಂದಲೂ ಮಹಿಳೆಯರ ಮೇಲೆ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ನಡೆಯುತ್ತಾ ಬರುತ್ತಿವೆ. ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆರೋಪಿಗಳ ಮೇಲೆ ಯಾವುದೇ ಕಠಿಣ ಕ್ರಮ ಕೈಗೊಳ್ಳದೇ ದುಷ್ಕರ್ಮಿಗಳ ರಕ್ಷಣೆಗೆ ಯತ್ನಿಸುತ್ತಿದೆ. ಈ ಹಿಂದೆ ಟಿಎಂಸಿ ಗೂಂಡಾಗಳಿಂದ ಇಂತಹ ಕೃತ್ಯಗಳು ನಡೆದಾಗ ಮಮತಾ ಬ್ಯಾನರ್ಜಿ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಯಾವುದೇ ಭಯವಿಲ್ಲದೆ ಅತ್ಯಾಚಾರಿಗಳು ಕಾಲೇಜು ಸೆಮಿನಾರ್ ಹಾಲ್‌ಗೆ ನುಗ್ಗಿ ಕೃತ್ಯ ಎಸಗುವಂತಾಗಿದೆ ಎಂದು ಮಮತಾ ಬ್ಯಾನರ್ಜಿ ಸರ್ಕಾರದ ಧೋರಣೆ ವಿರುದ್ಧ ಬರೆದ ಮನವಿ ಪತ್ರವನ್ನು ತಹಸೀಲ್ದಾರ್ ಅಶೋಕ ಶಿಗ್ಗಾವಿ ಅವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ನಗರ ಕಾರ್ಯದರ್ಶಿ ವಿನೋದ ಸಿಂಗ್, ಕೊಪ್ಪಳ ಜಿಲ್ಲಾ ಸಂಚಾಲಕ ಶಶಾಂಕ ಪಾಟೀಲ್, ಹನುಮೇಶ, ಕೇದಾರ, ಮೋಹನ, ಶರಣು, ದೊಡ್ಡಬಸುವ, ಅರವಿಂದ ಜಿ., ರಾಚೋಟಯ್ಯ, ಶಿವುಕುಮಾರ, ಮುದುಕಯ್ಯ, ಮಹೇಶ, ಮಂಜುನಾಥ ಇತರರಿದ್ದರು.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ರಾಯಚೂರು: ಇಲ್ಲಿಯ ಜಿಲ್ಲಾ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024-25ನೇ ಸಾಲಿಗೆ ರಾಷ್ಟ್ರೀಯ ವಿದ್ಯಾರ್ಥಿ ಯೋಜನೆಯಡಿಯಲ್ಲಿ ಪ್ರೀ-ಮೆಟ್ರಿಕ್ ಹಾಗೂ ಪೋಸ್ಟ್‌ಮೆಟ್ರಿಕ್ ವಿದ್ಯಾರ್ಥಿ ವೇತನಕ್ಕೆ ವಿಶೇಷಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಾದ ಶ್ರೀದೇವಿ ಎಸ್.ಎನ್ ಅವರು ತಿಳಿಸಿದ್ದಾರೆ. ಆಸಕ್ತರ ವಿಶೇಷಚೇತನ ವಿದ್ಯಾರ್ಥಿಗಳು ಪ್ರೀ-ಮೆಟ್ರಿಕ್ ಇದೇ 2024ರ ಆ.31 ವ್ಯಾಸಂಗ ಮಾಡುತ್ತಿರುವವರು ವಿಕಲಚೇತನ ವಿದ್ಯಾರ್ಥಿಗಳು ಅಕ್ಟೋಬರ್ 31ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಪರಿಶೀಲಿಸಿ ಆಯಾ ಶಾಲಾ, ಕಾಲೇಜುಗಳ ಅವರು ಕೇಂದ್ರ ಸರ್ಕಾರದ ಪೋರ್ಟಲ್ ಮೂಲಕ ದಾಖಲಿಸಬೇಕಾಗಿರುತ್ತದೆ. 9ಮತ್ತು 10ನೇ ತರಗತಿಯ ವಿಕಲಚೇತನ ವಿದ್ಯಾರ್ಥಿಗಳು ರಾಷ್ಟ್ರೀಯ ವಿದ್ಯಾರ್ಥಿ ಯೋಜನೆ ಮೂಲಕ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಜಿಲ್ಲೆಯ ಶೈಕ್ಷಣಿಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರು, ಸೂಕ್ತ ಮಾರ್ಗದರ್ಶನ ನೀಡಿ ಅರ್ಜಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಲ್ಲಿಸಲು ಅಗತ್ಯ ಕ್ರಮವಹಿಸುವಂತೆ ಮಾನ್ಯ ನಿರ್ದೇಶಕರು, ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಬೆಂಗಳೂರು ಅವರು ಸೂಚಿಸಿ ಆದೇಶ ಹೊರಡಿಸಿದ್ದಾರೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿತ್ತ ವಿಹಾರ

ಹೊಸತನದತ್ತ ಹೆಜ್ಜೆ

ಅಕಸ್ಮಿಕವಾಗಿ ಬದುಕಿನಲ್ಲಿ ನಡೆದ ತಪ್ಪುಗಳಿಗಾಗಿ ಕೆಲವು ಬಾರಿ ನಮ್ಮನ್ನೆ ಶಿಕ್ಷಿಸಿಕೊಳ್ಳಲು ಮುಂದಾಗುತ್ತವೆ. ಇದು ತುಂಬ ಸುಲಭವಾದ ಕೆಲಸ. ಉಪಯೋಗಕ್ಕೆ ಬಾರದ ಸಂಬಂಧಗಳು ವಿಫಲವಾದಾಗ, ವ್ಯವಹಾರದಲ್ಲಿನ ನಷ್ಟ ಉಂಟಾದಾಗ, ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷಿತ ಫಲಿತಾಂಶ ಬಾರದೇ ಇದ್ದಾಗ, ಹತಾಶೆಗೆ ಒಳಗಾಗುತ್ತೇವೆ. ಸಂಪ್ರದಾಯಗಳ ಕುರುಡು ನಂಬಿಕೆಗಳ ಬಲೆಯಲ್ಲಿ ಬಂಧಿತರಾಗಿ ನಮ್ಮನ್ನು ಬದುಕನ್ನು ಇನ್ನಷ್ಟು ವಿಷಮಗೊಳಿಸಿಕೊಳ್ಳುತ್ತೇವೆ.

ಮಹಾಭಾರತದ ಗಾಂಧಾರಿ ಮದುವೆಯ ನಂತರದಲ್ಲಿ ತನ್ನ ಪತಿ ಧೃತರಾಷ್ಟ್ರ ಹುಟ್ಟು ಕುರುಡ ಎಂಬ ಸಂಗತಿಯನ್ನು ಅರಿಯುತ್ತಾಳೆ.'ದೇ ತಕ್ಷಣವೇ ಅವಳು ತನ್ನ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ತನ್ನೆಲ್ಲ ಬದುಕನ್ನು ಕುರುಡಿಯಾಗಿಯೇ ಕಳೆಯುವ ನಿರ್ಧಾರಕ್ಕೆ ಬಂದು ಬಿಡುತ್ತಾಳೆ. ತನ್ನ ಪತಿಗೆ ಇಲ್ಲದ ಭಾಗ್ಯ ನನಗೂ ಬೇಡ ಎನ್ನುವ ಹಿನ್ನೆಲೆಯಲ್ಲಿ ಕುರುಡುತನವನ್ನು ತಾನು ಅನುಭವಿಸಬೇಕೆಂಬ ಪತಿನಿಷ್ಠೆ ಅವಳದಾಗಿದ್ದರೂ ಕೂಡ ಗಾಂಧಾರಿ ಆ ಕ್ಷಣಕ್ಕೆ ತೆಗೆದುಕೊಂಡ ನಿರ್ಧಾರದಿಂದ ಕಕ್ಕಿಟುಂಬದ ಭವಿಷ್ಯಕ್ಕೆ ತೊಡಕಾಗುತ್ತದೆ. ಆಕೆ ಬದುಕಿನ ತುಂಬ ನೋವು ತಳಮಳವನ್ನು ಅನುಭವಿಸುತ್ತಾಳೆ. ಅವಳ ಮಕ್ಕಳೆಲ್ಲರೂ ತಾಯಿ ಮತ್ತು ತಂದೆಯ ಸರಿಯಾದ ಮಾರ್ಗದರ್ಶನದಿಂದ ವಂಚಿತರಾಗಿ, ನ್ಯಾಯದ ಹಾದಿಯನ್ನು ಬಿಡುತ್ತಾರೆ. ಇದು ಅವರೆಲ್ಲರ ಸರ್ವನಾಶಕ್ಕೆ ಕಾರಣವಾಗುತ್ತದೆ. ಗಾಂಧಾರಿ ತನ್ನ ಮಕ್ಕಳಿಗಾಗಿಯಾದರೂ ತನ್ನ ನಿರ್ಧಾರವನ್ನು ಬದಲಾಯಿಸಿದ್ದರೆ ಪರಿಸ್ಥಿತಿಯು ಬದಲಾವಣೆಯಾಗಲು ಸಾಧ್ಯವಿತ್ತು ಎನ್ನುವ ಮಾತು ಸುಳ್ಳಲ್ಲ.

ಬದುಕಿನ ಬಹುತೇಕ ಸಂದರ್ಭದಲ್ಲಿ ನಮಗೆ ಅರಿವಿದ್ದೋ, ಅರಿವಲ್ಲದೆಯೋ ತಪ್ಪುಗಳು, ಅವಘಡಗಳು ಸಂಭವಿಸುವುದು ಸಹಜವೇ. ಅವುಗಳಿಂದ ಕುಗ್ಗಿ ಹೋಗದೇ ಒಂದಷ್ಟು ತಾಳ್ಮೆ ವಹಿಸಬೇಕು. ಸಾಧ್ಯವಾದ ಎಲ್ಲ ದೃಷ್ಟಿಕೋನಗಳಿಂದ ಪರಿಹಾರಗಳನ್ನು ಪರಿಶೋಧಿಸಬೇಕು. ಸಮಾಧಾನಿಸಿಕೊಳ್ಳಬೇಕು. ಹೊಸತನದತ್ತ ಹೆಜ್ಜೆ ಹಾಕಬೇಕು.

● ಮಹಾದೇವ ಬಸರಕೋಡ

ಕಾಶ್ಮೀರದ ಸೈಲೆಂಟ್ ಮೆಡೋಸ್ ಚಾರಣದ ಸಮಯದಲ್ಲಿ ಒಂದು ಹಳ್ಳಿಯ ಮನೆಯ ಕಿಟಕಿಯಿಂದ ನಮ್ಮನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ವೃದ್ಧ ಮಹಿಳೆ. ಚಿತ್ರ: ಪ್ರಕಾಶ ಹೆಗಡೆ

ಗೋವಿಂದಾ ಆಲಾ ರೆ...

ಮೊಸರು ಕುಡಿಕೆ ಅಥವಾ ದಹಿ ಹಂಡಿಯನ್ನು ಒಡೆಯುವ ಸ್ಪರ್ಧೆಯು ವಿಶೇಷವಾಗಿ ನಡೆಯುವುದು ಮುಂಬಯಿಯಲ್ಲಿ. ಹಲವು ತಂಡಗಳು ಇದಕ್ಕಾಗಿ ಮಾನವ ಪಿರಮಿಡ್ ಕಟ್ಟುವುದನ್ನು ನೋಡುವುದೇ ಒಂದು ಸಂಭ್ರಮ.

● ಶ್ರೀನಿವಾಸ ಜೋಕಟ್ಟೆ, ಮುಂಬೈ

ದೇಶದೆಲ್ಲೆಡೆ ಶ್ರೀ ಕೃಷ್ಣಜನ್ಮಾಷ್ಟಮಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದರೂ ಮುಂಬೈನಲ್ಲಿ ಈ ಹಬ್ಬವನ್ನು ಆಚರಿಸುವ ರೀತಿ ಸಂಪೂರ್ಣ ವಿಭಿನ್ನ ಮತ್ತು ರೋಚಕವಾಗಿದೆ.

ಟಿಪಿಕಲ್ ಮರಾಠಿ ಶೈಲಿಯ 'ಗೋವಿಂದಾ ಆಲಾ ರೆ...' ಹಾಡು ಗೋಕುಲಾಷ್ಟಮಿಯ ಮರುದಿನ ಮುಂಬಯಿಯ ಗಲ್ಲಿಗಲ್ಲಿಗಳಲ್ಲಿ ಕೇಳಿಸಿಕೊಳ್ಳುತ್ತೇವೆ. ಕೊರೊನಾ ಕಾಲದಲ್ಲಿ ಮಾತ್ರ ಎರಡು ವರ್ಷ ಸ್ತಬ್ಧಗೊಂಡಿದ್ದು ಹೊರತುಪಡಿಸಿದರೆ ಈ ದಹಿಹಂಡಿ ಉತ್ಸವದ ಉತ್ಸಾಹ ಎಂದೂ ಬತ್ತಿಹೋಗಿದ್ದೇ ಇಲ್ಲ. ಮಾನವ ಮಿನಾರ್ ಎಂದರೆ ಮರಾಠಿ ತರುಣರಿಗೆ ಎಲ್ಲಿಲ್ಲದ ಉತ್ಸಾಹ. ಗುರುಪೂರ್ಣಿಮೆಯ ದಿನದಿಂದ ಮಾನವ ಮಿನಾರ್ ನಿರ್ಮಿಸುವ ತರಬೇತಿಯನ್ನು ಪಡೆದು ಅದನ್ನು ವಿಟ್ಲಪಿಂಡಿಯ ದಿನ ಪ್ರದರ್ಶಿಸುವ ಅವಕಾಶ. ಅಂದು ಮುಂಬಯಿಯ ಗಲ್ಲಿ ಗಲ್ಲಿಗಳಲ್ಲಿ ಗೋವಿಂದಾ ತಂಡಗಳ ಸಂಭ್ರಮದ ಓಡಾಟ. ಅವರ ಕಣ್ಣುಗಳು ಕಟ್ಟಡದಿಂದ ಕಟ್ಟಡಕ್ಕೆ ಹಗ್ಗದಲ್ಲಿ ಕಟ್ಟಿದ ಮೊಸರಿನ ಮಡಕೆಗಳನ್ನು ಹುಡುಕುತ್ತಿರುತ್ತವೆ.

ಜನ್ಮಾಷ್ಟಮಿಯ ಸಂದರ್ಭದಲ್ಲಿ ಸೊಸೈಟಿಗಳು, ಸಂಸ್ಥೆಗಳು ರಸ್ತೆಗಳಲ್ಲಿ, ಜಂಕ್ಷನ್‌ಗಳಲ್ಲಿ ಮತ್ತು ಸಾರ್ವಜನಿಕ ಮೈದಾನಗಳಲ್ಲಿ ಹೂವಿನಿಂದ ಅಲಂಕರಿಸಿದ ದಹಿಹಂಡಿಗಳನ್ನು ಕಟ್ಟುತ್ತಾರೆ. ಆಯಾಯ ಆಯೋಜಕ ಸಂಸ್ಥೆಗಳ ಬಣ್ಣಬಣ್ಣದ ಉಡುಗೆ ತೊಟ್ಟ ನಾನಾಗೋವಿಂದಾ ತಂಡಗಳು ದಿನವಿಡೀ ಟ್ರಕ್, ಟೆಂಪೋ, ಬಸ್, ದ್ವಿಚಕ್ರ ವಾಹನಗಳಲ್ಲಿ ಸಂಚರಿಸುತ್ತಿರುವ ದೃಶ್ಯ ಕಾಣುವುದೇ ಸಂಭ್ರಮ.

ಮಹಾರಾಷ್ಟ್ರದ ಪ್ರಮುಖ ಉತ್ಸವಗಳಲ್ಲಿ ಗಣೇಶೋತ್ಸವ ಹೊರತುಪಡಿಸಿದರೆ ಶ್ರೀಕೃಷ್ಣ ಜನ್ಮಾಷ್ಟಮಿಯ ಮರುದಿನದ 'ದಹಿಹಂಡಿ'ಗೆ (ಮೊಸರು ಕುಡಿಕೆ) ತನ್ನದೇ ಆದ ಮಹತ್ವವಿದೆ. ಮಾನವ ಪಿರಮಿಡ್ಡುಗಳ ಮೂಲಕ ವಿಟ್ಲಪಿಂಡಿ ದಿನದಂದು ಎತ್ತರದಲ್ಲಿ ಕಟ್ಟಿದ್ದ ಈ ಮೊಸರಿನ ಮಡಕೆಯನ್ನು ತಲುಪಿ ಅದನ್ನು ಒಡೆಯುವ ಈ ದೃಶ್ಯವನ್ನು ವೀಕ್ಷಿಸಲು ದೇಶ ವಿದೇಶಗಳಿಂದ ಪ್ರವಾಸಿಗರೂ ಆ ದಿನಗಳಲ್ಲಿ ಇಲ್ಲಿಗೆ ಬರುವುದಿದೆ.



ಆಗಸ್ಟ್ 27 ರಂದು 'ಗೋವಿಂದ ಆಲಾ ರೇ ಆಲ' ಎಂಬ ಪ್ರತಿಧ್ವನಿ ನಗರದಾದ್ಯಂತ ಕೇಳಿ ಬರಲಿದೆ. 30– 40 ಅಡಿಗಳಷ್ಟು ಎತ್ತರದಲ್ಲಿ ನೇತಾಡುವ ಮೊಸರು ಮತ್ತು ಅರಿಶಿನ ತುಂಬಿದ ಮಡಕೆಗಳನ್ನು ತಂಡಗಳು ಒಡೆಯುತ್ತವೆ. ಇಂತಹ ತಂಡಗಳು 9 ಅಥವಾ 10 ಅಂತಸ್ತುಗಳ ಮಾನವ ಗೋಪುರಗಳನ್ನು ನಿರ್ಮಿಸಲೂ ಪ್ರಯತ್ನಿಸುತ್ತವೆ.

ಕಾಲಕ್ಕೆ ತಕ್ಕಂತೆ ಜನ್ಮಾಷ್ಟಮಿ ಹಬ್ಬವೂ ಸಾಕಷ್ಟು ಬದಲಾಗಿದೆ. ದಹಿ ಹಂಡಿ ಸ್ಪರ್ಧೆಯನ್ನು ಆಯೋಜಿಸುವ ಸಮಿತಿಗಳು ಅನೇಕ ಚಲನಚಿತ್ರ ಗಣ್ಯರನ್ನು ಆಹ್ವಾನಿಸುತ್ತವೆ. ಕೋಟಿಗಟ್ಟಲೆ ಹಣ ನೀರಿನಂತೆ ಖರ್ಚು ಮಾಡುತ್ತಾರೆ. ರಾಜಕಾರಣಿಗಳು ಪ್ರಾಯೋಜಿಸಿದ ಅನೇಕ ದಹಿ ಹಂಡಿಗಳನ್ನು ಮುಂಬೈ ಮತ್ತು ಥಾಣೆಯಲ್ಲಿ ಕಾಣಬಹುದು.

ಕಟ್ಟಿದ ದಹಿಹಂಡಿ ತಲುಪುವ ತನಕ ಎಂಟು – ಹತ್ತು ಸ್ತರದ ಮಾನವ ಮಿನಾರ್ ಕಟ್ಟುವ 'ಗೋವಿಂದಾ ತಂಡ' ಗಳ ಜೊತೆ ಇತ್ತೀಚಿನ ವರ್ಷಗಳಲ್ಲಿ ಗೋಪಿಕೆಯರ ತಂಡವೂ ಸಕ್ರಿಯವಾಗಿದೆ.

ಐದು, ಏಳು , ಒಂಭತ್ತು .... ಸ್ತರದ ಮಾನವ ಪಿರಮಿಡ್ಡುಗಳ ಮೂಲಕ ಹಗ್ಗದಲ್ಲಿ ಕಟ್ಟಿದ ಮೊಸರಿನ ಮಡಕೆಯನ್ನು ತಲುಪುವ ಈ ತರಬೇತಿ ಗುರುಪೂರ್ಣಿಮಯ ಮುಹೂರ್ತದಿಂದ ಆರಂಭಗೊಳ್ಳುತ್ತದೆ. 2012ರಲ್ಲಿ 43.79 ಅಡಿ(13.35 ಮೀಟರ್) ಎತ್ತರದ ಮಾನವ ಪಿರಮಿಡ್ ರಚಿಸಿ ಮುಂಬಯಿಯ ಜೋಗೇಶ್ವರಿಯಲ್ಲಿನ ಜೈ ಜವಾನ್ ಗೋವಿಂದ ಪಥಕ್ ಮಂಡಳಿ ಗಿನ್ನೆಸ್ ದಾಖಲೆ ರಚಿಸಿತ್ತು.

ಯುನಿಫಾರ್ಮ್

ಮಹಾರಾಷ್ಟ್ರದ ರಾಜಕೀಯ ಮುಖಂಡರು ತಮ್ಮದೇ ಆದ ಗೋವಿಂದಾ ಪ್ರತಿಷ್ಠಾನಗಳನ್ನು ಸ್ಥಾಪನೆ ಮಾಡಿದ್ದಾರೆ. ದೊಡ್ಡ ಮೊತ್ತದ ನಗದು ಬಹುಮಾನವನ್ನು ನೀಡುತ್ತಾರೆ. ಪ್ರಮುಖ ಆಯೋಜಕರು ತಮ್ಮದಾದ 'ದಹಿಹಂಡಿ' ಪ್ರತಿಷ್ಠಾನ ಹೆಸರಿನ ಯುನಿಫಾರ್ಮ್‌ನ್ನು ಗೊವಿಂದಾ ತಂಡದ ಸದಸ್ಯರಿಗೆ ನೀಡುತ್ತಾರೆ.

ದಹಿಹಂಡಿಯನ್ನು ಮಾನವ ಪಿರಮಿಡ್ಡುಗಳ ಮೂಲಕ ತಲುಪಲು ಮುಂಬಯಿ ನಗರ ಉಪನಗರಗಳಲ್ಲಿ ನೂರಾರು 'ಗೋವಿಂದಾ' ತಂಡಗಳಿವೆ. ಆ ದಿನ ಬೆಳಿಗ್ಗೆಯಿಂದ ತಮ್ಮ ವಿಶೇಷ ಬಸ್ಸು ಅಥವಾ ಲಾರಿ, ಟೆಂಪೋಗಳಲ್ಲಿ ಈ ತಂಡ ಬ್ಯಾಂಡ್ ಬಾರಿಸುತ್ತಾ, ರಸ್ತೆಗಳಲ್ಲಿ ಓಡಾಡುತ್ತಿರುತ್ತಾರೆ. ಎಲ್ಲಿ ದಹಿಹಂಡಿ ಕಟ್ಟಲಾಗಿದೆಯೋ ಅಲ್ಲಿ ತಮ್ಮ ವಾಹನ ನಿಲ್ಲಿಸುತ್ತಾರೆ ಮತ್ತು ಅದನ್ನು ಒಡೆಯಲು ಮಾನವ ಮಿನಾರ್ ಕಟ್ಟಿ ಪ್ರಯತ್ನಿಸುತ್ತಾರೆ. ಒಂದೊಂದು ತಂಡದಲ್ಲಿ ಇನ್ನೂರು ಮುನ್ನೂರು ಸದಸ್ಯರೂ ಇರುತ್ತಾರೆ.

ಹೆಚ್ಚಿನವರು ಐದು ಅಥವಾ ಆರು ಸ್ತರಕ್ಕೇ ಮಾನವ ಮಿನಾರ್ ಕಟ್ಟುವುದರಲ್ಲೇ ತೃಪ್ತಿ ಪಡುತ್ತಾರೆ. ಹಾಗೂ ತಮ್ಮ ಉಪಸ್ಥಿತಿ ಮಾತ್ರ ತೋರಿಸುತ್ತಾರೆ. ಆದರೆ ಮಿನಾರ್ ಕಟ್ಟಲು ಪ್ರಯತ್ನಿಸಿದ ಪ್ರತೀ ತಂಡಕ್ಕೂ ಆಯೋಜಕರು ಟ್ರೋಫಿ, ಒಂದಿಷ್ಟು ನಗದು ಹಣ ನೀಡುತ್ತಾರೆ. ತಮ್ಮ ಉಪಸ್ಥಿತಿ ದಾಖಲಿಸುವುದಕ್ಕೂ ಕೆಲವು ಗೋವಿಂದಾ ತಂಡಗಳಿಗೆ ಹೆಮ್ಮೆ.

ಮುಂಬಯಿಯಲ್ಲಿ ನಾಲ್ಕುನೂರು, ಐನೂರು ಸದಸ್ಯರಿರುವ ದೊಡ್ಡ ದೊಡ್ಡ ಗೋವಿಂದಾ ಪಥಕ್‌ಗಳೂ ಇವೆ. ಗೋವಿಂದಾ ತಂಡದ ಸದಸ್ಯರುಗಳು ಮಾನವ ಮಿನಾರ್ ಕಟ್ಟುವಾಗ 'ದಹಿಹಂಡಿ' ತಲುಪುವ ಪ್ರಯತ್ನದಲ್ಲಿ ಹಲವರು ಕೆಳಗೆ ಬಿದ್ದು ಗಾಯಗೊಂಡದ್ದೂ ಇದೆ. ಇತ್ತೀಚಿನ ವರ್ಷಗಳಲ್ಲಿ ಗೋವಿಂದಾ ತಂಡದ ಸದಸ್ಯರಿಗೆ ವಿಮೆಯ ಸೌಲಭ್ಯವನ್ನು ಮಾಡಲಾಗುತ್ತಿದೆ. ಆಡಳಿತದವರಿಂದ ಅಂಬ್ಯುಲೆನ್ಸ್ ಸೇವೆ, ಸೇಫ್ಟಿ ಬೆಲ್ಟ್, ಹ್ಯಾಟ್.. ಇತ್ಯಾದಿ ಸೇವೆಗಳ ಬಗ್ಗೆ ಗಮನಹರಿಸಲಾಗಿದೆ.

ಸಾಹಸ ಕ್ರೀಡೆ

ದಹಿಹಂಡಿಗೆ ಸಾಹಸ ಕ್ರೀಡೆಯ ಸ್ಥಾನಮಾನ ಮಹಾರಾಷ್ಟ್ರ ಸರಕಾರಿಂದ ಘೋಷಿಸಲಾಗಿದೆ. ಅದೇ ರೀತಿ ಗೋವಿಂದಾ ಸದಸ್ಯರಿಗೆ ವಿಮೆಯ ಸೌಕರ್ಯವೂ ನೀಡಲಾಗುತ್ತದೆ. ಈ ಮೊದಲು ಗೋವಿಂದರಿಗೆ ಗಾಯವಾದರೆ 5 ಲಕ್ಷ ರೂ., ಯಾರಾದರೂ ಮೃತಪಟ್ಟರೆ 10 ಲಕ್ಷ ರೂ.ವರೆಗೆ ನೆರವು ನೀಡಲಾಗುವ ಘೋಷಣೆ ಮಾಡಲಾಗಿದೆ. ದಹಿಹಂಡಿ ಆಟಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತನ್ನದೇ ಆದ ಮಾರ್ಗಸೂಚಿಗಳನ್ನು ಹೊರಡಿಸುತ್ತದೆ

ಬಾಲಿವುಡ್ ಫಿಲ್ಮ್ ಗಳಲ್ಲಿ ದಹಿಹಂಡಿ ಒಡೆಯುವ ದೃಶ್ಯಗಳ ಅನೇಕ ಹಾಡುಗಳು ಜನಪ್ರಿಯವಾಗಿವೆ. ಟಿಪಿಕಲ್ ಮರಾಠಿ ಶೈಲಿಯ 'ಗೋವಿಂದಾ ಆಲಾರೆ...' ಹಾಡು ಆ ದಿನಗಳಲ್ಲಿ ಗಲ್ಲಿಗಳ ಮೈಕ್‌ನಲ್ಲಿ ಕೇಳಿ ಬರುತ್ತವೆ.

ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಮುಂಬೈನಲ್ಲಿ ಆಚರಿಸುವ ರೀತಿ ಸಂಪೂರ್ಣ ವಿಭಿನ್ನ ಮತ್ತು ರೋಚಕವಾಗಿದೆ.

ಪ | ದ | ಬಂ | ಧ



ಎಡದಿಂದಬಲಕ್ಕೆ:

1. ತುಂಬಾ ತಿಳಿದವನು, ಪಂಡಿತ (3)
2. ಸರಸವಾದ ಮಾತುಕತೆ (3)
6. ಅಡ್ಡಿ, ಆಕ್ಷೇಪಣೆ (4)
8. ಮದುವೆಯ ಗಂಡಿನಿಂದ ಆರಂಭವಾದ ಆದಾಯ (4)
10. ಪರಿ ಪರಿಯಾಗಿ ಮಾಡಿಕೊಂಡ ಸಿದ್ಧತೆ (3)
12. ಪರಾಕ್ರಮ ಅಥವಾ ತೇಜಸ್ಸು (3)
13. ಮತ್ತೊಂದು ಬೆಲೆಯನ್ನು ಕಟ್ಟಿಕೊಂಡಿದೆ ಹೊಟ್ಟೆ (3)
14. ಮೊಸಳೆಯು ಮತ್ತೊಂದು ಕೈಯೊಂದಿಗೆ ಬಂದಿದೆ (3)
16. ಒಂದಕ್ಕೊಂದು ಹೊಂದಿಕೆಯಾಗದಿರುವುದು (4)
17. ಅನುದಿನವೂ ಬರುವ ಸೂರ್ಯ (4)
19. ತಂಪಾದ ಜಲ (3)
20. ಉದ್ದಕ್ಕೆ ಬಾಗಿರುವ ತುತ್ತೂರಿ (3)

ಮೇಲಿನಿಂದಕೆಳಕ್ಕೆ:

1. ಸೌಜನ್ಯದಿಂದ ಕೂಡಿದ ಅಥವಾ ವಿಧೇಯವಾದ (3)
3. ಆಹಾರ ಅರಗುವಿಕೆ (3)
4. ಬೀಸುವ ಗಾಳಿ (3)
5. ಕುರಿಯ ಮಧ್ಯೆ ಕಾಣುವ ಮಗಳು (3)
7. ಚಪ್ಪಾಳೆ ತಟ್ಟುವಿಕೆ (5)
9. ದಾರಿ ತೋರಿಸುವವನು (5)
11. ವಿವಿಧ ಸ್ಥಳಗಳಿಗೆ ಪ್ರವಾಸ ಹೋಗುವವನು (3)
14. ಮೇಣವನ್ನು ಹೀಗೆಯೂ ಹೇಳಬಹುದು (3)
15. ಅಸ್ತವ್ಯಸ್ತವಾಗಿ ಬಂದಿದೆ ಉಡುಪು (3)
16. ಕೊನೆಯಿಲ್ಲದ, ವಿಷ್ಣು (3)
18. ಪೀಡೆ, ಉಪದ್ರವ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: ಜಾಗೃತಿ 6. ಗಡುವು 7. ಬಣ 8. ಕದಡು 10. ಗೆಹ 14. ಬಟವಾಡೆ 15. ಅವಯವ 17. ಸುಮ 19. ಆಮದು 21. ಬನ 22. ಸಮೂಲ 23. ಬಾನಾಡಿ

ಮೇಲಿನಿಂದ ಕೆಳಕ್ಕೆ: ಕಾಜಾಣ 2. ಅಂತಕ 3. ತಗಡು 4. ಹಾವುಗೆ 7. ಬಡಬಡಿಸು 9. ದಡ 11. ಹಯವದನ 12. ಜೇವಾಳ 13. ಧವಳ 16. ರಾಮ 18. ಮಸಣ 19. ಆಲಯ 20. ದುಬಾರಿ 21. ಬಡಿಗೆ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಮೂಗು ಕಟ್ಟುವುದು, ನೆಗಡಿ ಮೊದಲಾದ ಸಮಸ್ಯೆಗಳಿಗೆ ಮನೆಯ ಹತ್ತಿರವೇ ಬೆಳೆಯಬಲ್ಲ ಈ ಗಿಡದ ಎಲೆಗಳು ಉಪಯುಕ್ತ.

ಕೆಮ್ಮು ನೆಗಡಿ ಮಾಯ!

● ರವಿ ದುಡ್ಡಿನಜಡ್ಡು

ಮೂಗು ಕಟ್ಟುವುದು, ನೆಗಡಿ, ಸಣ್ಣ ಕೆಮ್ಮು ಎಲ್ಲವೂ ಆಗಾಗ ನಮ್ಮನ್ನು ಕಾಡುವ ಕಿರಿಕಿರಿಗಳು. ಈಚಿನ ದಿನಗಳಲ್ಲಿ ಮಳೆ ಮತ್ತು ತುಂತುರು ಮಳೆ ಜಾಸ್ತಿಯಾಗಿರುವುದರಿಂದ, ನೆಗಡಿ, ಮೂಗು ಕಟ್ಟುವುದು, ಗಂಟಲು ನೋವು ಸಾಮಾನ್ಯ ಎನಿಸಿದೆ. ನೆಗಡಿ, ಫ್ಲೂ ಮೊದಲಾದವು ವೈರಸ್‌ನಿಂದ ಉಂಟಾಗುವ ದೈಹಿಕ ಸಮಸ್ಯೆಗಳು; ಆದ್ದರಿಂದ ಇವುಗಳಿಗೆ ಸುಲಭವಾದ ಔಷಧವಿಲ್ಲ; ಆ್ಯಂಟಿಬಯೋಟಿಕ್‌ಗಳು ಬ್ಯಾಕ್ಟೀರಿಯಾದಿಂದ ಉಂಟಾದ ರೋಗಕ್ಕೆ ಔಷಧವೇ ಹೊರತು, ವೈರಸ್ ಸೋಂಕಿಗೆ ಪರಿಹಾರವಲ್ಲ. ಆದ್ದರಿಂದಲೇ, ನೆಗಡಿಯು ಒಮ್ಮೆ ಅಂಟಿತು ಎಂದರೆ, ಔಷಧ ತೆಗೆದುಕೊಂಡರೂ ಅಥವಾ ತೆಗೆದುಕೊಳ್ಳದಿದ್ದರೂ ಏಳು ದಿನದಲ್ಲಿ ವಾಸಿಯಾಗುತ್ತದೆ ಎಂಬ ನುಡಿಗಟ್ಟು ಜನಪ್ರಿಯವಾಗಿದೆ!

ಹಾಗಿದ್ದರೆ, ಮೂಗು ಕಟ್ಟುವುದು, ಗಂಟಲು ನೋವಿನಂತಹ ಸಣ್ಣ ಪುಟ್ಟ ಸಮಸ್ಯೆಗಳಿಗೆ ಪರಿಹಾರವೇನು? ನಮ್ಮ ದೇಶದಲ್ಲಿ ಪಾರಂಪರಿಕವಾಗಿ ಇದಕ್ಕೆ ಸಾಕಷ್ಟು ಮನೆಮದ್ದುಗಳಿವೆ. ಬಿಸಿ ಬಿಸಿ ನೀರು, ಮೆಣಸಿನ ಕಾಳಿನ ಕಷಾಯ, ಈರುಳ್ಳಿ, ಶುಂಠಿ, ಬೆಳ್ಳುಳ್ಳಿ ಬೆರೆಸಿ ಕುದಿಸಿದ ಕಷಾಯಗಳು ಬಹು ಹಿಂದಿನಿಂದಲೂ ನೆಗಡಿಯ ವಿರುದ್ಧ ಹೋರಾಡುವ ಅಸ್ತ್ರಗಳೆನಿಸಿವೆ. ನಮ್ಮ ದೇಶದ ಪ್ರಸಿದ್ಧ ಸಂಬಾರ ಪದಾರ್ಥಗಳಾದ ಅರಸಿನ, ಶುಂಠಿ, ಬೆಳ್ಳುಳ್ಳಿ, ಮೆಣಸಿನ ಕಾಳುಗಳು ಸಾಮಾನ್ಯ ನೆಗಡಿ ಮತ್ತು ಗಂಟಲು ನೋವಿಗೆ ಉತ್ತಮ ಪರಿಹಾರಗಳು. ಅರ್ಧ ಲೋಟ ಹಾಲಿಗೆ ಉತ್ತಮ ಅರಸಿನ ಪುಡಿಯನ್ನು ಬೆರೆಸಿ ಕುಡಿದರೆ ಹಲವು ದೈಹಿಕ ಸಮಸ್ಯೆಗಳನ್ನು ಕ್ರಮೇಣ ದೂರಮಾಡಲು ಸಾಧ್ಯ.

ನೆಗಡಿ, ಮೂಗು ಕಟ್ಟುವುದು ಮೊದಲಾದವುಗಳು ಸಣ್ಣ ಸಮಸ್ಯೆ ಎನಿಸಿದರೂ, ದೇಹದಲ್ಲಿ ಪ್ರತಿರೋಧ ಶಕ್ತಿಯು ದುರ್ಬಲವಾಗಿದ್ದರೆ, ಇವು ನಮ್ಮನ್ನು ಸಾಕಷ್ಟು ತೀಕ್ಷ್ಣವಾಗಿಯೇ ಕಾಡಬಹುದು. ಕೆಲವು ವಿಟಮಿನ್ ಮತ್ತು ಖನಿಜಾಂಶಗಳು ನಮ್ಮ ದೇಹದ ಪ್ರತಿರೋಧ ಶಕ್ತಿಯನ್ನು ವೃದ್ಧಿಸುವ ಮೂಲಕ, ಇಂತಹ ಸಮಸ್ಯೆಗಳ ಬಾಧೆಯನ್ನು ಕಡಿಮೆಗೊಳಿಸಬಲ್ಲವು ಎಂದು ಸಂಶೋಧನೆಗಳು ಕಂಡುಕೊಂಡಿವೆ. ವಿಟಮಿನ್ ಸಿ ಮತ್ತು ಜಿಂಕ್ ಸೇವನೆ ದೇಹದ ಪ್ರತಿರೋಧ ಶಕ್ತಿಯನ್ನು ಅಧಿಕಗೊಳಿಸಬಲ್ಲವು. ಜಿಂಕ್ ಹೊಂದಿರುವ ಸಿರಪ್‌ಗಳನ್ನು ನೆಗಡಿಯ ಆರಂಭದಲ್ಲೇ ನಾಲ್ಕು ಗಂಟೆಗೊಮ್ಮೆ ಸೇವಿಸುವುದರಿಂದ ಮೂಗು ಕಟ್ಟುವುದು ಮತ್ತು ನೆಗಡಿಯ ಭಾದೆ ಕಡಿಮೆಯಾಗಬಹುದು.

ಬಿಸಿ ನೀರು

ಆಗಾಗ ಬಿಸಿ ಬಿಸಿ ನೀರು ಕುಡಿಯುವುದರಿಂದ ನೆಗಡಿ, ಗಂಟಲು ನೋವು ಕಡಿಮೆಯಾಗುವ ಸಾಧ್ಯತೆ ಅಧಿಕ. ಕೆಲವು ಬಾರಿ ವೈರಸ್‌ಗಳು ಗಂಟಲು ಮತ್ತು ಶ್ವಾಸನಾಳದ ಮೇಲ್ಭಾಗವನ್ನು ಕಾಡುತ್ತಿರುವಾಗ ಗಂಟಲು ನೋವು ಬರಬಹುದು; ಆಗ ಬಿಸಿ ಬಿಸಿ ನೀರನ್ನು ಕುಡಿಯುವುದರಿಂದ ಸಮಸ್ಯೆ ಕಡಿಮೆಯಾದೀತು. ಬಿಸಿಯಾದ ತಿಳಿ ಸಾರು ಅಥವಾ ಸೂಪ್ ಸಹ ಇದೇ ರೀತಿಯ ಪರಿಹಾರ ಒದಗಿಸಬಲ್ಲದು. ಮೆಣಸಿನ ಕಾಳಿನ ತಿಳಿ ಸಾರು ಇಂತಹ ಸಮಸ್ಯೆಗಳಿಗೆ ರಾಮಬಾಣ ಎಂದು ನಮ್ಮ ದೇಶದ ಪಾರಂಪರಿಕ ಜ್ಞಾನ ಕಂಡುಕೊಂಡಿದೆ. ಶುಂಠಿ, ಮೆಣಸಿನ ಕಾಳು ಮತ್ತು ಈರುಳ್ಳಿಯನ್ನು ಬೆರೆಸಿ ಕುದಿಸಿ, ಸೋಸಿದ ತಿಳಿ ಕಷಾಯವು ಗಂಟಲು ನೋವು, ನೆಗಡಿ, ತಲೆಭಾರ, ಮೂಗು ಕಟ್ಟುವುದು ಮೊದಲಾದ ಸಮಸ್ಯೆಗಳಿಗೆ ಸರಳ ಪರಿಹಾರ. ಒಂದು ಲೋಟ ಬೆಚ್ಚನೆಯ ನೀರಿಗೆ ಒಂದು ಚಮಚ ಉಪ್ಪು ಬೆರೆಸಿ ಆಗಾಗ ಬಾಯಿ ಮುಕ್ಕಳಿಸುವುದರಿಂದ, ಗಂಟಲನ್ನು ಕಾಡುವ ಹೆಚ್ಚಿನ ನೋವುಗಳು ಬಹುಬೇಗ ನಿಯಂತ್ರಣಕ್ಕೆ ಬರುತ್ತವೆ.

ಕೆಮ್ಮಿಗೆ ಸರಳ ಪರಿಹಾರ

ಕೆಮ್ಮು ದೊಡ್ಡ ಸಮಸ್ಯೆ ಅಲ್ಲದೇ ಇದ್ದರೂ, ಪದೇ ಪದೇ ಕೆಮ್ಮು ಬರುತ್ತಿದ್ದರೆ ಮಕ್ಕಳಲ್ಲಾಗಲೀ, ದೊಡ್ಡವರಲ್ಲಾಗಲೀ ನಿದ್ರೆಗೆ ತೊಡಕಾಗಬಹುದು. ಅದನ್ನು ತಡೆಯಲು ಸರಳ ಉಪಾಯ ಒಂದಿದೆ. ಕಾಲು ಚಮಚ ಹಸಿ ಶುಂಠಿ ರಸ, ಕಾಲು ಚಮಚ ಲಿಂಬೆ ರಸ, ಅರ್ಧ ಚಮಚ ಜೇನು ತುಪ್ಪ, ಕಾಲು ಚಮಚ ದೊಡ್ಡಪತ್ರೆ ಎಲೆಯ ರಸ ಇದನ್ನು ಸೋಸಿ, ಒಂದು ಚಮಚ ಕುಡಿದರೆ ಹೆಚ್ಚಿನ ಕೆಮ್ಮುಗಳು ನಿಯಂತ್ರಣಕ್ಕೆ ಬರುತ್ತದೆ. ಈ ಮಿಶ್ರಣವನ್ನು ಮೂರರಿಂದ ನಾಲ್ಕು ಗಂಟೆಗೊಮ್ಮೆ ಸೇವಿಸಬಹುದು.

ಜನ್ಮಾಷ್ಟಮಿಯ ಹಾರ್ದಿಕ ಶುಭಾಶಯಗಳು...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಕೃಷ್ಣ ಎಂದಿನಂತೆ ಬೆಣ್ಣೆ ಕದಿಯಲು ಹೋದ. ಯಶೋಧೆಗೆ ಅವನ ತುಂಟತನ ನೋಡಿ ಸಾಕಾಗಿತ್ತು. ಸರಿ ಬೆಣ್ಣೆಯ ಕುಡಿಕೆಯನ್ನ ನೆಲುವಿನ ಮೇಲೆ ಕಟ್ಟಿ ಒಂದು ಗಂಟೆಯನ್ನ ಕಾವಲಿಗೆ ನೇಮಿಸಿ ಕೃಷ್ಣ ಬಂದು ಬೆಣ್ಣೆ ಕದ್ದರೆ ತನಗೆ ಅರುಹುವಂತೆ ಹೇಳುತ್ತಾಳೆ. ಕೃಷ್ಣ ಬಂದವನು ಅಮ್ಮ ಕಟ್ಟಿದ ಗಂಟೆ ನೋಡುತ್ತಾನೆ. ಸರಿ ಗಂಟೆಗೆ ತಾಕೀತು ಮಾಡುತ್ತಾ 'ನಾ ಬೆಣ್ಣೆ ಕದಿಯೋದನ್ನ ಅಮ್ಮನಿಗೆ ಹೇಳಬಾರದು' ಎನ್ನುತ್ತಾನೆ ಗಂಟೆ ಒಪ್ಪಿಕೊಳ್ಳುತ್ತದೆ. ಕೃಷ್ಣ ಎಂದಿನಂತೆ ಗೆಳೆಯರ ಸಹಾಯದಿಂದ ಬೆಣ್ಣೆಯ ಗಡಿಗೆ ಇಳಿಸಿ ಎಲ್ಲರಿಗೂ ಬೆಣ್ಣೆ ಹಂಚುತ್ತಾನೆ. ಗಂಟೆ ಅವನಿಗೆ ಕೊಟ್ಟ ಮಾತಿನಂತೆ ಸುಮ್ಮನಿರುತ್ತದೆ. ಗೆಳೆಯರೆಲ್ಲ ಖುಷಿಖುಷಿಯಿಂದ ಬೆಣ್ಣೆಯನ್ನು ಆಸ್ವಾದಿ ಸುತ್ತಾ ತಿಂದರು. ಎಲ್ಲರಿಗೂ ಹಂಚಿದ ಕೃಷ್ಣ ತಾನೂ ತಿನ್ನಲು ಬಾಯಿಗಿಡುತ್ತಾನೆ ಅಷ್ಟೇ.. ಗಂಟೆ ಒಂದೇ ಸಮ ಸದ್ದು ಮಾಡಲು ಶುರು ಮಾಡುತ್ತದೆ.

ಗೋಪಮ್ಮ ಓಡಿ ಬಂದು ಕೃಷ್ಣನನ್ನ ಹಿಡಿಯುತ್ತಾಳೆ ಎಂದಿನಂತೆ ಬಣ್ಣದ ಮಾತಿನಿಂದ ಅಮ್ಮನನ್ನ ನಗಿಸಿದ ಕೃಷ್ಣ ಅಮ್ಮನಿಂದ ಮುತ್ತು ಪಡೆದುಕೊಂಡು ಅಮ್ಮನನ್ನ ಮರುಳು ಮಾಡುತ್ತಾನೆ. ಎಲ್ಲ ಆದ ಮೇಲೆ ಗಂಟೆಯನ್ನ ತರಾಟೆಗೆ ತೆಗೆದುಕೊಳ್ಳುತ್ತಾನೆ. 'ಅಲ್ಲ, ನನಗೆ ಮಾತು ಕೊಟ್ಟಿದ್ದೆ ತಾನೇ? ಎಲ್ಲರೂ ತಿನ್ನುವವರೆಗೂ ಸುಮ್ಮನಿದ್ದು ನಾ ತಿನ್ನುವಾಗ ಏಕೆ ಹೀಗೆ ಮಾಡಿದೆ?' ಅಂದು ಕೇಳುತ್ತಾನೆ. ಗಂಟೆ 'ಇದರಲ್ಲಿ ನನ್ನ ತಪ್ಪೇನೂ ಇಲ್ಲ ಗೋಪಾಲ.. ನಿನಗೆ ನೈವೇದ್ಯ ಮಾಡುವಾಗ ನಾನು ಸದ್ದು ಮಾಡುವುದು ನನಗೆ ಅಭ್ಯಾಸವಾಗಿ ಬಿಟ್ಟಿದೆ' ಅನ್ನುತ್ತದೆ..! ಕೃಷ್ಣ ನಕ್ಕು ಬಿಡುತ್ತಾನೆ...

ಬಾಲಕೃಷ್ಣನ ಈ ತುಂಟಾಟಗಳು ಅವನು ಭಗವಂತ ಎನ್ನುವ ಭಕ್ತಿಗಿಂತ, ನಮ್ಮದೇ ಮನೆಯ ಕೂಸು ಎನ್ನುವ ವಾತ್ಸಲ್ಯವನ್ನ ಅವನಲ್ಲಿ ಮೂಡಿಸುತ್ತದೆ. ನಮ್ಮ ಮನೆಯಲ್ಲಿರುವ ಪುಟ್ಟ ಮಗುವೇ ನಮಗೆ ತುಂಟ ಕೃಷ್ಣನಾಗುತ್ತಾನೆ. ಹೆಣ್ಣು ಮಗು ರಾಧೆಯಾಗುತ್ತಾಳೆ. ಮಗುವಿನ ತುಂಟಾಟಗಳಲ್ಲಿ ಕೃಷ್ಣನನ್ನು ಅವನ ತುಂಟಾಟಗಳನ್ನ ಕಾಣುತ್ತಾ ಸಂತೋಷ ಪಡುತ್ತೇವೆ. ಕೃಷ್ಣ ತತ್ವವೇ ಅಂತದ್ದು ಪ್ರತಿಯೊಂದು ವಯಸ್ಸಿನವರಿಗು ಅವರಿಗೆ ಬೇಕಾದ ಸಾಂತ್ವನ, ಪ್ರೀತಿ, ಧೈರ್ಯ ಸಮಾಧಾನವನ್ನು ನೀಡುವಂತದ್ದು. ಹೀಗಾಗಿಯೇ ಎಳೆಯ ಮಗುವಿನಿಂದ ಹಣ್ಣು ಹಣ್ಣು ಮುದುಕರವರೆಗೂ ಎಲ್ಲರಿಗೂ ಕೃಷ್ಣ ಪ್ರೀತಿಯ ಬಂಧು. ಅವನಲ್ಲಿ ನಮ್ಮ ಆಸೆಗಳನ್ನು ಹರಿಕೆಗಳನ್ನು ಯಾವುದೇ ಮುಲಾಜಿಲ್ಲದೆ ಹೇಳಿಕೊಳ್ಳುವ, ಜಗಳಾಡಿ ನಮಗೆ ಬೇಕಾದನ್ನು ಪಡೆದುಕೊಳ್ಳುವ ಸಲುಗೆ ಇರುವುದು ಕೃಷ್ಣನೊಂದಿಗೆ ಮಾತ್ರ. ಪ್ರೀತಿಯ ಪರಾಕಾಷ್ಟೆಯ ಭಾವ ರೂಪವೂ ಕೃಷ್ಣನೆ. ನಮ್ಮನ್ನು ಪ್ರೀತಿಸುವ ಜೀವ ಕೃಷ್ಣನಂತೆ ನಮ್ಮನ್ನು ಆರಾಧಿಸಬೇಕು, ಅರ್ಥ ಮಾಡಿಕೊಳ್ಳಬೇಕು. ಸ್ನೇಹದಿಂದ ಜೊತೆ ಇರಬೇಕು ಎಂದು ಆಶಿಸುವ ಹೆಣ್ಣು ಮನಸುಗಳಿಗೆ ಕೃಷ್ಣ ಸದಾಕಾಲಕ್ಕೂ ಪ್ರೇಮ ಸ್ವರೂಪಿ.

ಕೃಷ್ಣ ಮಾನವರೂಪಿ ಭಗವಂತನೋ ಅಥವಾ ಭಗವಂತರೂಪಿ ಮಾನವನೋ ಅಂತೂ ಕೃಷ್ಣನೆನ್ನುವ ಕೃಷ್ಣ ಎಲ್ಲರಿಗೂ ಇಷ್ಟವಾಗುವುದು ಅವನ ಅಪರಿಮಿತ ಪ್ರೀತಿ ವಾತ್ಸಲ್ಯದಿಂದ. ಓಹ್ ಇಂತಹ ಒಬ್ಬ ಕಂದನೋ, ಆಪ್ತನೋ, ಪ್ರಿಯಕರನೋ, ಹಿತೈಷಿಯೋ, ಮಂತ್ರಿಯೋ, ರಕ್ಷಕನೋ ಇರಬಾರದಿತ್ತೇ ಅನಿಸುವಷ್ಟು ಆಯಾ ವಯಸ್ಸಿಗೆ ಇಷ್ಟವಾಗುತ್ತಾ ಹೋಗುತ್ತಾನೆ. ಕೃಷ್ಣನಂತಹ ಒಬ್ಬ ವ್ಯಕ್ತಿ ನಮ್ಮ ಜೀವನದಲ್ಲಿ ಇದ್ದರೂ ಸದಾ ಕಾಲಕ್ಕೂ ನಮಗೆ ಸರಿಯಾದ ಸಮಯಕ್ಕೆ ಸರಿಯಾದ ದಾರಿ ತೋರಿಸಿ ಜೀವನದಲ್ಲಿ ಗೆಲ್ಲಲು ಬೆಳಕಾಗಿ ನಿಲ್ಲುತ್ತಾನೆ. ಇಂತಹ ಕೃಷ್ಣನ ವ್ಯಕ್ತಿತ್ವವನ್ನು ಆರಾಧಿಸಿ ನಮ್ಮಲ್ಲಿ ಆವಹಿಸಿಕೊಂಡಾಗ ಮತ್ತೊಬ್ಬರ ನೋವಿಗೆ ಸ್ಪಂದಿಸುವ, ಅವರನ್ನ ಯಾವುದೇ ಅಪೇಕ್ಷೆ ಇಲ್ಲದೆ ಪ್ರೀತಿಸುವ, ನಿಷ್ಕಲ್ಮಶ ಮನಸ್ಸಿನಿಂದ ಪ್ರೀತಿ ಪಾತ್ರರಿಗೆ ನೆರವಾಗುವ ವಿಶೇಷ ಗುಣಗಳು ನಮ್ಮಲ್ಲೂ ಚಿಗುರೊಡೆಯಲು ಪ್ರಾರಂಭಿಸುತ್ತದೆ.

ಕೃಷ್ಣ ಎಂದರೆ ಎಲ್ಲರಿಗೂ ಪ್ರಿಯ ಎಂದರ್ಥ.

ಇಂತಹ ಎಲ್ಲರಿಗೂ ಪ್ರಿಯವಾಗುವ ವ್ಯಕ್ತಿತ್ವ ನಿಮ್ಮದಾಗಲಿ ಎನ್ನುವ ಹಾರೈಕೆ.

ಬಳ್ಳಾರಿ ನಗರದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಸ್ಥಳೀಯ ರಾಯಲ್ ಕಾಲೋನಿಯ ಶ್ರೀ ವಿಠಲಕೃಷ್ಣ ದೇವಸ್ಥಾನದಲ್ಲಿ ಶ್ರೀಕೃಷ್ಣನಿಗೆ ಅಭಿಷೇಕ, ಅರ್ಚನೆ, ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು. ಶ್ರೀ ಕೃಷ್ಣನ ಮೂರ್ತಿಗೆ ವಿಶೇಷವಾಗಿ ಬೆಣ್ಣೆ ಅಲಂಕಾರ ನೆರವೇರಿಸಲಾಯಿತು. ಅದೇ ರೀತಿಯಾಗಿ ನಗರದ ಸತ್ಯನಾರಾಯಣ ಪೇಟೆಯ ಶ್ರೀಉತ್ತರಾದಿ ಮಠದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು. ಕೃಷ್ಣನಿಗೆ ಬೆಣ್ಣೆ ಅಲಂಕಾರ ಮಾಡಲಾಯಿತು.

ಉಬ್ಬಲಗುಂಡಿ ಗ್ರಾಮದಲ್ಲಿ ವಾಂತಿ-ಬೇಧಿ ಪ್ರಕರಣ

ಸೋಪು ನೀರಿನಿಂದ 40 ಸೆಕೆಂಡ್ ಕೈಗಳನ್ನು ತೊಳೆಯಿರಿ | ವಾಂತಿ ಬೇಧಿ ತಡೆಗೆ ಕೈಗೊಡಿಸಿ

ಸಂಡೂರು: ಬಿಸಿಯಾದ ಆಹಾರ ಸೇವನೆ, ಮಕ್ಕಳು ಮನೆಗೆ ಬಂದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಕೈತೊಳೆಯುವ ಪದ್ಧತಿಯನ್ನು ರೂಡಿಯಾಗಿಸುವ ಮೂಲಕ ವಾಂತಿಭೇದಿ ಪ್ರಕರಣಗಳ ತಡೆಗೆ ಕೈಜೊಡಿಸಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಡಾ.ರಮೇಶ್‌ಬಾಬು ತಿಳಿಸಿದರು.

ಸಂಡೂರು ತಾಲೂಕಿನ ಉಬ್ಬಲಗುಂಡಿ ಗ್ರಾಮದಲ್ಲಿ ಶಂಕಿತ ವಾಂತಿ-ಬೇಧಿ ಪ್ರಕರಣ ಹಿನ್ನಲೆ ಭೇಟಿ ನೀಡಿ ಮಾತನಾಡಿದರು.

ಮುಂಜಾಗ್ರತಾ ಕ್ರಮವಾಗಿ ಗ್ರಾಮದಲ್ಲಿ ಮೇಟ್ರಿಕಿ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ತಾತ್ಕಾಲಿಕ ತುರ್ತು ಚಿಕಿತ್ಸಾ ಕೇಂದ್ರವನ್ನು ಆರಂಭಿಸಲಾಗಿದ್ದು, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ, ನೇತೃತ್ವದಲ್ಲಿ ಜಿಲ್ಲಾ ಕಾಲರಾ ನಿಯಂತ್ರಣ ತಂಡದ ಮೂಲಕ ನೀರಿನ ಮೂಲಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ ಎಂದರು.

ಮುಂಜಾಗ್ರತೆಗಾಗಿ ಸ್ಥಳೀಯ ಗ್ರಾಮ ಪಂಚಾಯಿತಿ ಸಹಕಾರದೊಂದಿಗೆ ನೀರಿನ ಪೈಪ್‌ಲೈನ್ ಪರಿಶೀಲಿಸಿ ನಿಯಮಾನುಸಾರ ಕ್ಲೋರಿನೇಷನ್ ಕೈಗೊಳ್ಳಲಾಗುತ್ತದೆ. ಪ್ರಸ್ತುತ ಯಾವುದೆ ಪ್ರಕರಣಗಳು ದಾಖಲಾಗಿರುವುದಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ನಾಗೇಶ, ತಾಲೂಕಾ ಆರೋಗ್ಯಾಧಿಕಾರಿ ಡಾ ಭಾರತ, ವೈದ್ಯಾಧಿಕಾರಿ ಡಾ. ಹರೀಶ್, ರಾಜಾಪೂರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರಾಮು, ಕಾಲರಾ ನಿಯಂತ್ರಣ ತಂಡದ ಶಿವಕುಮಾರ್, ಮಹಮ್ಮದ, ಖಾಸಿಂ, ಉಮಾದೇವಿ, ಹಾಗೂ ಆರೋಗ್ಯ ಸಿಬ್ಬಂದಿಯರಾದ ಯರ್ರಿಸ್ವಾಮಿ, ರತ್ನಮ್ಮ, ಮೇಘನಾ, ತುಕಾರಾಂ, ಆಶಾ ಕಾರ್ಯಕರ್ತೆಯರು ಇದ್ದರು.

ಸಂಡೂರು ತಾಲೂಕಿನ ಉಬ್ಬಲಗುಂಡಿ ಗ್ರಾಮದಲ್ಲಿ ಶಂಕೀತ ವಾಂತಿ-ಬೇಧಿ ಪ್ರಕರಣ ಹಿನ್ನಲೆ ಭೇಟಿ ನೀಡಿ ಮಾತನಾಡಿದರು.

> ವೈದ್ಯಕೀಯ ತಂಡ ರಚಿಸಿ ಮನೆ ಮನೆ ಭೇಟಿ ಮೂಲಕ ಜನತೆಗೆ ಕುಡಿಯುವ ನೀರನ್ನು ಕನಿಷ್ಟ 20 ನಿಮಿಷ ಕುದಿಸಿ ಆರಿದ ನಂತರ ಸೋಸಿ ಕುಡಿಯಲು, ಬಿಸಿಯಾದ ಆಹಾರ ಸೇವನೆಗೆ, ತಯಾರಿಸಿದ ಆಹಾರ ಮುಚ್ಚಿಡಲು, ಊಟದ ಮೊದಲು ಹಾಗೂ ಶೌಚದ ನಂತರ ಸೋಪು ಮತ್ತು ನೀರಿನಿಂದ ಕೈತೊಳೆಯುವ ಕುರಿತು ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.
>
> - ಡಾ.ರಮೇಶ್‌ಬಾಬು
> ಕುಟುಂಬ ಕಲ್ಯಾಣ ಅಧಿಕಾರಿ

ಪೌರಾಯುಕ್ತರ ಅಮಾನತಿಗೆ ಒತ್ತಾಯಿಸಿ ಪ್ರತಿಭಟನೆ

ಪೌರಾಯುಕ್ತರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲ ಕಾಲ ಕಚೇರಿ ಮುಂಭಾಗದಲ್ಲಿ ಕುಳಿತು ಘೋಷಣೆಗಳು ಕೂಗಿ ಪ್ರತಿಭಟನೆ ನಡೆಸಿದರು.

ಹೊಸಪೇಟೆ: ನಗರಸಭೆ 7ನೇ ವಾರ್ಡ್ ಅನಂತಶಯನಗುಡಿಯಲ್ಲಿ ಗುಂಡಿಗೆ ಬಿದ್ದು ಬಾಲಕನೊಬ್ಬ ಮೃತಪಟ್ಟ ಘಟನೆಯ ಹಿನ್ನೆಲೆಯಲ್ಲಿ ಸೋಮವಾರ ನಗರಸಭೆ ಸದಸ್ಯರು ಕಚೇರಿ ಮುಂಭಾಗದಲ್ಲಿ ಧರಣಿ ನಡೆಸಿದರು.

ನಗರಸಭೆ ಕಚೇರಿ ಆವರಣದಲ್ಲಿ ಜಮಾಯಿಸಿದ ಬಹುತೇಕ ಎಲ್ಲಾ ವಾರ್ಡ್ ಸದಸ್ಯರು ಪೌರಾಯುಕ್ತರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲ ಕಾಲ ಕಚೇರಿ ಮುಂಭಾಗದಲ್ಲಿ ಕುಳಿತು ಘೋಷಣೆಗಳು ಕೂಗಿ ಪ್ರತಿಭಟನೆ ನಡೆಸಿದರು.

ಪಕ್ಷಾತೀತವಾಗಿ ಧರಣಿ ನಡೆಸಿದ ಸದಸ್ಯರು ಪೌರಾಯುಕ್ತ ಚಂದ್ರಪ್ಪ ಅವರ ಅಮಾನತಿಗೆ ಒಕ್ಕೊರಲ ಒತ್ತಾಯ ಮಾಡಿದರು.

ಸದ್ಯ ನಗರಸಭೆಯಲ್ಲಿ ಅಧ್ಯಕ್ಷರಿಲ್ಲ, ಜಿಲ್ಲಾಧಿಕಾರಿ ಅವರೇ ಆಡಳಿತಾಧಿಕಾರಿ ಆಗಿದ್ದು, ಅವರ ಅಧಿಕಾರ ಅವಧಿಯಲ್ಲಿ ಮಗು ಸತ್ತಿದೆ, ಸ್ವತಃ ಡಿ.ಸಿ ಅವರೇ ಸ್ಥಳಕ್ಕೆ ಬರಬೇಕು, ಅಲ್ಲಿಯವರೆಗೆ ಸ್ಥಳದಿಂದ ಕದಲುವುದಿಲ್ಲ ಎಂದು ಸದಸ್ಯರು ಪಟ್ಟು ಹಿಡಿದರು.

ಬೆಳಿಗ್ಗೆ 10 ಗಂಟೆಗೆ ಆರಂಭವಾದ ಧರಣಿ ಸ್ಥಳಕ್ಕೆ ಮಧ್ಯಾಹ್ನ 1 ಗಂಟೆಯಾದರೂ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಬರಲಿಲ್ಲ, ಪೌರಾಯುಕ್ತರು, ಶಾಸಕರು ಸಹ ಬರಲಿಲ್ಲ.

ಸದಸ್ಯರು ಆಯುಕ್ತ ಚಂದ್ರಪ್ಪ ಅವರ ಪ್ರತಿಕೃತಿಯನ್ನು ತಮ್ಮ ಮುಂದುಗಡೆಯೇ ಇಟ್ಟಿದ್ದರು. ಒಂದು ಹಂತದಲ್ಲಿ ಪ್ರತಿಕೃತಿ ದಹಿಸಲು ಸಹ ಯತ್ನಿಸಿದರು. ಆದರೆ, ಪೊಲೀಸರ ಸೂಚನೆಯಂತೆ ಅದನ್ನು ಆ ಹಂತದಲ್ಲಿ ಮುಂದೂಡಿದರು.

ಮೃತ ಬಾಲಕನ ತಾಯಿ ಸಹ ಧರಣಿಯುದ್ದಕ್ಕೂ ಇದ್ದರು. ರೈತ ಸಂಘ, ಕರ್ನಾಟಕ ರಕ್ಷಣಾ ವೇದಿಕೆ ಸಹಿತ ಹಲವು ಸಂಘಟನೆಗಳು ಬೆಂಬಲ ಸೂಚಿಸಿದವು.

ಗುಂಡಿ ಮುಚ್ಚಲು ಒತ್ತಾಯ

7ನೇ ವಾರ್ಡ್ ಸದಸ್ಯೆ ಕನಕಮ್ಮ ಅವರು 15 ದಿನದ ಹಿಂದೆಯೇ ಜನವಸತಿ ಪ್ರದೇಶದಲ್ಲಿ ಖಾಸಗಿ ಸ್ಥಳದಲ್ಲಿ ಇರುವ ಗುಂಡಿಯ ಬಗ್ಗೆ ಆಯುಕ್ತರಿಗೆ ದೂರು ಕೊಟ್ಟಿದ್ದರು ಹಾಗೂ ಗುಂಡಿ ಮುಚ್ಚಿಸಬೇಕು ಎಂದು ಒತ್ತಾಯಿಸಿದ್ದರು. ಆದರೆ ಮನವಿಯನ್ನು ಆಯುಕ್ತರು ಕಡೆಗಣಿಸಿದ್ದರು. ಖಾಸಗಿ ಸ್ಥಳದಲ್ಲಿ ಗುಂಡಿ ಮುಚ್ಚಿಸಲು ಅವರು ಖಾಸಗಿ ವ್ಯಕ್ತಿಗೆ ನೋಟಿಸ್ ಸಹ ನೀಡಿರಲಿಲ್ಲ ಎಂದು ಧರಣಿ ವೇಳೆ ಸ್ವತಃ ಕನಕಮ್ಮ ಹೇಳಿದರು.

ಸಮಾಚಾರ ಸಣ್ಣದಲ್ಲ

ವ್ಯಕ್ತಿ ಮೃತ: ಪತ್ತೆಗೆ ಮನವಿ

ಹೊಸಪೇಟೆ: ಹೊಸಪೇಟೆಯಿಂದ ಕೂಡ್ಲಿಗಿ ಕಡೆಗೆ ಹೋಗುವ ರಸ್ತೆಯ ಟೋಲ್‌ನಲ್ ಬಳಿ ಇರುವ ದೊಡ್ಡ ಚರಂಡಿಯಲ್ಲಿ ಸುಮಾರು 55-60 ವರ್ಷದ ಅನಾಮಧೇಯ ಮೃತ ವ್ಯಕ್ತಿಯ ದೇಹ ಪತ್ತೆಯಾದ ಬಗ್ಗೆ ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಅನಾಮಧೇಯ ವ್ಯಕ್ತಿಯು ಅಂಗಾತವಾಗಿ ಬಿದ್ದು ಮೃತಪಟ್ಟಿದ್ದು, ಮೃತನ ದೇಹವೆಲ್ಲಾ ಬಿಸಿಲಿಗೆ ಸುಟ್ಟು ಕರಕಲಾಗಿ ಗುರುತು ಸಿಗದಂತಾಗಿದೆ. ಕಾರಣ ಯಾವುದೋ ಅನಾಮಧೇಯ ವ್ಯಕ್ತಿ ಅಥವಾ ಭಿಕ್ಷುಕ ವ್ಯಕ್ತಿಯು ಯಾವುದೋ ಕಾರಣಕ್ಕೋ ಬಿದ್ದು ಮೃತಪಟ್ಟಿರಬಹುದು ಎಂದು ದೂರು ದಾಖಲಾಗಿದೆ.

ಚಹರೆ: ದುಂಡನೆ ಮುಖ ಹೊಂದಿದ್ದು, ಕಪ್ಪು ಮೈಬಣ್ಣ ಹೊಂದಿರುತ್ತಾನೆ. ಅಂದಾಜು 5.6 ಅಡಿ ಎತ್ತರ, ಕಪ್ಪು ಬಣ್ಣದ ಪ್ಯಾಂಟ್, ತುಂಬು ತೋಳಿನ ಬಿಳಿ ಬನಿಯನ್, ಕಪ್ಪು ಬಣ್ಣದ ಡ್ರಾಯರ್ ಧರಿಸಿರುತ್ತಾನೆ. ಈ ಮೃತ ವ್ಯಕ್ತಿಯ ಬಗ್ಗೆ ಮಾಹಿತಿ ಹಾಗೂ ವಾರಸುದಾರರು ಪತ್ತೆಯಾದಲ್ಲಿ ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯ ಪಿಎಸ್ ದೂ.ಸಂ: 08394- 244030, ಎಸ್‌ಡಿಪಿಒ ದೂ.ಸಂ: 08397-238477, ಡಿಪಿಒ ದೂ.ಸಂ: 08391-220333 ಗೆ ತಿಳಿಸಿ ಎಂದು ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಬಿಲ್ ಠೇವಣಿ ಇಡಲು ಸೂಚನೆ

ಬಳ್ಳಾರಿ: ಜೆಸ್ಕಾಂ ಬಳ್ಳಾರಿ ನಗರ ಉಪವಿಭಾಗ-1 ರ ವ್ಯಾಪ್ತಿಗೆ ಬರುವ ವಿದ್ಯುತ್ ಗ್ರಾಹಕರು ಜನವರಿ-2023 ರಿಂದ ಡಿಸೆಂಬರ್-23 ವರೆಗೆ ಬಳಸಲಾದ ಒಟ್ಟು ವಿದ್ಯುತ್ ಬಿಲ್ಲಿನ ಸರಾಸರಿ ಮೊತ್ತದ ಎರಡು ಪಟ್ಟು ಮೊತ್ತವನ್ನು ಖಾತೆಯಲ್ಲಿ ಠೇವಣಿ ರೂಪದಲ್ಲಿ ಇರಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಇ.ಟಿ.ಲಕ್ಷ್ಮೀ ತಿಳಿಸಿದ್ದಾರೆ. ವಿದ್ಯುತ್ ಗ್ರಾಹಕರು ತಮ್ಮ ಖಾತೆಯಲ್ಲಿ ಈಗಾಗಲೇ ಇರುವಂತಹ ಠೇವಣಿ, ಈ ಮೊತ್ತಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ನಿಗಮವು ಅಧಿಕ ಭದ್ರತಾ ಠೇವಣಿ(ಎಎಸ್‌ಡಿ) ರೂಪದಲ್ಲಿ ವಸೂಲಿ ಮಾಡುವ ಹಕ್ಕು ಹೊಂದಿರುತ್ತದೆ. ತಮ್ಮ ವಿದ್ಯುತ್ ಬಿಲ್ಲಿನ ಕೆಳ ಭಾಗದಲ್ಲಿ ಎಎಸ್‌ಡಿ ಎಂದು ನಮೂದಾಗಿರುವ ಮೊತ್ತವನ್ನು ಆ.31 ರೊಳಗೆ ಪಾವತಿಸಬೇಕು. ಮೊತ್ತವನ್ನು ಜೆಸ್ಕಾಂ ಕಚೇರಿ ಅಥವಾ ಆನ್‌ಲೈನ್ ಮೂಲಕ ಪಾವತಿಸಬಹುದು. ಇಲ್ಲದಿದ್ದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ನೌಕರರ ಹುದ್ದೆಗೆ ಅರ್ಜಿ

ಹೊಸಪೇಟೆ: ವಿಜಯನಗರ ಜಿಲ್ಲೆಯ ಕೂಡ್ಲಿಗಿ ಶಿಶು ಅಭಿವೃದ್ಧಿ ಯೋಜನೆಯಡಿ ಕೂಡ್ಲಿಗಿ ಹಾಗೂ ಕೊಟ್ಟೂರು ತಾಲೂಕಿನ ವ್ಯಾಪ್ತಿಯ ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿ ಇರುವ 14 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 56 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೆಪ್ಟಂಬರ್ 12 ಕೊನೆಯ ದಿನವಾಗಿದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ವೆಬ್‌ಸೈಟ್ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೂಡ್ಲಿಗಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಡಗರ ಸಂಭ್ರಮದ ಶ್ರೀ ಕೃಷ್ಣ ಜಯಂತ್ಯುತ್ಸವ

ಶ್ರೀಕೃಷ್ಣನ ಸಂದೇಶವನ್ನು ಪ್ರತಿಪಾದಿಸೋಣ: ಸಂಸದ

ಬಳ್ಳಾರಿ: ಸಾಧನೆಯ ಹಾದಿಯಲ್ಲಿ ಜೀವನ ಸಾಗಿಸಲು ಶ್ರೀಕೃಷ್ಣನ ನ್ಯಾಯ-ನೀತಿಯ ಸಾರವನ್ನು ನಾವೆಲ್ಲರೂ ಪ್ರತಿಪಾದಿಸೋಣ ಎಂದು ಸಂಸದ ಈ.ತುಕಾರಾಂ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸೋಮವಾರ ಏರ್ಪಡಿಸಿದ್ದ ಶ್ರೀಕೃಷ್ಣ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದ್ವಾಪರ ಯುಗದ ಮಹಾನ್ ಪುರುಷರಾದ ಶ್ರೀಕೃಷ್ಣನ ಆಶಾಕಿರಣ ಮತ್ತು ಮನೋಭಾವನೆಯನ್ನು ಪಾಲಿಸಿದರೆ, ಪ್ರತಿಯೊಬ್ಬರೂ ಯಶಸ್ಸಿನ ಹೆಜ್ಜೆ ಗುರುತನ್ನು ಕಾಣಬಹುದು ಎಂದು ತಿಳಿಸಿದರು. ಭೂಮಿ ಮೇಲೆ ಜನಿಸಿ ಸಾಧನೆಗೈದ ಮಹಾತ್ಮರ ಸವಿನೆನಪಿಗಾಗಿ ಹಾಗೂ ಪ್ರತಿ ಸಮುದಾಯದ ಏಳಿಗೆಗಾಗಿ ಘನ ಸರಕಾರವು ಎಲ್ಲಾ ಮಹನೀಯರ ಜಯಂತಿಯನ್ನು ಆಚರಿಸಲಾಗುತ್ತಿದ್ದು, ನಾವೆಲ್ಲರೂ ಸಾಧಕರ ಮಾರ್ಗದಲ್ಲಿ ನಡೆಯಬೇಕು ಎಂದು ಹೇಳಿದರು.

ಸಮಾಜದ ಕಾರ್ಯಗಳು ಮನ್ನಣೆಗೆ ಬರಬೇಕೆಂದರೆ ಉತ್ತಮ ಕಾರ್ಯಗಳ ಜತೆಗೆ ಮಹಾನ್ ವ್ಯಕ್ತಿಗಳ ಜೀವನ-ಸಾಧನೆ ಕುರಿತು, ಹಳ್ಳಿ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಮಹನೀಯರ ತತ್ವಾದರ್ಶಗಳನ್ನು ಸಾರಬೇಕು ಎಂದು ಪ್ರತಿಪಾದಿಸಿದರು.

ಎಸ್‌ಜಿಟಿ ಪಿಯು ಕಾಲೇಜಿನ ಕನ್ನಡ ಉಪನ್ಯಾಸಕರಾದ ಅಮಾತಿ ಬಸವರಾಜ ಅವರು ಶ್ರೀಕೃಷ್ಣನ ಜಯಂತಿಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಶ್ರೀ ಕೃಷ್ಣ ಜಯಂತ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಶ್ರೀಕೃಷ್ಣನ ಮೂರ್ತಿಯೊಂದಿಗೆ ಮಹಾನಗರ ಪಾಲಿಕೆ ಕಚೇರಿ ಮುಂಭಾಗದಿಂದ ಆರಂಭಗೊಂಡು ವಿವಿಧ ಕಲಾ ತಂಡಗಳ ವಾದ್ಯಗಳೊಂದಿಗೆ ಗಡಿಗಿ ಚೆನ್ನಪ್ಪ ವೃತ್ತ, ಸ್ಟೇಷನ್ ರಸ್ತೆ, ಎಚ್.ಆರ್.ಗವಿಯಪ್ಪ ವೃತ್ತದ ಮುಖಾಂತರ ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ಸಾಗಿ ಬಂದು ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಜಿಲ್ಲಾ ಗೊಲ್ಲರ ಸಂಘದ ಅಧ್ಯಕ್ಷ ಹಾಗೂ ಮಹಾನಗರ ಪಾಲಿಕೆಯ ಸಭಾನಾಯಕ ಪಿ.ಗಾದೆಪ್ಪ, ವಕ್ಫ್ ಬೋರ್ಡ್ನ ಅಧ್ಯಕ್ಷ ಹುಮಾಯನ್ ಖಾನ್, ಅಧ್ಯಕ್ಷ ಚಿದಾನಂದಪ್ಪ, ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಉಪಸ್ಥಿತರಿದ್ದರು.

> ಸಮಾಜದಲ್ಲಿನ ಅಂಕುಡೊಂಕು ತಿದ್ದಿ, ಜನ ಸಾಮಾನ್ಯರನ್ನು ಕತ್ತಲಿನಿಂದ ಬೆಳಕಿನೆಡೆಗೆ, ಜ್ಞಾನದಿಂದ ಸುಜ್ಞಾನದ ಕಡೆಗೆ ಕೊಂಡೊಯ್ಯಲು ಮಹಾನ್ ವ್ಯಕ್ತಿಗಳು ಜನಿಸಿದ್ದು, ಅವರನ್ನು ದಾರಿದೀಪವಾಗಿ ಇರಿಸಿಕೊಂಡು, ಸುಸ್ಥಿರ ಸಮಾಜ ನಿರ್ಮಿಸಲು ಪ್ರಮುಖ ಪಾತ್ರ ವಹಿಸಬೇಕು.
>
> - ಮಹಮ್ಮದ್ ಝುಬೇರ್.ಎನ್
> ಅಪರ ಜಿಲ್ಲಾಧಿಕಾರಿ

ಧರ್ಮದ ಉಳಿವಿಗಾಗಿ ಶ್ರಮಿಸಿದ ಕೃಷ್ಣ

ಅಧರ್ಮ ವಿರುದ್ಧ ನ್ಯಾಯದ ಜಯ ಸಾಧಿಸಲು ಶ್ರೀ ಕೃಷ್ಣ ಪರಮಾತ್ಮನು ಜನಿಸಿದ್ದು, ಧರ್ಮದ ಉಳಿವಿಗಾಗಿ ಶ್ರಮಿಸಿದರು. ಭಗವದ್ಗೀತೆಯಲ್ಲಿ ಜೀವನದ ಸಾರಾಂಶ ಅಡಗಿದ್ದು, ಅವುಗಳನ್ನು ಭಕ್ತಿ ಭಾವನೆಯಿಂದ ಅನುಸರಿಸಿ ಉತ್ತಮ ಜೀವನ ನಡೆಸಬೇಕು ಎಂದು ಡಾ.ಬಾಬು ಜಗಜೀವನರಾಮ್, ಅಧ್ಯಕ್ಷ ಮುಂಡರಗಿ ನಾಗರಾಜ ಹೇಳಿದರು.

ಪ್ರಾಸಿಕ್ಯೂಷನ್ ಅನುಮತಿಗೆ ವಕೀಲರ ಪ್ರತಿಭಟನೆ

ಹೊಸಪೇಟೆ: ರಾಜ್ಯಪಾಲರ ನಡೆ ಖಂಡಿಸಿ ಅಖಿಲ ಭಾರತ ವಕೀಲರ ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಅಖಿಲ ಭಾರತ ವಕೀಲರ ಒಕ್ಕೂಟದ ನೇತೃತ್ವದಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಇತರೆ ಎಡಸಂಘಟನೆಗಳ ಜತೆಗೂಡಿ ರಾಜ್ಯಪಾಲರು ಮುಖ್ಯಮಂತ್ರಿಗಳ ಮೇಲೆ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ಪ್ರತಿಭಟನೆ ಮಾಡಲಾಯಿತು.

ಅಖಿಲ ಭಾರತ ವಕೀಲರ ಒಕ್ಕೂಟದ ರಾಜ್ಯ ಮುಖಂಡ ಎ.ಕರುಣಾನಿಧಿ ಮಾತನಾಡಿ, ಕರ್ನಾಟಕ ರಾಜ್ಯಪಾಲರು ಇತ್ತೀಚಿಗೆ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಗಮನಿಸಿದರೆ, ರಾಜ್ಯಪಾಲರು ಸಂವಿಧಾನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂಬುದು ಮೇಲ್ನೋಟಕ್ಕೆ ಕಾಣುತ್ತದೆ ಎಂದರು.

ರಾಜ್ಯಪಾಲರು ತಮ್ಮ ಅನುಮತಿ ಪತ್ರಕ್ಕೆ ಏಕವ್ಯಕ್ತಿ ಆಯೋಗವನ್ನು ಸರಕಾರ ರಚಿಸಿರುವುದನ್ನು ಮತ್ತು ಉನ್ನತ ಮಟ್ಟದ ಅಧಿಕಾರಿಗಳನ್ನು ಈ ಕುರಿತು ನೇಮಿಸಿರುವುದನ್ನೇ ಕಾರಣವಾಗಿರಿಸಿ ಅದನ್ನೇ ಉಲ್ಲೇಖಿಸಿ ಇದೊಂದು ಗಂಭೀರ ಪ್ರಕರಣವೆಂದು ತಿಳಿಸಿರುವುದು ಹಾಗೂ ಆರೋಪ ಎದುರಿಸುತ್ತಿರುವ ವ್ಯಕ್ತಿಯೇ ಅದರ ವಿಚಾರಣೆಯ ವಿಧಾನವನ್ನು ನಿರ್ಧರಿಸುವುದು ಸೂಕ್ತವಲ್ಲ ಎಂದಿರುವ ರಾಜ್ಯಪಾಲರ ಅಭಿಪ್ರಾಯವು ತಾವೇ ಮುಖ್ಯಸ್ಥರಾಗಿರುವ ಈ ಕಾನೂನಿನ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿಲ್ಲ ಎಂಬುದನ್ನು ತೋರಿಸುತ್ತದೆ. ಆಯೋಗಗಳ ವರದಿ ಬರುವವರೆಗೆ ತಾವೇಕೆ ತಾಳ್ಮೆಯಿಂದ ಕಾಯಲಿಲ್ಲ ಹಾಗೂ ಈ ಕುರಿತು ರಾಜ್ಯಪಾಲರು ತಮ್ಮ ವರದಿಯಲ್ಲಿ ಏಕೆ ವಿವರಿಸಿಲ್ಲ ಎಂದು ಪ್ರತಿಭಟನಾ ನಿರತರು ದೂರಿದರು. ರಾಜ್ಯಪಾಲರಿಗೆ ಸರಕಾರ ತೆಗೆದುಕೊಂಡ ಕ್ರಮಗಳು ವಿಶ್ವಾಸ ಮೂಡಿಸಿಲ್ಲವೆಂದಾದಲ್ಲಿ ತಾವೇ ಸ್ವತಃ ಆಯೋಗ ರಚಿಸಿ ನಿಷ್ಪಕ್ಷಪಾತವಾದ ವರದಿ ತರಿಸಿಕೊಳ್ಳಲು ಏಕೆ ಮುಂದಾಗಲಿಲ್ಲ ಎಂದು ಪ್ರತಿಭಟನಾ ನಿರತರು ಪ್ರಶ್ನಿಸಿದರು.

ಖಾಸಗೀ ವ್ಯಕ್ತಿಗಳು ಸಲ್ಲಿಸಿರುವ ದೂರಿಗೆ ಮತ್ತು ಸಲ್ಲಿಸಿರುವ ದಾಖಲೆಗಳಿಗೆ ಯಾವ ಕಾನೂನಿನ ಮಾನ್ಯತೆಯಿದೆ ಎಂಬುದನ್ನು ರಾಜ್ಯಪಾಲರು ತಮ್ಮ ಆದೇಶದಲ್ಲಿ ವಿವರಿಸಿಲ್ಲ, ಆದ್ದರಿಂದಲೇ ರಾಜ್ಯಪಾಲರು ಮುಖ್ಯಮಂತ್ರಿಗಳ ವಿರುದ್ಧ ನೀಡಿರುವ ಅನುಮತಿಯು ಅನೇಕ ಅನುಮಾನಗಳನ್ನು ಹುಟ್ಟಿ ಹಾಕಿದೆ. ಅಲ್ಲದೇ ರಾಜ್ಯಪಾಲರು ಅನುಮತಿ ಪತ್ರ ನೀಡುವಾಗ ಸಂವಿಧಾನಿಕವಾಗಿ ಯಾವ ಅಂಶಗಳು ತಮ್ಮನ್ನು ಈ ಅನುಮತಿ ಪತ್ರವನ್ನು ನೀಡುವಂತೆ ಒತ್ತಾಯಿಸಿದವು ಮತ್ತು ಅನಿವಾರ್ಯವಾಗಿ ತಮ್ಮ ವಿವೇಚನಾ ಅಧಿಕಾರವನ್ನು ಬಳಸುವಂತೆ ಪ್ರೇರೇಪಿಸಿದವು ಎಂಬುದನ್ನು ತಮ್ಮ ವರದಿಯಲ್ಲಿ ತಿಳಿಸಿಲ್ಲದಿರುವುದು ಅವರು ಅನುಮತಿ ಪತ್ರವನ್ನು ಸಾಂವಿಧಾನಿಕ ನೆಲೆಯಲ್ಲಿ ನೀಡಿಲ್ಲ ಎಂಬುದನ್ನು ಮೇಲ್ನೋಟಕ್ಕೆ ಗೊತ್ತಾಗುತ್ತದೆ ಎಂದು ಆರೋಪಿಸಿದರು.

ಮುಖಂಡರಾದ ಬಿಸಾಟಿ ಮಹೇಶ್, ಎಂ.ಜಂಬಯ್ಯ ನಾಯಕ, ಆರ್.ಭಾಸ್ಕರ್ ರೆಡ್ಡಿ ಮಾತನಾಡಿದರು.

ವಕೀಲರಾದ ಕಲ್ಯಾಣಯ್ಯ, ಎಚ್.ವೆಂಕಟೇಶಲು, ಕೆ.ಬಸವರಾಜ, ಮಹಮ್ಮದ್ ನಹೀಮ್, ಡಿಎಚ್‌ಎಸ್ ಮುಖಂಡರಾದ ಎಂ.ಜಂಬಯ್ಯ ನಾಯಕ, ತಾಯಪ್ಪ ನಾಯಕ, ರಮೇಶ್, ಎಸ್‌ಎಫ್‌ಐ ಜಿಲ್ಲಾ ಸಹ ಕಾರ್ಯದರ್ಶಿ ಕೆ.ಪವನ ಕುಮಾರ್, ಸಹನಾ, ಖುಷಿ, ಶಾರದ, ಕೀರ್ತಿ, ಡಿವೈಎಫ್‌ಐ ಸಂಘಟನೆಯ ಮಂಜುನಾಥ, ಸಿಐಟಿಯು ಸಂಘಟನೆಯ ಆರ್.ಭಾಸ್ಕರ್ ರೆಡ್ಡಿ, ಎಂ.ಗೋಪಾಲ, ನಾಗರತ್ನಮ್ಮ ಇತರರಿದ್ದರು.

ರಾಜ್ಯಪಾಲರು ಮುಖ್ಯ ಮಂತ್ರಿಗಳ ಮೇಲೆ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ಪ್ರತಿಭಟನೆ ಮಾಡಲಾಯಿತು.

> ಸಂವಿಧಾನದ 163 ಕಲಂ ಅಡಿಯಲ್ಲಿ ರಾಜ್ಯಪಾಲರಿಗೆ ತಮ್ಮ ವಿವೇಚನಾ ಅಧಿಕಾರವನ್ನು ಬಳಸಲು ಅಧಿಕಾರವಿರುವುದು ನಿಜವಾಗಿದೆಯಾದರೂ ವಿವೇಚನಾ ಅಧಿಕಾರವನ್ನು ವಿವೇಚನೆಯಿಂದ ಬಳಸಿಲ್ಲವೆಂದು ಆರೋಪಿಸಿದರು. ರಾಜ್ಯಪಾಲರು ತಮ್ಮ ವಿವೇಚನೆ ಬಳಸಿ ಅನುಮತಿ ನೀಡಲು ಖಾಸಗಿ ವ್ಯಕ್ತಿಗಳ ದೂರುಗಳನ್ನು ಆಧಾರವಾಗಿರಿಸಿಕೊಂಡಿರುವುದು ಮತ್ತು ಅವರು ಸಲ್ಲಿಸಿರುವ ದಾಖಲೆಗಳನ್ನು ಉಲ್ಲೇಖಿಸಿರುವುದಕ್ಕೆ ಯಾವ ಕಾನೂನಾತ್ಮಕ ಹಾಗೂ ಸಂವಿಧಾನಾತ್ಮಕ ಮಾನ್ಯತೆಯಿರುವುದಿಲ್ಲ.
>
> - ಎ.ಕರುಣಾನಿಧಿ ರಾಜ್ಯ ಮುಖಂಡ

ವಿದ್ಯಾರ್ಥಿಗಳ ಮೆಚ್ಚಿನ ಮೇಷ್ಟ್ರಾಗಿದ್ದರು

ವಿರೂಪಾಕ್ಷಗೌಡ ನುಡಿನಮನ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಹೂವಿನಹಡಗಲಿ: ವಿರುಪಾಕ್ಷಗೌಡ್ರು ಶಿಸ್ತು ಕ್ರಮಬದ್ಧ ಜೀವನ ನಡೆಸಿ ವಿದ್ಯಾರ್ಥಿಗಳ ಮೆಚ್ಚಿನ ಮೇಷ್ಟ್ರಾಗಿದ್ದರು ಎಂದು ಜಿಬಿಆರ್ ಕಾಲೇಜ್ ಆಡಳಿತ ಮಂಡಳಿಯ ಅಧ್ಯಕ್ಷ ಸಿ.ಮೋಹನರೆಡ್ಡಿ ಹೇಳಿದರು.

ಪಟ್ಟಣದ ಜಿಬಿಆರ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ನಿವೃತ್ತ ಪ್ರಾಚಾರ್ಯರೂ ಹಾಗೂ ವೀ.ವಿ.ಸಂಘದ ಆಜೀವ ಸದಸ್ಯರಾಗಿದ್ದ ಕೆ.ವಿರೂಪಾಕ್ಷಗೌಡ ಅವರ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರೌಢಶಾಲಾ ಶಿಕ್ಷಕರಾಗಿ ಕನ್ನಡ ಉಪನ್ಯಾಸಕರಾಗಿ ಪ್ರಾಚಾರ್ಯರಾಗಿ ಸೇವೆಸಲ್ಲಿಸಿ ಸಾರ್ಥಕ ಕರ್ತವ್ಯ ನಿರ್ವಹಿಸಿದ್ದಾರೆ.

ಹಡಗಲಿ ಕಾಲೇಜಿನ ಬಗ್ಗೆ ವಿರುಪಾಕ್ಷಗೌಡ್ರಿಗೆ ಬಹಳ ಪ್ರೀತಿ ಮತ್ತು ಕಾಳಜಿ, ಶಿಸ್ತಿನಿಂದ ಕಾಲೇಜಿನ ಬೆಳವಣಿಗೆ ಮಾಡುವಲ್ಲಿ ಅವರ ಪಾತ್ರವಿದೆ ಎಂದರು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ವೀ.ವಿ.ಸಂಘದ ಮಾಜಿ ಸಹ ಕಾರ್ಯದರ್ಶಿ ಐಗೋಳ್ ಚಿದಾನಂದ, ಪ್ರಾಚಾರ್ಯ ಎಸ್.ಎಸ್.ಪಾಟೀಲ್, ನಿವೃತ್ತ ಪ್ರಧ್ಯಾಪಕ ಎಸ್.ವೀರಪ್ಪ, ನಿವೃತ್ತ ಪ್ರಾಚಾರ್ಯ ವರಕುಮಾರ್ ಗೌಡ, ವಿರುಪಾಕ್ಷಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನುಡಿ ನಮನ ಸಲ್ಲಿಸಿದರು.

ಸತ್ತವರ ಹೆಸರಿಗೆ ನರೇಗಾ ಹಣ: ಪಿಡಿಒ ಅಮಾನತು

ಹೂವಿನಹಡಗಲಿ: ಸತ್ತವರ ಹೆಸರಿನಲ್ಲಿ ನರೇಗಾ ಕೂಲಿ ಪಾವತಿಸಿದ ಆರೋಪದ ಆಧರಿಸಿ ತಾಲೂಕಿನ ಉತ್ತಂಗಿ ಗ್ರಾಮ ಪಂಚಾಯ್ತಿ ಪಿಡಿಒ ಎಂ.ಪ್ರಕಾಶ್ ಅವರನ್ನು ವಿಜಯನಗರ ಜಿಲ್ಲೆಯ ಜಿ.ಪಂ.ಸಿಇಒ ಅವರು ಕರ್ತವ್ಯ ಲೋಪದಡಿ ಅಮಾನತು ಮಾಡಿದ್ದಾರೆ.

ನಂದಿಹಳ್ಳಿ ಗ್ರಾ.ಪಂ.ಮಾಜಿ ಅಧ್ಯಕ್ಷ ವಿ.ಬಿ.ಶಿವಾನಂದ ದೂರಿನ್ವಯ ಹಡಗಲಿ ತಾಲೂಕು ಪಂಚಾಯತಿ ಇವರು ಪರಿಶೀಲನಾ ವರದಿ ಸಲ್ಲಿಸಿದ್ದು ಈ ಕೆಳಕಾಣಿಸಿದ ಕರ್ತವ್ಯ ಲೋಪವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. 2007ರಿಂದ ಚಿಗಟೇರಿ ಕೊಟ್ರೇಶ್ ತಂದೆ ಬಸಪ್ಪ ಇವರ ಉದ್ಯೋಗ ಚೀಟಿ ಹೊಂದಿದ್ದು 2020 ಜೂ. 24ರಂದು ಮರಣ ಹೊಂದಿದ್ದು, 2020 ಜುಲೈ 02ರಿಂದ 9ರವರೆಗೆ 8ದಿನ ಕೆಲಸ ನಿರ್ವಹಿಸಿದ್ದಾರೆ ಎಂದು 1820ರು. 2021 ಮೇ 5ರಿಂದ 11ರವರೆಗೆ 7ದಿನ ಕೆಲಸ ನಿರ್ವಹಿಸಿದ್ದಾರೆ ಎಂದು 3340 ರು. ಫಲಾನುಭವಿಗಳ ಖಾತೆಗೆ ಕೂಲಿ ಹಣ ನಿಯಮಬಾಹಿರವಾಗಿ ಜಮ ಮಾಡಲಾಗಿದೆ. ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಯವರಿಗೆ ಜಾಬ್ ಕಾರ್ಡ್ ನೀಡಿ ಎನ್.ಎಂ.ಆರ್. ಸೃಜಿಸಿ ನಿಯಮಬಾಹಿರವಾಗಿ ಹಣ ನಾವರಿಸಿರುತ್ತೀರಿ. ಹಾಗೂ 15ನೇ ಹಣಕಾಸು ಯೋಜನೆಯಡಿ 1.99 ಲಕ್ಷ ರುಗಳನ್ನು ಆನ್‌ಲೈನ್ ಪಾವತಿ ಮಾಡದೇ ನಿಯಮಬಾಹಿರವಾಗಿ ಚೆಕ್ ಮುಖಾಂತರ ಹಣ ಸೆಳೆದಿರುತ್ತೀರಿ. ಆಡಳಿತಾತ್ಮಕವಾಗಿ ಆರೋಪ ಸಾಬೀತಾಗಿದ್ದರಿಂದ ಎಂ.ಪ್ರಕಾಶ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಜಿ.ಪಂ.ಸಿಇಒ ತಿಳಿಸಿದ್ದಾರೆ.

ಪರೀಕ್ಷೆ ಕೇಂದ್ರಗಳ ಸುತ್ತಲೂ ನಿಷೇದಾಜ್ಞೆ

ಹೊಸಪೇಟೆ: ಗಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಪರೀಕ್ಷಾ ಸಂಬಂಧ ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತ 200 ಮೀಟರ್ ವ್ಯಾಪ್ತಿಯೊಳಗೆ ನಿಷೇಧಾಜ್ಞೆ ಜಾರಿಗೊಳಿಸಿ ವಿಜಯನಗರ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್ ಆದೇಶ ಹೊರಡಿಸಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದಿಂದ ವಿಜಯನಗರ ಜಿಲ್ಲೆಯ ಒಟ್ಟು 13 ಪರೀಕ್ಷಾ ಕೇಂದ್ರಗಳಲ್ಲಿ ಆ. 27ರಂದು ಬೆಳ್ಳಿಗೆ 10ಗಂಟೆಯಿಂದ ಸಂಜೆ 4ಗಂಟೆಯವರೆಗೆ ನಡೆಯಲಿರುವ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ- 2023 ಸೆಕ್ಷನ್ 163 ರನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತಲಿನ ಜೆರಾಕ್ಸ್ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚಿಸಲು ಆದೇಶಿಸಿ, ಗುಂಪುಗಳಿಗೆ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಿದೆ. ಈ ಆದೇಶವನ್ನು ಉಲ್ಲಂಘಿಸಿ ಪ್ರವೇಶಿಸುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಕಾರ್ಯನಿರ್ವಹಿಸುವ ಅಧಿಕಾರಿ, ಸಿಬ್ಬಂದಿಯ ವರಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಟಿಎಪಿಸಿಎಂಎಸ್‌ಗೆ 11.64 ಲಕ್ಷ ರು. ಲಾಭ

ಹರಪನಹಳ್ಳಿ: ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು(ಟಿಎಪಿಸಿಎಂಎಸ್)2023-24ನೇ ಸಾಲಿನಲ್ಲಿ 11.64 ಲಕ್ಷ ರೂ.ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷೆ ಎಚ್.ನೇತ್ರಾವತಿ ಪರಶುರಾಮ ತಿಳಿಸಿದರು.

ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಸಭಾಂಗಣದಲ್ಲಿ ಸೋಮವಾರ ನಡೆದ ಸಂಘದ 94ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತಮಾಡಿದರು.

ಸಂಘವು ಕಳೆದ ಸಾಲಿನಲ್ಲಿ ರಸಗೊಬ್ಬರ ಮತ್ತು ಪೆಟ್ರೋಲ್ ಬಂಕ್ ಉತ್ಪನ್ನಗಳನ್ನು ಸೇರಿ ಒಟ್ಟು 12.38 ಕೋಟಿ ರು.ವ್ಯವಹಾರ ಮಾಡಿ 11.64 ಲಕ್ಷ ರು.ಲಾಭ ಗಳಿಸಿದೆ, ಲಾಭ ಮತ್ತು ವ್ಯವಹಾರ ಹಾಗೂ ಬಾಡಿಗೆಗಳ ಆದಾಯ ಸೇರಿ ಬಿಡಿಪಿ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಘವು 3.8 ಲಕ್ಷ ರು.ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಸಂಘದಿಂದ ರೈತರಿಗೆ ರಸಗೊಬ್ಬರ ಪೂರೈಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವ್ಯವಹಾರಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಸಂಘದ ಎಲ್ಲಾ ಸದಸ್ಯರು ರಸಗೊಬ್ಬರ ಖರೀದಿ ಮಾಡಬೇಕೆಂದು ಮನವಿ ಮಾಡಿದರು.

ಸಂಘದಲ್ಲಿ ರೈತರಿಗೆ ಮತ್ತು ಸದಸ್ಯರಿಗೆ ಅನುಕೂಲಕ್ಕಾಗಿ ಬಂಗಾರದ ಆಭರಣದ ಮೇಲೆ ಸಾಲ ನೀಡಲು ಕ್ರಮವಹಿಸಿದ್ದು, ಜತೆಗೆ ಸಿಎನ್‌ಜಿ ಗ್ಯಾಸ್ ಬಂಕ್‌ನ್ನು ತೆರೆಯಲು ಸಂಘ ಪ್ರಯತ್ನಿಸಿದೆ ಎಂದು ಅವರು ತಿಳಿಸಿದರು. ಸಂಘದ ನಿರ್ದೇಶಕ ಎಲ್.ಬಿ.ಹಾಲೇಶ 2023-24ನೇ ಸಾಲಿನ ಸಂಘದ ವಾರ್ಷಿಕ ವರದಿಯನ್ನು ಸಭೆಯಲ್ಲಿ ಓದಿ ಮಂಡಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಬಿ.ಕುಲಮಿ ಅಬ್ದುಲ್ಲಾ, ನಿರ್ದೇಶಕರಾದ ಬಿ.ಕೆ.ಪ್ರಕಾಶ, ಎಲ್.ಬಿ.ಹಾಲೇಶನಾಯ್ಕ್, ಪಿ.ಪ್ರೇಮಕುಮಾರ, ತಳವಾರ ಮಂಜಪ್ಪ, ಗಿಡ್ಡಳ್ಳಿ ನಾಗರಾಜ, ಬಿ.ರೇವಣಸಿದ್ದಪ್ಪ, ಎಂ.ವಿ. ಕೃಷ್ಣಕಾಅಂತ್, ಕೆ.ವಿರುಪಾಕ್ಷಪ್ಪ, ಪ್ರಕಾಶಗೌಡ, ನಾಮನಿರ್ದೇಶಕ ಚಿಕ್ಕೇರಿ ಬಸಪ್ಪ, ಸಂಘದ ಕಾರ್ಯದರ್ಶಿ ಎಚ್.ತಿರುಪತಿ ಸೇರಿದಂತೆ ಸಂಘದ ಸರ್ವ ಸದಸ್ಯರು ಸಿಬ್ಬಂದಿ ಇದ್ದರು.

ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ 94ನೇ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಹಿರಿಯ ಸದಸ್ಯರು ಉದ್ಘಾಟಿಸಿದರು.

ವಾರ್ತಾ ಇಲಾಖೆಯಿಂದ ಬಾಪೂಜಿ ಕುರಿತು ಪ್ರಬಂಧ

ಹೊಸಪೇಟೆ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿ ಹಾಗೂ ಯುವಜನರಲ್ಲಿ ಮಹಾತ್ಮ ಗಾಂಧೀಜಿಯವರ ಬದುಕು, ಸ್ವಾತಂತ್ರ್ಯ ಚಳುವಳಿ, ಸರಳತೆ, ಅಹಿಂಸಾ ಮಾರ್ಗ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳು ಇತ್ಯಾದಿ ವಿಚಾರಗಳ ಬಗ್ಗೆ ಅರಿವು ಮೂಡಿಸಲು ವಿವಿಧ ವಿಷಯಗಳ ಕುರಿತು ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ-ಸ್ನಾತಕೋತ್ತರ ಪದವಿಗಳ ಹಂತದ ವಿದ್ಯಾರ್ಥಿಗಳಿಗೆ ಒಟ್ಟು 3 ವಿಭಾಗಗಳಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲು ಉದ್ದೇಶಿಸಲಾಗಿದೆ. ವಿಜೇತರಿಗೆ ರಾಜ್ಯಮಟ್ಟದಲ್ಲಿ ಪ್ರಥಮ 31 ಸಾವಿರ ರು. ದ್ವಿತೀಯ 21 ಸಾವಿರ ರು. ಮತ್ತು ತೃತೀಯ 11 ಸಾವಿರ ರು. ಹಾಗೂ ಜಿಲ್ಲಾಮಟ್ಟದಲ್ಲಿ ಪ್ರಥಮ 3 ಸಾವಿರ ರು. ದ್ವಿತೀಯ 2 ಸಾವಿರ ರೂ ಮತ್ತು ತೃತೀಯ 1 ಸಾವಿರ ರು. ಬಹುಮಾನ ನೀಡಲಾಗುವುದು. ಜಿಲ್ಲಾಮಟ್ಟದಲ್ಲಿ ಪ್ರಥಮ ಬಹುಮಾನ ವಿಜೇತ ಪ್ರಬಂಧಗಳನ್ನು ರಾಜ್ಯಮಟ್ಟದಲ್ಲಿ ಮರುಮೌಲ್ಯಮಾಪನ ಮಾಡಿ ರಾಜ್ಯಮಟ್ಟದ ಫಲಿತಾಂಶ ಘೋಷಿಸಲಾಗುವುದು. ಪ್ರತಿ ವಿಭಾಗದಲ್ಲಿನ ಅತ್ಯುತ್ತಮವಾದ ಮೂರು (3) ಪ್ರಬಂಧಗಳಿಗೆ ಅಕ್ಟೋಬರ್ 02 ರಂದು ಜಿಲ್ಲಾ ಮಟ್ಟದ ಗಾಂಧೀ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಬಹುಮಾನ ನೀಡಿ ಪ್ರಬಂಧ ರಚನೆಕಾರರಿಗೆ ಗೌರವಿಸಲಾಗುವುದು.

{ ಕುಮಾರಸ್ವಾಮಿ } ಕೇಂದ್ರ ಸಚಿವ

ಅಧಿಕಾರಿಗಳು ಸರಕಾರಿ ಯೋಜನೆ ಒದಗಿಸಲು ಫಲಾನುಭವಿ ಪಾರದರ್ಶಕ ನೋಡಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಯ ಉಪಯೋಗ ಸಿಕ್ಕಾಗ ಸಾರ್ಥಕತೆ ಇರುತ್ತದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ
@vishwavaninews
ಮಂಗಳವಾರ, 27.08.2024

ಮುದ್ದು ಕೃಷ್ಣರ ಸಂಭ್ರಮ

ಗೋಕುಲಾಷ್ಟಮಿ ಅಂಗವಾಗಿ ಮಕ್ಕಳಿಗೆ ಕೃಷ್ಣನ ವೇಷ ತೊಡಿಸಿ ನಿಮ್ಮ ನೆಚ್ಚಿನ ವಿಶ್ವವಾಣಿ ಪತ್ರಿಕೆಗೆ ವಾಟ್ಸ್ ಆ್ಯಪ್ ಮಾಡಿ ಎಂಬ ನಮ್ಮ ಕರೆಗೆ ಓಗೊಟ್ಟು ಸಾವಿರಾರು ಪೋಷಕರು ಮುದ್ದುಕೃಷ್ಣರ ಫೋಟೋ ಕಳುಹಿಸಿದ್ದಾರೆ. ಇಲ್ಲಿ ಕೆಲವು ಫೋಟೋಗಳನ್ನಷ್ಟೇ ಪ್ರಕಟಿಸಿದ್ದೇವೆ. ಜನ್ಮಾಷ್ಟಮಿಯ ಸಂತಸ ಹಂಚಿಕೊಂಡ ಎಲ್ಲ ಓದುಗರಿಗೆ, ಮಕ್ಕಳಿಗೆ ಅಭಿನಂದನೆಗಳು. ಇನ್ನಷ್ಟು ಫೋಟೋಗಳಿಗೆ ಆಗಸ್ಟ್ 28ರ ವಿಶ್ವವಾಣಿ ಇ-ಪೇಪರ್ https://epaper.vishwavani.news ನೋಡಿ.

ಯುವಾನ್
ತಂದೆ: ವಚನಾದಿತ್ಯ, ಕಾರ್ಕಳ

ಪೂರ್ವಿ ಜಿ
ತಂದೆ : ಗುರುರಾಜ್ ಹೆಚ್, ಹರಿಹರ

ಗಾನವಿ
ತಂದೆ: ಗೋಪಾಲಕೃಷ್ಣ, ಬೆಂಗಳೂರು


ಅಸ್ಮಿತಾ ರೆಡ್ಡಿ
ತಂದೆ : ಬಸವರಾಜ್ ಡಿ ಕೆ , ಭಟ್ಕಳ

ವಿಸ್ಮಯ ಅಮರಶೆಟ್ಟಿ
ತಂದೆ : ವಿನಯಕುಮಾರ್, ಹಿಡಕಲ್

ಬೆವಿನಾ ಗೌಡ ವಿ
ತಂದೆ : ವಿನಯ್ ಕೆ, ಬೆಂಗಳೂರು

ಬಿಗಿರಿ ಆದ್ವಿಕ್
ತಂದೆ : ರವಿ ಬಿ ಬಿ

ಅರ್ಚನಾ
ತಂದೆ : ಮೌನೇಶ್, ಬೆಂಗಳೂರು


ಅನಿಕಾ ಸೋಮಯಾಜಿ
ತಂದೆ: ಚಂದ್ರ ಸೋಮಯಾಜಿ, ಮಂಗಳೂರು

ಧೃವಂತ ಸಚಿನ ಸೋನಾರ್
ಅಥಣಿ

ಶ್ರವಂತ ಬಂಡೋಳಿ
ತಾಯಿ : ಶರಣಮ್ಮ ಬಂಡೋಳಿ, ಬೆಂಗಳೂರು

ಯಶಸ್ವಿನಿ
ತಂದೆ : ದೀಪಕ್ ಕುಮಾರ್, ತಿಪಟೂರು

ರಿಷಿ ಯರಗುಪ್ಪಿ
ತಂದೆ : ಬಸವರಾಜ , ಗದಗ

ಪ್ರಿಶಾ ಅನುಪ್ ಚೌಗುಲೆ
ಜುಗುಲ್, ಬೆಳಗಾವಿ

ಶ್ರೀನಿವಾಸ
ತಂದೆ : ಮಂಜುನಾಥ , ಮೈಸೂರು

ಪರಿಣಿತ ರಜತ್ ಭಟ್
ತಂದೆ: ರಜತ್ ವಿ ಭಟ್, ಬೆಂಗಳೂರು

ಯೋಹಾನ್ ಎಸ್
ತಂದೆ : ಶಶಿ ಕುಮಾರ್

ಅಂಭೃಣಿ ಕುಲಕರ್ಣಿ
ತಂದೆ : ಸಂಪತ್, ಕೆಂಭಾವಿ

ಪ್ರಣವ್ ರಚಿತ್ ಸೇನಾನಿ
ತಂದೆ : ರಾಘವೇಂದ್ರ, ಅಮೆರಿಕಾ

ಚಿರಂತ
ತಂದೆ : ಚಿರಾಗ್, ಸದಾಶಿವ ನಗರ ಬೆಳಗಾವಿ

ತನುಶ್ರೀ ಮತ್ತು ಆದ್ಯಶ್ರೀ
ತಂದೆ : ರಾಘವೇಂದ್ರ, ಕಾಸರಗೋಡ

ವರ್ಣಿಕಾ ಭಟ್
ತಂದೆ : ವಿವೇಕ ಭಟ್, ಬೆಂಗಳೂರು

ಸಾತ್ವಿಕ್ ಹೆರ್ಲೆ
ತಂದೆ : ದೇವರಾಜ ಹೆರ್ಲೆ, ಮಿಶಿಗನ್, ಯುಎಸ್ಎ

ಪ್ರೀಕ್ಷಾ
ತಂದೆ: ನಾಗರಾಜ ಎನ್, ಶಿವರಾಮ್ ನಗರ ಭದ್ರಾವತಿ

ಶ್ರೇಯಸ್ ಪಿ ದೊಡ್ಡಮನಿ
ತಂದೆ : ಪುನೀತ್ ಕುಮಾರ್, ತಿಪಟೂರು

ಧನ್ವಿತ್
ತಂದೆ : ಯಲ್ಲಪ್ಪ ಅವತಿ, ವಿಜಯಪುರ

ಸಂಬ್ರತ್
ತಂದೆ : ನಿಂಗರಾಜಪ್ಪ ಹೆಚ್ ಬಿ , ಶಿವಮೊಗ್ಗ

ಅನ್ವಿಕ್ ಯರಗಟ್ಟಿ
ತಂದೆ: ಶಿವಕುಮಾರ್ ಸಂಗಪ್ಪ ರಕ್ಕಸಗಿ, ಯರಗಟ್ಟಿ

ಜೀವನ್
ತಾಯಿ : ಸುಮಾ ಟಿ ಆರ್ , ತಿಪಟೂರು

ಸನ್ನಿಧಿ ಭಟ್
ತಂದೆ : ಮಹಾಬಲೇಶ್ವರ ಭಟ್, ಬೆಂಗಳೂರು

ಈಶ್ವರಿ
ತಂದೆ : ನಾಗಯ್ಯ ಸ್ವಾಮಿ , ಬಸವಕಲ್ಯಾಣ್

ಕುಹಾನ್ ಗೌಡ
ತಂದೆ : ಕಾಂತರಾಜು, ತುಮಕೂರು

ಸ್ಮೃತಿ ಪಿ
ತಂದೆ : ಪರಶುರಾಮ ಹೆಚ್, ಊಟಿ